ಶುಕ್ರವಾರ, ಮಾರ್ಚ್ 18, 2022 | ₹ 6.00
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

/prajavani.net @prajavani /prajavani http://bit.ly/Prajavani

ಪುನೀತ್ ಅಭಿಮಾನಿ
ಬೆಂಗಳೂರಿನ ಕಾವೇರಿ ಚಿತ್ರಮಂದಿರಕ್ಕೆ ಗುರುವಾರ ಪುನೀತ್ ರಾಜ್‌ಕುಮಾರ್ ಅಭಿನಯದ ‘ಜೇಮ್ಸ್’ ಸಿನಿಮಾ ನೋಡಲು ಬಂದ ಅಭಿಮಾನಿಯೊಬ್ಬರು ‘ಅಪ್ಪು’ ಭಾವಚಿತ್ರ ಹೊತ್ತುತಂದ ಪರಿ



ನಕಲಿ ಜಾತಿ ಪ್ರಮಾಣಪತ್ರ ತಡೆಗೆ ಆಗ್ರಹ

ಬೆಂಗಳೂರು: ಬುಡ್ಗ ಜಂಗಮ, ಬೇಡ ಜಂಗಮ, ಭೋವಿ ಸಮುದಾಯಗಳ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರ ಪಡೆದು ವಂಚಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಬಿಜೆಪಿಯ ಗೂಳಿಹಟ್ಟಿ ಶೇಖರ್, ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ಜೆಡಿಎಸ್‌ನ ಕೆ. ಅನ್ನದಾನಿ ಸೇರಿದಂತೆ ಹಲವು ಶಾಸಕರು ಗುರುವಾರ ವಿಧಾನಸಭೆಯಲ್ಲಿ ಒತ್ತಾಯಿಸಿದರು.

ಗಮನ ಸೆಳೆಯುವ ಸೂಚನೆ ಮಂಡಿಸಿದ ಗೂಳಿಹಟ್ಟಿ ಶೇಖರ್, 'ಬೀದರ್ ಜಿಲ್ಲೆಯಲ್ಲಿ ಕೋಲಿ ಸಮಾಜ ಸೇರಿದಂತೆ ಇತರ ಜಾತಿಗಳ ಜನರು ಭೋವಿ ಜಾತಿಯ ಹೆಸರಿನಲ್ಲಿ ಪರಿಶಿಷ್ಟ ಜಾತಿಯ ಪ್ರಮಾಣಪತ್ರಗಳನ್ನು ಪಡೆಯುತ್ತಿದ್ದಾರೆ. ಇತರ ಸಮುದಾಯಗಳ ಜನರು ಪರಿಶಿಷ್ಟ ಜಾತಿಯ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ' ಎಂದು ದೂರಿದರು.

'ಎಲ್ಲ ಜಿಲ್ಲೆಗಳಲ್ಲೂ ಈ ಸಮಸ್ಯೆ ಇದೆ. ನಕಲಿ ಜಾತಿ ಪ್ರಮಾಣಪತ್ರ ಪಡೆದವರು ಮತ್ತು ವಿತರಿಸಿದ ಅಧಿಕಾರಿಗಳು ಇಬ್ಬರ ವಿರುದ್ಧವೂ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಪ್ರಿಯಾಂಕ್ ಖರ್ಗೆ ಹಾಗೂ ಅನ್ನದಾನಿ ಆಗ್ರಹಿಸಿದರು.

ಸರ್ಕಾರದ ದುಂದು ವೆಚ್ಚಕ್ಕೆ ಹಲವು ದಾರಿಗಳು: ಕೃಷ್ಣ ಬೈರೇಗೌಡ

ದುಂದು ವೆಚ್ಚದ ನಿಜಾಮ್ ಶೈಲಿ ಐಬಿಗಳು!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮಲ್ಲಿ ಐಬಿ ಮತ್ತು ಸರ್ಕೀಟ್ ಹೌಸ್‌ಗಳು ಹೈದರಾಬಾದ್ ನಿಜಾಮ್ ಶೈಲಿಯದ್ದಾಗಿವೆ. ಇಲ್ಲಿರುವ ಬೆಡ್‌ರೂಮ್, ಬಾತ್ ರೂಂಗಳಲ್ಲಿನ ಐಷಾರಾಮಿತನವೇ ಸರ್ಕಾರದ ದುಂದು ವೆಚ್ಚಕ್ಕೆ ನಿದರ್ಶನಗಳು. ಸರ್ಕಾರಕ್ಕೆ ಮೈಮೇಲೆ ಎಚ್ಚರಿಕೆ ಇಲ್ಲದ ಕಾರಣ ಈ ರೀತಿ ಹಣ ಪೋಲಾಗುತ್ತಿದೆ' ಎಂದು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಹೇಳಿದರು.

ವಿಧಾನಸಭೆಯಲ್ಲಿ ಗುರುವಾರ ಇಲಾಖೆಗಳ ಮೇಲಿನ ಬೇಡಿಕೆಗಳ ಕುರಿತ ಚರ್ಚೆಯ ಆರಂಭಿಸಿದ ಅವರು ಬದ್ಧ ವೆಚ್ಚದಲ್ಲಿ ಉಳಿತಾಯ ಹೇಗೆ ಮಾಡಬೇಕು ಮತ್ತು ಎಲ್ಲೆಲ್ಲಿ ಅನಗತ್ಯ ಖರ್ಚುಗಳು ಆಗುತ್ತಿವೆ ಎಂಬುದನ್ನು ವಿವರಿಸಿದರು.

'ಸರ್ಕೀಟ್‌ಹೌಸ್‌ಗಳು ಬೃಹತ್ ಬಂಗಲೆಗಳಾಗಿರುತ್ತವೆ. ಬಾತ್ ರೂಮ್ 30x40 ಅಷ್ಟು ವಿಶಾಲವಾಗಿರುತ್ತವೆ. ಒಂದು ಬೆಡ್‌ರೂಂಗೆ ಖರ್ಚು ಮಾಡುವ ಹಣದಲ್ಲಿ ಬಡವರಿಗೆ 10 ಮನೆಗಳನ್ನು ಕಟ್ಟಿಸಿಕೊಡಬಹುದು. ಇದು ನಿಜಾಮ್ ಜೀವನ ಶೈಲಿಯನ್ನು ನೆನಪಿಸುತ್ತವೆ. ಮೈಸೂರು ಮಹಾರಾಜರು ಆ ರೀತಿ ಐಷಾರಾಮಿ ಜೀವನ ನಡೆಸಿದವರಲ್ಲ. ಚಿಕ್ಕ ಮತ್ತು ಸರಳ ಪ್ರವಾಸಿ ಮಂದಿರಗಳನ್ನು ಕಟ್ಟಿಸುತ್ತಿದ್ದರು. ಜನರ ಪರವಾದ ಚಿಂತನೆ ಉಳ್ಳವರಾಗಿದ್ದರು' ಎಂದರು.

'ಐಬಿ, ಸರ್ಕೀಟ್ ಹೌಸ್‌ಗಳಿಂದ ಗುತ್ತಿಗೆದಾರರಿಗೆ ಮಾತ್ರ ಅನುಕೂಲ. ಅದನ್ನು ಬಳಸುವ ಸಚಿವರ ಸಂಖ್ಯೆ ಶೇ 10 ಇರಬಹುದು. ಉಳಿದವರು ತಾರಾ ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡುತ್ತಾರೆ. ನಾನು ಸಚಿವನಾಗಿದ್ದಾಗ ಐಬಿಗಳಲ್ಲೇ ವಾಸ್ತವ್ಯ ಹೂಡುತ್ತಿದ್ದೆ' ಎಂದು ಹೇಳಿದರು.

ಆಗ ಮಧ್ಯ ಪ್ರವೇಶಿಸಿ ಮಾತನಾಡಿದ ಉಪಸಭಾಧ್ಯಕ್ಷ ಆನಂದ್ ಮಾಮನಿ, ಚಿತ್ರದುರ್ಗದ ಪ್ರವಾಸಿ ಮಂದಿರ ಕಾಂಪ್ಯಾಕ್ಟ್ ಆಗಿದೆ. ಅದನ್ನು ಮಾದರಿಯಾಗಿ ಪರಿಗಣಿಸಬಹುದು ಎಂದರು.

'ರಾಜ್ಯದಲ್ಲಿ ಮೊದಲ ನಿಜಾಮ್ ಶೈಲಿಯ ಐಬಿ ಆರಂಭಿಸಿದ್ದು ಇಕ್ಬಾಲ್ ಅನ್ಸಾರಿ (ಮಾಜಿ ಸಚಿವ). ಆ ಬಳಿಕ ಎಲ್ಲ ಕಡೆಗೂ ಆ ಚಾಳಿ ಹಬ್ಬಿತು' ಎಂದು ಸಚಿವ ಗೋವಿಂದ ಕಾರಜೋಳ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ, ಹಲವು ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಪ್ರವಾಸಿ ಮಂದಿರಗಳನ್ನು ಕಟ್ಟಿಸಲು ಪ್ರಸ್ತಾವನೆ ತರುತ್ತಿದ್ದಾರೆ. ಗದಗದಲ್ಲಿರುವ ಐಬಿಯ ಕಸ ಗುಡಿಸಲು 10–15 ಜನ ಬೇಕು. ಹುಬ್ಬಳ್ಳಿಯಲ್ಲಿ ಬಾತ್‌ರೂಗೆ ಒಂದು ಕಿ.ಮೀ ವಾಕ್ ಮಾಡಬೇಕು ಎಂದು ಹಾಸ್ಯ ಮಾಡಿದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ಜೆಡಿಎಸ್‌ನ ಡಾ.ಅನ್ನದಾನಿ, 'ನನಗೆ ಊರಲ್ಲೂ ಮನೆಯಿಲ್ಲ ಮಳವಳ್ಳಿಯಲ್ಲೂ ಮನೆ ಇಲ್ಲ. ಚಿಕ್ಕ ಐಬಿಯಲ್ಲೇ ಕುಳಿತು ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ' ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಉಪಸಭಾಧ್ಯಕ್ಷ ಆನಂದ ಮಾಮನಿ, 'ಶಾಸಕರೇ ಅಸಹಾಯಕತೆ ವ್ಯಕ್ತಪಡಿಸಿದರೆ, ಮತದಾರರ ಕಥೆ ಏನು' ಎಂದು ಪ್ರಶ್ನಿಸಿದರು.

'ವಿಶ್ವವಿದ್ಯಾಲಯಗಳು ಪಿಡಬ್ಲ್ಯುಡಿ (ಲೋಕೋಪಯೋಗಿ ಇಲಾಖೆ) ಆಗಿವೆ. ಅಲ್ಲಿ ಶೈಕ್ಷಣಿಕ ವಿಚಾರಕ್ಕಿಂತ ಕಟ್ಟಡಗಳ ನಿರ್ಮಾಣಕ್ಕೆ ಆದ್ಯತೆ ಹೆಚ್ಚಾಗಿದೆ. ಎಷ್ಟೊಂದು ವಿ.ವಿ ಘೋಷಿಸಿದ್ದೀರಿ. ಹಣ ಎಲ್ಲಿಂದ ತರುತ್ತೀರಿ ಎಂದು ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

ಸೆಸ್ ಹೆಚ್ಚಿಸಿ ರಾಜ್ಯಗಳಿಗೆ ಅನ್ಯಾಯ

'ಕೇಂದ್ರ ಸರ್ಕಾರ ತೆರಿಗೆಗಳ ಬದಲಿಗೆ ಸೆಸ್ ಹೆಚ್ಚಳ ಮಾಡುತ್ತಿದೆ. ಇದರಿಂದ ರಾಜ್ಯಗಳಿಗೆ ಅನ್ಯಾಯ ಆಗುತ್ತಿದೆ' ಎಂದು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಆರೋಪಿಸಿದರು.

'15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ಕೇಂದ್ರ ಸರ್ಕಾರಕ್ಕೆ ಸಂದಾಯವಾಗುವ ತೆರಿಗೆ ಆದಾಯದಲ್ಲಿ ಶೇಕಡ 59ರಷ್ಟು ಕೇಂದ್ರಕ್ಕೆ ಮತ್ತು ಶೇ 41ರಷ್ಟು ರಾಜ್ಯಗಳಿಗೆ ಹಂಚಿಕೆ ಆಗಬೇಕು. ತೆರಿಗೆ ವರಮಾನವನ್ನು ಸೆಸ್ ಆಗಿ ಪರಿವರ್ತಿಸಿರುವ ಕಾರಣದಿಂದ ರಾಜ್ಯಗಳು ಹಕ್ಕು ಕಳೆದುಕೊಂಡಿವೆ' ಎಂದರು.

2015ರ ನಂತರ ಕಾರ್ಪೋರೇಟ್ ತೆರಿಗೆ ಹೆಚ್ಚಳ ಕಡಿಮೆಯಾಗಿದೆ. ಜಿಎಸ್‌ಟಿ ಮತ್ತು ಆದಾಯ ತೆರಿಗೆ ಹೆಚ್ಚಿದೆ.



ಕೃಷ್ಣಬೈರೇಗೌಡ

ಬಡವರು ಹೆಚ್ಚು ಸಂಕಷ್ಟಕ್ಕೆ ತುತ್ತಾಗುತ್ತಿದ್ದಾರೆ. ಅಂಬಾನಿ, ಅದಾನಿ ಅವರಂತಹ ಕಾರ್ಪೋರೇಟ್ ಬಲಾಢ್ಯರು ದಿನ್ನಕ್ಕೆ ನೂರಾರು ಕೋಟಿ ರೂಪಾಯಿ ಸಂಪಾದಿಸುತ್ತಿದ್ದಾರೆ ಎಂದು ಹೇಳಿದರು.

'ಮುಂದಿನ ಆರ್ಥಿಕ ವರ್ಷದಲ್ಲಿ ರಾಜ್ಯಕ್ಕೆ ಜಿಎಸ್‌ಟಿ ಪರಿಹಾರ ಮತ್ತು ಕೇಂದ್ರದ ಅನುದಾನಗಳಲ್ಲಿ ಒಟ್ಟು ₹ 45,000 ಕೋಟಿ ಖೋತಾ ಆಗಲಿದೆ. ಐಷಾರಾಮಿ ವಸ್ತುಗಳು ಮತ್ತು ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳಿಗೆ ವಿಧಿಸುವ ಸೆಸ್‌ನಿಂದ ಜಿಎಸ್‌ಟಿ ಪರಿಹಾರ ನೀಡಲಾಗುತ್ತಿದೆ. ಈ ಸೆಸ್ ಸಂಗ್ರಹ ನಿಲ್ಲುವುದಿಲ್ಲ. ಆದ್ದರಿಂದ ಜಿಎಸ್‌ಟಿ ಪರಿಹಾರ ಮುಂದುವರಿಸಲು ಕೇಂದ್ರದ ಮೇಲೆ ಒತ್ತಡ ಹೇರಬೇಕು' ಎಂದು ಆಗ್ರಹಿಸಿದರು.

'ಸಿರಿಧಾನ್ಯ ವರ್ಷಕ್ಕೆ ಸೂಕ್ತ ಯೋಜನೆ'

'2023 ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ' ಎಂದು ವಿಶ್ವಸಂಸ್ಥೆ ಘೋಷಿಸಿದೆ. ಆಗ ಕರ್ನಾಟಕದ ಸಿರಿಧಾನ್ಯಗಳನ್ನು ವಿಶ್ವಮಟ್ಟದಲ್ಲಿ ಪರಿಚಯಿಸಲು ಸೂಕ್ತ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಸಂಬಂಧ ಇಲ್ಲ ಎಂಬಂತೆ ಸರ್ಕಾರ ಕುಳಿತರೆ, ರಾಜ್ಯಕ್ಕೆ ನಷ್ಟವಾಗುತ್ತದೆ ಎಂದು ಕೃಷ್ಣ ಬೈರೇಗೌಡ ಹೇಳಿದರು.

'ಕರ್ನಾಟಕ ಸರ್ಕಾರದ ನಿರಂತರ ಪ್ರಯತ್ನವೂ ಸಿರಿಧಾನ್ಯಗಳ ವರ್ಷ ಎಂದು ಘೋಷಿಸಲು ಕಾರಣ. ನಾನು ಕೃಷಿ ಮಂತ್ರಿ ಆಗಿದ್ದಾಗ, ಕೇಂದ್ರದಲ್ಲಿ ನಿರ್ಮಲಾ ಸೀತಾರಾಮನ್ ಅವರು ವಾಣಿಜ್ಯ ಸಚಿವರಾಗಿದ್ದರು. ಅವರು ಇದಕ್ಕಾಗಿ ಸಾಕಷ್ಟು ಶ್ರಮ ಹಾಕಿದ್ದರು. ರಾಜ್ಯ ಸರ್ಕಾರ ಕಾರ್ಯಕ್ರಮ ರೂಪಿಸಿ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಸಿರಿಧಾನ್ಯ ಪರಿಚಯಿಸಲು ಕೇಂದ್ರಕ್ಕೆ ಮನವಿ ಮಾಡಬೇಕು' ಎಂದು ಸಲಹೆ ನೀಡಿದರು.

ಸುದ್ದಿ 2 ನಿಮಿಷ

2.53 ಲಕ್ಷ ಸರ್ಕಾರಿ ಹುದ್ದೆ ಖಾಲಿ: ಸಿಎಂ ಬೊಮ್ಮಾಯಿ

ಬೆಂಗಳೂರು: 'ಸರ್ಕಾರದ 38 ಪ್ರಧಾನ ಇಲಾಖೆಗಳಿಗೆ 7,68,975 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 5,16,073 ಹುದ್ದೆಗಳು ಭರ್ತಿ ಆಗಿವೆ. 2,52,902 ಹುದ್ದೆಗಳು ಖಾಲಿ ಇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಟಿ.ಶ್ರೀಕಂಠೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಕೋವಿಡ್ ಪರಿಸ್ಥಿತಿ ನಡುವೆಯೂ, ಅಗತ್ಯ ಸೇವೆಗಳನ್ನು ನೀಡುವ ಶಿಕ್ಷಣ, ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ನೇಮಕಾತಿಗೆ ನಿರ್ಬಂಧ ವಿಧಿಸಿಲ್ಲ. 15 ಸಾವಿರ ಸರ್ಕಾರಿ ಶಿಕ್ಷಕರ ನೇಮಕಾತಿಗೆ ಅನುಮತಿ ನೀಡಲಾಗಿದೆ' ಎಂದರು.



'ಎರಡು ಲಕ್ಷ ಹುದ್ದೆ ಖಾಲಿ ಇರುವುದರಿಂದ ಸರ್ಕಾರಿ ನೌಕರರ ಮೇಲೆ ಒತ್ತಡ ಹೆಚ್ಚಾಗಿದೆ. 91 ಸಾವಿರ ಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ. ಈ ಪೈಕಿ, 57 ಸಾವಿರ ನೌಕರರು ಕೌಶಲರಹಿತರು. ನಿರ್ಣಯ ತೆಗೆದುಕೊಳ್ಳುವ ಹುದ್ದೆಗಳಲ್ಲಿ ಶೇ 30ರಷ್ಟು ಮಂದಿ ಪ್ರಭಾರ ಆಗಿ ಕರ್ತವ್ಯ ನಿಭಾಯಿಸುತ್ತಿದ್ದು, ತೊಂದರೆ ಆಗದಂತೆ ಸಹಕರಿಸುತ್ತಿದ್ದಾರೆ' ಎಂದು ತಿಳಿಸಿದರು.

'ಖಾಸಗಿ ಅನುದಾನಿತ ಶಾಲೆಗಳಲ್ಲಿ 2015 ಡಿ. 31ರ ಬಳಿಕ ಶಿಕ್ಷಕ ಹುದ್ದೆಗಳ ಭರ್ತಿ ಪ್ರಕ್ರಿಯೆ ಆಗಿಲ್ಲ' ಎಂದು ಶ್ರೀಕಂಠೇಗೌಡ ಹೇಳಿದರು. ಅದಕ್ಕೆ ಮುಖ್ಯಮಂತ್ರಿ, 'ನೇಮಕಾತಿಗೆ ಹಂತ ಹಂತವಾಗಿ ಅನುಮತಿ ನೀಡಲಾಗುವುದು' ಎಂದು ಪ್ರತಿಕ್ರಿಯಿಸಿದರು.

ಮಾ.27ಕ್ಕೆ ಕೈವಾರ ತಾತಯ್ಯ ಜಯಂತಿ

ಬೆಂಗಳೂರು: ಯೋಗಿ ನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಜ್ಯದಾದ್ಯಂತ ಮಾರ್ಚ್ 27ರಂದು ಆಚರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸಮಾಜ ಸುಧಾರಕರಾಗಿದ್ದ ಕೈವಾರ ತಾತಯ್ಯ ಅವರು ವೇದಾಂತ ಸಾರಾವಳಿ, ತತ್ವಗಳು, ಕೀರ್ತನೆಗಳು, ವಚನಗಳು, ಆಧ್ಯಾತ್ಮಿಕ ಗ್ರಂಥಗಳನ್ನು ಬರೆದು ವರಕವಿಯಾಗಿದ್ದಾರೆ. ಹೀಗಾಗಿ, ಜಯಂತಿ ಆಚರಿಸಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಬಲಿಜ ಸಮುದಾಯದ ಕುಲಗುರುವಾದ ಇವರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಬೇಕು' ಎಂದು ಕರ್ನಾಟಕ ಬಲಿಜ ಮಹಾಸಭಾ ಹಿಂದೆ ಆಗ್ರಹಿಸಿತ್ತು. ಬಿಜೆಪಿ ಸಂಸದ ಪಿ.ಸಿ.ಮೋಹನ್ ನೇತೃತ್ವದಲ್ಲಿ ಮಹಾಸಭಾದ ನಿಯೋಗ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿತ್ತು. ಬಜೆಟ್‌ನಲ್ಲಿಯೂ ಜಯಂತಿ ಆಚರಣೆ ಬಗ್ಗೆ ಘೋಷಿಸಲಾಗಿತ್ತು.

'ಹಿಜಾಬ್' ಪ್ರಸ್ತಾಪ: ಸಬ್ ಕಾ ವಿನಾಶ್

ಪರಿಷತ್‌ನಲ್ಲಿ ಸಲೀಂ ಅಹ್ಮದ್ ಕಿಡಿ • ಕಾಂಗ್ರೆಸ್– ಬಿಜೆಪಿ ನಡುವೆ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಕುರಿತು ಹೈಕೋರ್ಟ್ ನೀಡಿದ ತೀರ್ಪು ವಿಧಾನ ಪರಿಷತ್‌ನಲ್ಲಿ ಗುರುವಾರ ಪ್ರತಿಧ್ವನಿಸಿತು.

ಬಜೆಟ್ ಮೇಲಿನ ಚರ್ಚೆ ನಡುವೆ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ಸಿನ ಸಲೀಂ ಅಹ್ಮದ್, 'ತೀರ್ಪು ಏಕೆ ಈ ರೀತಿ ಬಂತು ಎಂಬ ಬಗ್ಗೆ ಚರ್ಚೆ ನಡೆಯಬೇಕು' ಎಂದು ಆಗ್ರಹಿಸಿದರು. 'ಸರ್ಕಾರದ ಆದೇಶವನ್ನೇ ಕೋರ್ಟ್ ಎತ್ತಿ ಹಿಡಿದಿದೆ' ಎಂದರು.

ಆಗ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ, 'ತೀರ್ಪು ಒಪ್ಪುತ್ತೀರಾ, ವಿರೋಧಿಸುತ್ತೀರಾ?' ಎಂದು ಪ್ರಶ್ನಿಸಿದರು. ವಿರೋಧ ಪಕ್ಷ



ಸಲೀಂ ಅಹ್ಮದ್

ನಾಯಕ ಬಿ.ಕೆ. ಹರಿಪ್ರಸಾದ್ ಇದಕ್ಕೆ, 'ನಮ್ಮ ನಿಲುವು ಸುಪ್ರೀಂ ಕೋರ್ಟ್‌ಗೆ ಹೇಳುತ್ತೇವೆ' ಎಂದರು.

ಸಲೀಂ ಅವರು, 'ಕೋರ್ಟ್ ತೀರ್ಪು ಒಪ್ಪುತ್ತೇವೆ. ಈ ಘಟನೆ ಯಾಕಾಯಿತು? ಕೇಸರಿ ಶಾಲು ಪದ್ಧತಿ ಮೊದಲು ಇತ್ತೇ? ವಿದ್ಯಾರ್ಥಿಗಳು ಪರಸ್ಪರ ಮುಖ ಕೊಟ್ಟು ಮಾತನಾಡದ ಸ್ಥಿತಿ ಇದೆ. ಇದಕ್ಕೆ ಸರ್ಕಾರವೇ ಕಾರಣ' ಎಂದು ಆರೋಪಿಸಿದರು.

ಆಗ ಕೋಟ ಶ್ರೀನಿವಾಸ ಪೂಜಾರಿ, 'ನೆಮ್ಮದಿಯಿಂದ ಇದ್ದ ಮಕ್ಕಳು ಇವರ ಚಿತಾವಣೆಯಿಂದ ಹಿಜಾಬ್ ಧರಿಸಿ ಹೋದರು' ಎಂದು ಕಾಂಗ್ರೆಸ್ ವಿರುದ್ಧ ಆರೋಪಿಸಿದರು. ಈ ವೇಳೆ ಕಾಂಗ್ರೆಸ್ – ಬಿಜೆಪಿ ಸದಸ್ಯರ ನಡುವೆ ವಾಗ್ವಾದ ನಡೆಯಿತು.

'ಕೋಮು ಸಾಮರಸ್ಯಕ್ಕೆ ಧಕ್ಕೆ ಬಂದಿದೆ. ಕಾನೂನು ಸುವ್ಯವಸ್ಥೆ ರಕ್ಷಿಸಲು ಸರ್ಕಾರ ವಿಫಲವಾಗಿದೆ, ಮಕ್ಕಳಲ್ಲಿ ಬೇಧ ಭಾವ ಮೂಡಿದೆ. ವಿದ್ಯಾರ್ಥಿಗಳಲ್ಲಿ ಕಂದಕ ತರುವ ಹಿಂದೂ, ಮುಸ್ಲಿಂ ಯಾವುದೇ ಸಂಘಟನೆ ಇರಲಿ ನಿಷೇಧಿಸಿ' ಎಂದು ಆಗ್ರಹಿಸಿದರು.

'ಶಿವಮೊಗ್ಗದ ಹರ್ಷ ಕೊಲೆಗೆ ₹ 25 ಲಕ್ಷ ಕೊಟ್ಟರು. ಗದಗದಲ್ಲಿ ಮುಸ್ಲಿಂ ವ್ಯಕ್ತಿಯ ಕೊಲೆಯಾದರೆ ಪರಿಹಾರ ಕೊಟ್ಟಿಲ್ಲ. ಏಕೆ ಈ ತಾರತಮ್ಯ. ಇದೇನಾ ಸಬ್ ಕಾ ಸಾಥ್ ಸಬ್ ಕಾ ವಿಕಾಸ್. ಇದು ಸಬ್ ಕಾ ವಿನಾಶ್' ಎಂದು ಕಿಡಿಕಾರಿದರು.

ಈ ವೇಳೆ ಸಚಿವ ಶಂಕರಪಾಟೀಲ ಮುನೇನಕೊಪ್ಪ, 'ಮಹದಾಯಿ ಪರವಾಗಿ ಗೋವಾದಲ್ಲಿ ಕಾಂಗ್ರೆಸ್ ನಿಂತಿದೆ. ಇಲ್ಲಿ ಯಾಕೆ ನೀವು ಹೋರಾಟ ಮಾಡುತ್ತಿಲ್ಲ. ಅದರ ಬಗ್ಗೆ ಕಾಂಗ್ರೆಸ್ ನಿಲುವೇನು' ಎಂದು ಅವರು ಪ್ರಶ್ನಿಸಿದರು.

'ರಾಜ್ಯದ ಪರ ನಮ್ಮ ಕಾಂಗ್ರೆಸ್ ಇದೆ. ಗೋವಾ ಪರವಾಗಿ ಅಲ್ಲಿಯ ಕಾಂಗ್ರೆಸ್ ಇದೆ. ನಮ್ಮ ಯೋಜನೆ ನಮಗೆ ಜಾರಿಯಾಗಲೇ ಬೇಕು. ಇದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ನಮ್ಮ ಹಕ್ಕಿನ ನೀರು ಸಿಗಲೇ ಬೇಕು' ಎಂದು ಸಲೀಂ ಹೇಳಿದರು.

'ಜ್ಯೋತಿ ಸಂಜೀವಿನಿ ವಿಸ್ತರಣೆ ಚಿಂತನೆ'

ಬೆಂಗಳೂರು: 'ಸರ್ಕಾರಿ ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆಯಡಿ ಏಳು ಗಂಭೀರ ಸ್ವರೂಪದ ಕಾಯಿಲೆಗಳಿಗೆ ನಗದು ರಹಿತ ಚಿಕಿತ್ಸೆ ನೀಡಲಾಗುತ್ತಿದ್ದು, ಇತರ ಕಾಯಿಲೆಗಳಿಗೂ ಯೋಜನೆ ವಿಸ್ತರಿಸುವ ಚಿಂತನೆಯಿದೆ. ನಿವೃತ್ತ ನೌಕರರನ್ನು ಯೋಜನೆಗೆ ಒಳಪಡಿಸುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಪರಿಷತ್‌ನಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, '2015ರಿಂದ ಈ ಯೋಜನೆ ಜಾರಿಯಲ್ಲಿದೆ' ಎಂದರು.'ಯೋಜನೆಯನ್ನು ನಿವೃತ್ತ ಸರ್ಕಾರಿ ನೌಕರರಿಗೂ ವಿಸ್ತರಿಸಲು ಭಾರತಿ ಶೆಟ್ಟಿ ಕೋರಿದರು.

ವಿಧಾನಸಭೆಯಲ್ಲಿ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿಕೆ


'ಹೋಬಳಿಗೊಂದು ಕರ್ನಾಟಕ ಪಬ್ಲಿಕ್ ಶಾಲೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹಂತ ಹಂತವಾಗಿ ಪ್ರತಿ ಹೋಬಳಿಗೆ ಒಂದು ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ಆರಂಭಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಕೆ.ಎಂ.ಶಿವಲಿಂಗೇಗೌಡ ಅವರ ಪ್ರಶ್ನೆಗೆ ಅವರು ಉತ್ತರಿಸಿದರು.

2019–20ರ ಸಾಲಿನಲ್ಲಿ 100 ಸೇರಿ 276 ಪಬ್ಲಿಕ್ ಶಾಲೆಗಳನ್ನು ತೆರೆಯಲಾಗಿದೆ. ಅಲ್ಲದೆ, ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಮಟ್ಟವನ್ನು



ಬಿ.ಸಿ.ನಾಗೇಶ್

ಉತ್ತಮಪಡಿಸಲು ಹೋಬಳಿ ಮಟ್ಟದಲ್ಲಿ ಮೂಲಭೂತ ಸೌಕರ್ಯವಿರುವ ಶಾಲೆಗಳನ್ನು ಮಾದರಿ ಶಾಲೆಗಳಾಗಿ ಉನ್ನತೀಕರಿಸಲಾಗುವುದು ಎಂದು ಅವರು ಹೇಳಿದರು.

ಕರ್ನಾಟಕಪಬ್ಲಿಕ್‌ಶಾಲೆಯಲ್ಲಿಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಶಾಲೆಗಳಿರಲಿವೆ. ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಕರ ಕೊರತೆ ಇದ್ದು, ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡುವ ಜವಾಬ್ದಾರಿ ಹಾಗೂ ಮೇಲ್ವಿಚಾರಣೆಯ ಪಾತ್ರವನ್ನು ಶಿಕ್ಷಣ ಇಲಾಖೆಯೇ ನಿರ್ವಹಿಸುತ್ತದೆ ಎಂದರು.

ಹೊಸ ಐಟಿಐ ಕಾಲೇಜು ಇಲ್ಲ: ರಾಜ್ಯದಲ್ಲಿ 270 ಸರ್ಕಾರಿ ಮತ್ತು 178 ಅನುದಾನಿತ ಐಟಿಐಗಳಿದ್ದು, ಸಾಮರ್ಥ್ಯಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳು ಬರುತ್ತಿಲ್ಲ. ಸಾಕಷ್ಟು ಸೀಟುಗಳು ಖಾಲಿ ಉಳಿದಿರುವುದರಿಂದ ಹೊಸದಾಗಿ ಐಟಿಐಗಳನ್ನು ಆರಂಭಿಸುವುದಿಲ್ಲ ಎಂದು ಉನ್ನತ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಕಾಂಗ್ರೆಸ್‌ನ ಅಖಂಡ ಶ್ರೀನಿವಾಸಮೂರ್ತಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪುಲಿಕೇಶಿ ನಗರದಲ್ಲಿ ಐಟಿಐ ಸ್ಥಾಪನೆಗೆ ಎರಡು ಎಕರೆ ಜಮೀನು ಕೊಟ್ಟರೆ ಪರಿಶೀಲಿಸಲಾಗುವುದು.

ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ 'ಡಿ' ಗ್ರೂಪ್ ಹುದ್ದೆಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಒಂದು ಸಾವಿರ ಮಂದಿಯನ್ನು ನೇಮಕ ಮಾಡಿಕೊಳ್ಳಲಾಗುವುದು. ಉಳಿದ ಖಾಲಿ ಹುದ್ದೆಗಳಿಗೆ ಸರ್ಕಾರವೇ ನೇಮಕ ಮಾಡಿಕೊಳ್ಳಲಿದೆ ಎಂದು ಕಾಂಗ್ರೆಸ್‌ನ ಶಿವಾನಂದ ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದರು.

ಅಲ್ಲದೆ, ಈಗಾಗಲೇ 1,250 ಉಪನ್ಯಾಸಕರ ಹುದ್ದೆಗಳಿಗೆ ನೇಮಕಾತಿ ಆರಂಭವಾಗಿದೆ. 12 ಸಾವಿರ ಅತಿಥಿ ಉಪನ್ಯಾಸಕರ ನೇಮಕ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗಿರುವ ಶುಲ್ಕವನ್ನು ಆಯಾ ಕಾಲೇಜುಗಳ ಬ್ಯಾಂಕ್ ಖಾತೆಗಳಲ್ಲಿ ಜಮೆ ಮಾಡಲು ತೀರ್ಮಾನಿಸಲಾಗಿದೆ ಎಂದರು.

ಕೈಗಾರಿಕೆಗೆ ಭೂಮಿ: ಹೆಚ್ಚು ಪರಿಹಾರ ಮಸೂದೆ ಮಂಡನೆ

ಬೆಂಗಳೂರು: ಕೈಗಾರಿಕಾ ಉದ್ದೇಶಕ್ಕಾಗಿ 'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ'ಗೆ ಭೂಮಿ ಬಿಟ್ಟು ಕೊಡುವವರಿಗೆ ಹೆಚ್ಚಿನ ಪರಿಹಾರ ನೀಡುವ ಉದ್ದೇಶದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ಮಸೂದೆಯನ್ನು ಗುರುವಾರ ವಿಧಾನಸಭೆಯಲ್ಲಿ ಮಂಡಿಸಲಾಯಿತು.

ನ್ಯಾಯಯುತ ಪರಿಹಾರ ಹಕ್ಕು, ಭೂಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಕಾಯ್ದೆ 2013 ಅನ್ವಯ ಭೂಮಾಲೀಕರಿಗೆ 'ಸೂಕ್ತ ಪರಿಹಾರ' ನೀಡಿದರೆ ಅನಗತ್ಯ ವ್ಯಾಜ್ಯ ತಪ್ಪಿಸಬಹುದು. ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳ್ಳುತ್ತದೆ. ನ್ಯಾಯಾಲಯದ ಮೊರೆ ಹೋಗುವವರ ಸಂಖ್ಯೆಯೂ ಕಡಿಮೆ ಆಗುತ್ತದೆ. ಮಸೂದೆಯನ್ನು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಮಂಡಿಸಿದರು.



ಸಾಮರಸ್ಯದ ಕೊಂಡೋತ್ಸವ

ಚಾಮರಾಜನಗರ ಜಿಲ್ಲೆಯ ಗಡಿಭಾಗ, ಕನ್ನಡಿಗರೇ ಹೆಚ್ಚಿನ ಸಂಖ್ಯೆಯಲ್ಲಿರುವ ತಮಿಳುನಾಡಿನ ತಾಳವಾಡಿಯಲ್ಲಿ ಅಪಾರ ಭಕ್ತರ ಸಮ್ಮುಖದಲ್ಲಿ ಗುರುವಾರ ಮಾರಮ್ಮ ದೇವಿಯ ಕೊಂಡೋತ್ಸವ ನಡೆಯಿತು. ಮಾರಮ್ಮ ದೇಗುಲ ಮಸೀದಿ ಪಕ್ಕದಲ್ಲೇ ಇದ್ದು, ಇಲ್ಲಿಯೇ ಕೊಂಡೋತ್ಸವ ನಡೆಯುವುದು ವಿಶೇಷ. ಹಿಂದೂಗಳು ಮಾತ್ರವಲ್ಲದೆ ಮುಸ್ಲಿಮರು ಕೂಡ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ

– ಪ್ರಜಾವಾಣಿ ಚಿತ್ರ/ಸಿ.ಆರ್.ವೆಂಕಟರಾಮು

ಎಸ್‌.ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಧರಣಿ

ಬೆಂಗಳೂರು: ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಶೇಕಡ 3ರಿಂದ ಶೇ 7.5ಕ್ಕೆ ಹೆಚ್ಚಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ವಿಧಾನಸಭೆಯಲ್ಲಿ ಗುರುವಾರ ಧರಣಿ ನಡೆಸಿದರು.

ಗಮನ ಸೆಳೆಯುವ ಸೂಚನೆ ಮಂಡಿಸಿದ ಕಾಂಗ್ರೆಸ್‌ನ ಟಿ.ರಘುಮೂರ್ತಿ, ಈ.ತುಕಾರಾಂ, ಪ್ರಿಯಾಂಕ್ ಖರ್ಗೆ, ಅನಿಲ್ ಚಿಕ್ಕಮಾದು, ಜೆಡಿಎಸ್‌ನ ರಾಜಾ ವೆಂಕಟಪ್ಪ ನಾಯಕ, ಬಿಜೆಪಿಯ ಸೋಮಲಿಂಗಪ್ಪ, ಮೀಸಲಾತಿ ಪ್ರಮಾಣ ಹೆಚ್ಚಿಸಿ ತಕ್ಷಣ ಆದೇಶ ಹೊರಡಿಸುವಂತೆ ಆಗ್ರಹಿಸಿದರು.

'ಈ ವಿಷಯದಲ್ಲಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ನೇತೃತ್ವದ ಆಯೋಗ ವರದಿ ನೀಡಿದೆ. ಪುನಃ ಅದನ್ನು ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ನೇತೃತ್ವದ ಸಮಿತಿಯ ಪರಾಮರ್ಶೆಗೆ ವರ್ಗಾಯಿಸಿರುವುದು ಸರಿಯಲ್ಲ' ಎಂದು ಈ ಎಲ್ಲ ಶಾಸಕರು ಅಭಿಪ್ರಾಯಪಟ್ಟರು.

ಉತ್ತರ ನೀಡಿದ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು, 'ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿ ತ್ವರಿತವಾಗಿ ವರದಿ ನೀಡಲು ಸುಭಾಷ್ ಅಡಿ ನೇತೃತ್ವದ ಸಮಿತಿಗೆ ಮನವಿ ಮಾಡುತ್ತೇನೆ' ಎಂದು ತಿಳಿಸಿದರು.

'ಈ ವಿಚಾರದಲ್ಲಿ ಆಡಿದ ಮಾತಿಗೆ ನಾನು ಬದ್ಧನಾಗಿದ್ದೇನೆ. ಅಡ್ವೊಕೇಟ್ ಜನರಲ್ ಅವರಿಂದ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳುತ್ತೇನೆ' ಎಂದು ಭರವಸೆ ನೀಡಿದರು.ಸಚಿವರ ಉತ್ತರದಿಂದ ತೃಪ್ತರಾಗದ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರು ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು.

ಪರಿಷತ್‌ನಲ್ಲಿ ಸರ್ಕಾರದ ವಿರುದ್ಧ ಪಿ.ಆರ್. ರಮೇಶ್ ಟೀಕೆ

'ಆರ್ಥಿಕ ಹಿಂಜರಿತ ಮರೆಮಾಚುತ್ತಿರುವ ಬಿಜೆಪಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕ ಹಿಂಜರಿತ ಇದ್ದರೂ ಭಾವನಾತ್ಮಕ ವಿಷಯಗಳಿಂದ ಮರೆಮಾಚುವ ಪ್ರಯತ್ನವನ್ನು ಬಿಜೆಪಿ ಸರ್ಕಾರ ಮಾಡುತ್ತಿದೆ' ಎಂದು ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಟೀಕಿಸಿದರು.



ಪಿ.ಆರ್. ರಮೇಶ್

ಬಜೆಟ್ ಕುರಿತ ಚರ್ಚೆಯಲ್ಲಿ ಅವರು, 'ಬಜೆಟ್ ಸಂಪೂರ್ಣವಾಗಿ ಅಶಿಸ್ತಿನಿಂದ ಕೂಡಿದೆ. ಹಣಕಾಸಿನ ವ್ಯವಸ್ಥೆ ನಿರ್ವಹಿಸಲಾಗದ ಪರಿಸ್ಥಿತಿಯಿದೆ. ಕೇಂದ್ರದಿಂದಲೂ ರಾಜ್ಯಕ್ಕೆ ದೊರೆಯಬೇಕಾದ ಪಾಲು ದೊರೆಯುತ್ತಿಲ್ಲ' ಎಂದು ದೂರಿದರು.

'ಗೋವುಗಳ ರಕ್ಷಣೆ ಹೆಸರಿನಲ್ಲಿ ಮತ ಪಡೆಯುತ್ತೀರಿ. ಆದರೆ, ಬೆಂಗಳೂರಿನಲ್ಲೇ ಉತ್ತಮ ಗುಣಮಟ್ಟದ ಗೋಮಾಂಸ ಎಲ್ಲೆಡೆ ಸಿಗುತ್ತಿದೆ. ಹಾಗಾದರೆ, ಸರ್ಕಾರ ಏನು ಮಾಡುತ್ತಿದೆ' ಎಂದು ಪ್ರಶ್ನಿಸಿದರು.

'ಅಧಿಕಾರಿಗಳ ಮನೆಯ ಪೈಪ್, ತೊಟ್ಟಿಗಳಲ್ಲಿ ದುಡ್ಡು ಬರುತ್ತಿದೆ. ಇಂತಹ ಭ್ರಷ್ಟ ವ್ಯವಸ್ಥೆಗೆ ಯಾರು ಕಾರಣ? ನಿರುದ್ಯೋಗವೂ ಹೆಚ್ಚಾಗಿದೆ. ಯುವಕರಿಗೆ ಉದ್ಯೋಗಾವಕಾಶ ಇಲ್ಲದಂತಾಗಿದೆ. ಇಡೀ ಬಜೆಟ್ ಕನ್ನಡಿಯಲ್ಲಿರುವ ಗಂಟು' ಎಂದು ಟೀಕಿಸಿದರು.

'ಒಬಿಸಿಗೆ ಮೀಸಲಾತಿ ಬಳಿಕವೇ ಚುನಾವಣೆ'

'ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಿದ ಬಳಿಕವೇ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲಾಗುವುದು' ಎಂದು ಕಾನೂನು ಸಚಿವ ಮಾಧುಸ್ವಾಮಿ ತಿಳಿಸಿದರು.

'ಸರ್ಕಾರ ಹಿಂದುಳಿದ ವರ್ಗಗಳ ಪರವಾಗಿಯೇ ಇದೆ. ಮೀಸಲಾತಿ ಕಲ್ಪಿಸುವ ಬಗ್ಗೆ ಈಗಾಗಲೇ ಎರಡು–ಮೂರು ಬಾರಿ ಸಭೆಗಳನ್ನು ಮಾಡಲಾಗಿದೆ' ಎಂದು ವಿಧಾನಪರಿಷತ್‌ನಲ್ಲಿ ತಿಳಿಸಿದರು.

ಸದನದಲ್ಲಿ ಕೇಳಿದ್ದು...

- ಜಿಎಸ್‌ಟಿ ನಮ್ಮ ಕೂಸು. ಈ ಬಗ್ಗೆ ಹೆಮ್ಮೆ ಇದೆ. ಆದರೆ, ಇದನ್ನು ಜಾರಿಗೊಳಿಸಿದ ರೀತಿ ವಿನಾಶಕಾರಿಯಾಗಿದೆ
  ಬಿ.ಕೆ. ಹರಿಪ್ರಸಾದ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ
- ಕಲ್ಯಾಣ ಕರ್ನಾಟಕದಲ್ಲಿ 34 ಸಾವಿರ ಹುದ್ದೆಗಳು ಖಾಲಿ ಉಳಿದಿವೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳಬೇಕು.
  ಅರವಿಂದ ಕುಮಾರ ಅರಳಿ, ಕಾಂಗ್ರೆಸ್ ಸದಸ್ಯ
- ಸ್ತ್ರೀಶಕ್ತಿ ಸಂಘಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು. ಈ ಸಂಘಗಳು ತಯಾರಿಸಿದ ವಸ್ತುಗಳನ್ನೇ ಸರ್ಕಾರ ಖರೀದಿಸಬೇಕು.
  ಭಾರತಿ ಶೆಟ್ಟಿ, ಬಿಜೆಪಿ ಸದಸ್ಯೆ

ಸಿದ್ದರಾಮಯ್ಯಗೆ 'ರಾಮಮನೋಹರ ಲೋಹಿಯಾ ಪ್ರಶಸ್ತಿ'

ಬೆಂಗಳೂರು: ಭಾರತ ಯಾತ್ರಾ ಕೇಂದ್ರ ನೀಡುವ 'ಡಾ.ರಾಮಮನೋಹರ ಲೋಹಿಯಾ ಪ್ರಶಸ್ತಿ'ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹ 25 ಸಾವಿರ ನಗದು, ಫಲಕ ಒಳಗೊಂಡಿದೆ.



ಬಿ.ಎಲ್.ಶಂಕರ್, ಟಿ.ಎನ್. ಸೀತಾರಾಮ್ ಮತ್ತು ಬಿ.ಆರ್. ಟೀಲ ಅವರಿದ್ದ ಸಮಿತಿ ಈ ಆಯ್ಕೆ ಮಾಡಿದೆ. ಇದೇ 23ರಂದು ಸಂಜೆ 5.30ಕ್ಕೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.

ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ (ಜೆಎನ್‌ಯು) ಪ್ರಾಧ್ಯಾಪಕ ಪ್ರೊ.ಆನಂದ ಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಲೇಖಕಿ ಡಾ. ವಸುಂಧರಾ ಭೂಪತಿ, ಡಾ.ನಾಡಗೌಡ ಅವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕೇಂದ್ರದ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜಮೂರ್ತಿ ತಿಳಿಸಿದ್ದಾರೆ.

18 ಅಧಿಕಾರಿಗಳ ವಿರುದ್ಧ ಎಸಿಬಿ ದಾಳಿ • ದಾಖಲೆಗಳ ಪರಿಶೀಲನೆ ಅಂತ್ಯ

ನಿರ್ಮಿತಿ ಅಧಿಕಾರಿ: ಹತ್ತು ಪಟ್ಟು ಅಕ್ರಮ ಆಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಗೋಪಿನಾಥ ಸಾ. ಮಾಲಜಿ ಬಳಿ ಅಧಿಕೃತ ಆದಾಯದ ಹತ್ತು ಪಟ್ಟು ಅಕ್ರಮ ಆಸ್ತಿ ಇರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪತ್ತೆಮಾಡಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ 18 ಅಧಿಕಾರಿಗಳ ವಿರುದ್ಧದ ತನಿಖೆ ಆರಂಭಿಸಿರುವ ಎಸಿಬಿ, ರಾಜ್ಯದ 20 ಜಿಲ್ಲೆಗಳ 77 ಸ್ಥಳಗಳಲ್ಲಿ ಬುಧವಾರ ಶೋಧ ನಡೆಸಿತ್ತು.

ದಾಳಿ ವೇಳೆ ವಶಕ್ಕೆ ಪಡೆದಿರುವ ಚಿನ್ನಾಭರಣ, ನಗದು, ಬ್ಯಾಂಕ್ ದಾಖಲೆಗಳು ಮತ್ತು ಸ್ಥಿರಾಸ್ತಿಗಳ ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳ ಪ್ರಾಥಮಿಕ ಪರಿಶೀಲನೆ ಗುರುವಾರ ಅಂತ್ಯಗೊಂಡಿದೆ. ಆರೋಪಿಗಳ ಅಧಿಕೃತ ಆದಾಯ, ವೆಚ್ಚ, ಅವರ ಬಳಿ ಪತ್ತೆಯಾಗಿರುವ ಆಸ್ತಿಗಳ ಮೌಲ್ಯವನ್ನು ಲೆಕ್ಕ ಹಾಕಿರುವ ತನಿಖಾ ಸಂಸ್ಥೆ, ಶೇಕಡಾವಾರು ಅಕ್ರಮ ಆಸ್ತಿಯ ಪ್ರಮಾಣ ಗುರುತಿಸಿದೆ.

ಆರೋಪಿ ಅಧಿಕಾರಿ	ಅಕ್ರಮ ಆಸ್ತಿಯ ಶೇಕಡಾವಾರು ಪ್ರಮಾಣ
ಕೈಗಾರಿಕಾ ಇಲಾಖೆ ಹೆಚ್ಚುವರಿ ನಿರ್ದೇಶಕ ಬಿ.ಕೆ. ಶಿವಕುಮಾರ್	300
ಹೆಚ್ಚುವರಿ ಸಾರಿಗೆ ಆಯುಕ್ತ ಜೆ.ಜ್ಞಾನೇಂದ್ರಕುಮಾರ್	121
ಬಿಡಿಎ ನಗರ ಯೋಜನಾ ವಿಭಾಗದ ಉಪ ನಿರ್ದೇಶಕ ವಿ. ರಾಕೇಶ್ ಕುಮಾರ್	131
ಯಾದಗಿರಿಯ ವಲಯ ಅರಣ್ಯಾಧಿಕಾರಿ ರಮೇಶ್ ಕನಕಟ್ಟೆ	382.01
ಕೆಎನ್‌ಎನ್‌ಎಲ್ ಕೌಜಲಗಿ ವಿಭಾಗ ಇಇ ಬಸವರಾಜ ಶೇಖರ್ ರೆಡ್ಡಿ ಪಾಟೀಲ್	174.47
ಗದಗ ಜಿಲ್ಲಾಧಿಕಾರಿ ಕಚೇರಿ ಶಿರಸ್ತೇದಾರ್ ಬಸವಕುಮಾರ್ ಎಸ್. ಅಣ್ಣಿಗೇರಿ	190
ವಿಜಯಪುರ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಗೋಪಿನಾಥ ಸಾ. ಮಾಲಜಿ	929
ಬಾದಾಮಿ ವಲಯ ಅರಣ್ಯಾಧಿಕಾರಿ ಶಿವಾನಂದ ಶರಣಪ್ಪ ಕೇದಗಿ	325
ಮೈಸೂರಿನ ವಿಜಯನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಎಚ್.ಎನ್. ಬಾಲಕೃಷ್ಣ ಗೌಡ	129.52
ಗುಂಡ್ಲುಪೇಟೆ ಅಬಕಾರಿ ಇನ್‌ಸ್ಪೆಕ್ಟರ್ ಚಲುವರಾಜು	256
ರಾಮನಗರ ಉಪ ವಿಭಾಗಾಧಿಕಾರಿ ಸಿ. ಮಂಜುನಾಥ್	216.25
ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಎ. ಶ್ರೀನಿವಾಸ	220.82
ಮಂಗಳೂರಿನ ಮೆಸ್ಕಾಂ ಎಇಇ ದಯಾಳು ಸುಂದರ್ ರಾಜ್	55.10
ಚಿಕ್ಕಮಗಳೂರು ಪಿಡಬ್ಲ್ಯುಡಿ ಎಇಇ ಬಿ.ಎಚ್. ಗವಿರಂಗಪ್ಪ	81
ರಾಷ್ಟ್ರೀಯ ಹೆದ್ದಾರಿ ವಲಯದ ಯಲಬುರ್ಗ ಉಪ ವಿಭಾಗದ ಸಹಾಯಕ ಎಂಜಿನಿಯರ್ ಗಿರೀಶ್	200.14
ಕೆಬಿಜೆಎನ್‌ಎಲ್ ದೇವದುರ್ಗ ಉಪ ವಿಭಾಗದ ಎಇಇ ಅಶೋಕ ರೆಡ್ಡಿ ಪಾಟೀಲ್	164.19
ದಾವಣಗೆರೆ ಜಿಲ್ಲಾ ಪರಿಸರ ಅಧಿಕಾರಿ ಮಹೇಶ್ವರಪ್ಪ ಎಂ.ಎಸ್.	198.15
ಹಾವೇರಿ ಎಪಿಎಂಸಿ ಸಹಾಯಕ ಎಂಜಿನಿಯರ್ ಕೃಷ್ಣ ಕೇಶಪ್ಪ ಆರೇರ	184.71

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

'ಓಬವ್ವ ಸ್ಮಾರಕ ನಿರ್ಮಾಣಕ್ಕೆ ಸ್ಥಳ, ಅನುದಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದಲ್ಲಿ ಒನಕೆ ಓಬವ್ವ ಸ್ಮಾರಕ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮತ್ತು ಸ್ಥಳ ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಭರವಸೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಹಮ್ಮಿಕೊಂಡ ಒನಕೆ ಓಬವ್ವ ಜಯಂತಿ ಉದ್ಘಾಟಿಸಿ, ಮಾತನಾಡಿದರು. 'ಓಬವ್ವ ಹೆಸರಿನಲ್ಲಿ ರಾಜ್ಯದಾದ್ಯಂತ ವಸತಿ ಶಾಲೆ ಪ್ರಾರಂಭಿಸಲು ಸರ್ಕಾರ ಕ್ರಮವಹಿಸಲಿದೆ' ಎಂದು ತಿಳಿಸಿದರು.

'ಹೆಣ್ಣು ಮಕ್ಕಳಿಗೆ ಓಬವ್ವ ಪ್ರೇರಣೆಯಾಗಿದ್ದು, ವಸತಿ ಶಾಲೆಯ ಹೆಣ್ಣು ಮಕ್ಕಳಿಗೆ ಆತ್ಮರಕ್ಷಣೆ ಬಗ್ಗೆ ತರಬೇತಿ ನೀಡಲಾಗುತ್ತದೆ. ಬಜೆಟ್‌ನಲ್ಲಿ ಅನುದಾನವನ್ನೂ ಘೋಷಿಸಲಾಗಿದೆ' ಎಂದರು.

ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ನೆಹರೂ ಓಲೇಕಾರ, ಸಭಾಪತಿ ಬಸವರಾಜ ಹೊರಟ್ಟಿ, ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಪರಿಷತ್ಸ ದಸ್ಯ ರಮೇಶ್ ಗೌಡ ಇದ್ದರು.



ಕಾರ್ಯಕ್ರಮಕ್ಕೆ ಬಂದ ನೆಹರೂ ಓಲೇಕಾರ, ಬಸವರಾಜ ಬೊಮ್ಮಾಯಿ ಮತ್ತು ರಮೇಶ್ ಗೌಡ ಅವರನ್ನು ಓಬವ್ವ ವೇಷಧಾರಿಗಳು ಮೆರವಣಿಗೆಯಲ್ಲಿ ಕರೆದುಕೊಂಡು ಹೋದರು –ಪ್ರಜಾವಾಣಿ ಚಿತ್ರ

ಶುಕ್ರವಾರ, ಮಾರ್ಚ್ 18, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೋಳಿ ಸಂಭ್ರಮ
ಕೋಲ್ಕತ್ತದಲ್ಲಿ ಹೋಳಿ ಹಬ್ಬದ ಅಂಗವಾಗಿ ಯುವತಿಯರು ಗುರುವಾರ ಪರಸ್ಪರ ಬಣ್ಣಹಚ್ಚಿಕೊಂಡು ಸಂಭ್ರಮಿಸಿದರು



ಜೇಮ್ಸ್ ಬಿಡುಗಡೆ: ಅಪ್ಪು ಅಗಲಿಕೆ ಬಳಿಕ ಮೊದಲ ಜನ್ಮದಿನ ● ರಾಜ್ಯದಲ್ಲಿ ಉಕ್ಕಿ ಹರಿದ ಅಭಿಮಾನ

ಚಿತ್ರಮಂದಿರಗಳ ಮುಂದೆ 'ಜಾತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅಭಿನಯದ ಚಿತ್ರ 'ಜೇಮ್ಸ್'ಅನ್ನು ಅಭಿಮಾನಿಗಳು ಗುರುವಾರ ಭಾರಿ ಸಂಭ್ರಮದಿಂದ ಸ್ವಾಗತಿಸಿದರು. ಮೊದಲ ದಿನ ಬಿಡುಗಡೆಯಾದ ಎಲ್ಲ ಚಿತ್ರಮಂದಿರಗಳಲ್ಲೂ ಚಿತ್ರ 'ಹೌಸ್‌ಫುಲ್' ಪ್ರದರ್ಶನ ಕಂಡಿತು.

ಪುನೀತ್ ಅವರ ಜನ್ಮದಿನದಂದೇ ಈ ಚಿತ್ರ ಬಿಡುಗಡೆಯಾಗಿರುವುದು ಅವರ ನೆನಪನ್ನು ಇಮ್ಮಡಿಗೊಳಿಸಿತು.

ರಾಜ್ಯದ 450 ಚಿತ್ರಮಂದಿರಗಳು ಹಾಗೂ ವಿಶ್ವವ್ಯಾಪಿ ಸುಮಾರು 4 ಸಾವಿರಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ 'ಜೇಮ್ಸ್' ಬಿಡುಗಡೆಯಾಗಿ ಅದ್ದೂರಿ ಪ್ರದರ್ಶನ ಕಂಡಿತು. ಮುಂಜಾನೆಯ (ಬೆಳಿಗ್ಗೆ 6) ಪ್ರದರ್ಶನಕ್ಕೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರೇಕ್ಷಕರು ಭರ್ತಿಯಾಗಿದ್ದರು. ಟಿಕೆಟ್ ದರವೂ ₹ 1,200ರಿಂದ ₹1500ರವರೆಗೂ ಇತ್ತು. ಏಕಪರದೆಯ ಚಿತ್ರಮಂದಿರಗಳಲ್ಲಿ ಟಿಕೆಟ್ ದರ ₹ 260 ರವರೆಗೆ ಇತ್ತು. ಬೆಂಗಳೂರಿನ ಮಾಗಡಿ ರಸ್ತೆಯ ವೀರೇಶ್ ಚಿತ್ರಮಂದಿರದ ಆವರಣದಲ್ಲಿ ಅಕ್ಷರಶಃ ಅಭಿಮಾನಿಗಳ ಜಾತ್ರೆಯೇ ಸೇರಿತ್ತು. ಅಪ್ಪು ಕಟೌಟ್ ಮುಂಭಾಗ ತಮಟೆ ಬಾರಿಸಿ, ಕುಣಿದು ಸಂಭ್ರಮಿಸಿದರು. ಕೆಲವೆಡೆ ಪಟದ ಕುಣಿತ, ಜನಪದ ಕುಣಿತಗಳೂ ನಡೆದವು.

ಬೆಂಗಳೂರಿನ ಶ್ರೀನಗರ ಬಸ್ ನಿಲ್ದಾಣದ ಮುಂಭಾಗ ತರಕಾರಿ ವ್ಯಾಪಾರಿ ಕೃಷ್ಣ ಎಂಬುವವರು ಒಂದು ಟೆಂಪೊ ತುಂಬಾ ಹಲವು ಬಗೆಯ ಸೊಪ್ಪನ್ನು ಜನರಿಗೆ ಉಚಿತವಾಗಿ ವಿತರಿಸಿದರು. 'ಪುನೀತ್ ಹುಟ್ಟುಹಬ್ಬದ ಅಂಗವಾಗಿ ನಮ್ಮದೊಂದು ಕಿರು ಕಾಣಿಕೆ' ಎಂದು ಅವರು ಹೇಳಿದರು.

ಹಾಡಿನ ಗೌರವ: ಪಿಆರ್‌ಕೆ ಆಡಿಯೊ ಕಂಪನಿ ಪುನೀತ್ ಹುಟ್ಟುಹಬ್ಬದ ಅಂಗವಾಗಿ 'ರಾಜ ಬಂದಾನ...' ಹೆಸರಿನ ಹಾಡಿನ ಆಲ್ಬಂ ಬಿಡುಗಡೆ ಮಾಡಿ ಗೌರವ ಸಲ್ಲಿಸಿತು.

ಆದರ್ಶ ಮೆರೆದ ಅಭಿಮಾನಿಗಳು: ಅಪ್ಪು ಆದರ್ಶವನ್ನು ಸ್ಮರಿಸುವ ಉದ್ದೇಶದಿಂದ ಚಿತ್ರಮಂದಿರಗಳ ಆವರಣದಲ್ಲೇ ರಕ್ತದಾನ, ನೇತ್ರದಾನಕ್ಕೆ ನೋಂದಣಿ ಮಾಡಲಾಯಿತು. ಹುಬ್ಬಳ್ಳಿಯಲ್ಲಿ ಜೈ ರಾಜವಂಶ ಅಭಿಮಾನಿ ಬಳಗದ ಆಶ್ರಯದಲ್ಲಿ ಎಂ.ಎಂ.ಜೋಶಿ ನೇತ್ರ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಸುಮಾರು ನೂರು ಹಿರಿಯ ನಾಗರಿಕರಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಅವರಿಗೆ ಪುನೀತ್ ಭಾವಚಿತ್ರದ ಜೊತೆ ಸಸಿಯನ್ನೂ ವಿತರಿಸಲಾಯಿತು. ಪ್ರಮುಖ ಚಿತ್ರಮಂದಿರಗಳ ಮುಂಭಾಗ ಬಾಡೂಟದ ಸಮಾರಾಧನೆ ಇತ್ತು. ರಾಜ್ಯದ ಪ್ರಮುಖ ನಗರಗಳ ಹಾದಿ–ಬೀದಿಗಳಲ್ಲಿ, ವೃತ್ತಗಳಲ್ಲಿ ಅನ್ನದಾನದ ಏರ್ಪಾಡು ಮಾಡಲಾಗಿತ್ತು. ಕೆಲವೆಡೆ ಅಭಿಮಾನಿಗಳು ಕೇಕ್ ಕತ್ತರಿಸಿ ಸಂಭ್ರಮಿಸಿದರು. ಎಲ್‌ಇಡಿ ಪರದೆಯ ಮೇಲೆ ಪುನೀತ್ ಚಿತ್ರಗಳ ಹಾಡುಗಳ ವಿಡಿಯೊ ಪ್ರದರ್ಶಿಸಲಾಯಿತು.

ಚಿತ್ರಮಂದಿರಗಳ ಒಳಗೆ: ಚಿತ್ರದ ಮೊದಲಾರ್ಧದಲ್ಲಿ 'ಜೇಮ್ಸ್'ನ ನಾಯಕ ಸಂತೋಷ್ ಪಾತ್ರದಲ್ಲಿ ಪುನೀತ್ ಕಾರು ಏರಿ ಭರ್ಜರಿ ಪ್ರವೇಶ ಕೊಡುತ್ತಿದ್ದಂತೆಯೇ ಚಿತ್ರಮಂದಿರದೊಳಗೆ ಶಿಳ್ಳೆ, ಕೇಕೆಗಳು ಜೋರಾಗಿಯೇ ಕೇಳಿದವು.

ವೀರೇಶ್ ಚಿತ್ರಮಂದಿರಕ್ಕೆ ಭೇಟಿ ನೀಡಿದ ಪುನೀತ್ ರಾಜ್‌ಕುಮಾರ್ ಸಹೋದರ ರಾಘವೇಂದ್ರ ರಾಜ್‌ಕುಮಾರ್ ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು. 'ಚಿತ್ರದ ಬಗ್ಗೆ ನಾನೇನಾದರೂ ಹೇಳಿದರೆ ನನ್ನ ತಮ್ಮನ ಬಗ್ಗೆ ಹೇಳಿದಂತಾಗುತ್ತದೆ. ಈ ಬಗ್ಗೆ ಪ್ರೇಕ್ಷಕರು ಹೇಳಬೇಕು. ಅವರಿಗೆ ಸಂತೋಷವಾಗಿದ್ದರೆ ನಮಗೂ ಖುಷಿ' ಎಂದು ಹೇಳಿದರು.

'ಅಪ್ಪು ತನ್ನ ಬದುಕು ಹಾಗೂ ಚಿತ್ರಗಳ ಮೂಲಕ ಹತ್ತಾರು ವಿಷಯಗಳನ್ನು ಹೇಳಿದ್ದಾನೆ. ಹಾಗಾದರೆ ನೀನು ಏನೆಲ್ಲಾ ಹೇಳೋದಿಕ್ಕೆ ಬಂದಿದ್ದೀಯಪ್ಪಾ! ನಮಗಿನ್ನೂ ತಿಳಿಯದಾಗಿದೆ' ಎಂದು ರಾಘವೇಂದ್ರ ರಾಜ್‌ಕುಮಾರ್ ಭಾವುಕರಾಗಿ ನುಡಿದರು.

ಮೈಸೂರಿನಲ್ಲಿ ಮಾತನಾಡಿದ ಶಿವರಾಜ್‌ಕುಮಾರ್, 'ಚಿತ್ರದಲ್ಲಿ ಪುನೀತ್ ಪಾತ್ರಕ್ಕೆ ಧ್ವನಿ ನೀಡಿದ್ದೇ ಒಂದು ವಿಶೇಷ ಅನುಭವ. ಭಾವನಾತ್ಮಕವಾಗಿ ನನಗೆ ತುಂಬಾ ಕಷ್ಟವಾಯಿತು. ಆದರೂ ಅನಿವಾರ್ಯ. ಚಿತ್ರಮಂದಿರದಲ್ಲಿ ಅಭಿಮಾನಿಗಳು ಸಂಭ್ರಮಿಸಿದ್ದಾರೆ. ಇರಲಿ ಸಂಭ್ರಮವೂ ಇರಲೇಬೇಕಲ್ಲ. ಪ್ರೇಕ್ಷಕ ಚಿತ್ರ ನೋಡಿ ಖುಷಿಯಿಂದ ಹೊರಬರುತ್ತಿದ್ದಾನೆ. ಅದೇ ಮುಖ್ಯ' ಎಂದು ಭಾವುಕರಾದರು.

ಪಡುವಾರಹಳ್ಳಿಯಲ್ಲಿ ಶಿವರಾಜ್‌ಕುಮಾರ್ ಅವರು ಪುನೀತ್ ಪುತ್ಥಳಿಯನ್ನು ಅನಾವರಣಗೊಳಿಸಿದರು. ಪಿರಿಯಾಪಟ್ಟಣದ ಶಾರದಾ ಚಿತ್ರಮಂದಿರದಒಳಗೆಅಭಿಮಾನಿಗಳುಪಟಾಕಿಸಿಡಿಸಿದ್ದರಿಂದ ಆತಂಕ ಸೃಷ್ಟಿಯಾಗಿತ್ತು.

ಬಾಗಲಕೋಟೆಯಲ್ಲಿ ಚಿತ್ರಮಂದಿರಕ್ಕೆ ಹೋದ ಅಭಿಮಾನಿಗಳು ಪುನೀತ್ ನೆನೆದು ಅತ್ತು ಹೊರಬಂದ ಘಟನೆ ನಡೆಯಿತು. ಚಿತ್ರಮಂದಿರದ ಮುಂದೆ ದಟ್ಟಣೆ ಹೆಚ್ಚಾದಾಗ ಜನರನ್ನು ಚದುರಿಸಲು ಲಾಠಿ ಬೀಸಬೇಕಾಯಿತು.

ಉಚಿತ ಕ್ಷೌರ: ಚಾಮರಾಜನಗರದ ಕ್ಷೌರದಂಗಡಿಯೊಂದರಲ್ಲಿ ಉಚಿತ ಕ್ಷೌರ ಮಾಡಲಾಯಿತು.

ಶಿರಸಿ ಮಾರಿಕಾಂಬಾ ಜಾತ್ರೆಯಲ್ಲಿಯೂ ಪುನೀತ್ ಭಾವಚಿತ್ರ ರಾರಾಜಿಸಿತು. ಜಕ್ಕೂರು ವಿಮಾನ ತರಬೇತಿ ಕೇಂದ್ರದಿಂದ ಪುಟ್ಟ ವಿಮಾನವೊಂದರಲ್ಲಿ ಪುನೀತ್ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದ ಬ್ಯಾನರನ್ನು ಹಾರಾಡಿಸಲಾಯಿತು.

ಬಳ್ಳಾರಿಯ ಟಚ್ ಫಾರ್ ಲೈಫ್ ಫೌಂಡೇಷನ್ ಅಧ್ಯಕ್ಷ ಭರತ್ ರೆಡ್ಡಿ, 'ಜೇಮ್ಸ್' ಚಿತ್ರದ 783 ಟಿಕೆಟ್‌ಗಳನ್ನು ಖರೀದಿಸಿ ಅಪ್ಪು ಅಭಿಮಾನಿಗಳಿಗೆ ಹಂಚಿದರು.

ಅಪ್ಪು ಸಮಾಧಿಗೆ ಅಶ್ವಿನಿ ಪೂಜೆ

ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ರಾಜ್‌ಕುಮಾರ್ ಸಮಾಧಿಗೆ ಪುನೀತ್ ಅವರ ಪತ್ನಿ ಅಶ್ವಿನಿ ಅವರು ಗುರುವಾರ ಬೆಳಿಗ್ಗೆ ಪೂಜೆ ಸಲ್ಲಿಸಿದರು. ಬಳಿಕ ಗವಿಗಂಗಾಧರೇಶ್ವರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಇಂದು ಸಮಾಧಿಗೆ ಭೇಟಿಕೊಟ್ಟ ಅಭಿಮಾನಿಗಳ ಸಂಖ್ಯೆಯೂ ಹೆಚ್ಚಿತ್ತು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ 'ಜೇಮ್ಸ್' ಚಿತ್ರದ ಬಿಡುಗಡೆಯ ದಿನವಾದ ಗುರುವಾರ ಬೆಂಗಳೂರಿನ ಮಾಗಡಿ ರಸ್ತೆಯ ವೀರೇಶ್ ಚಿತ್ರಮಂದಿರದ ಮುಂಭಾಗ ಅಭಿಮಾನಿಗಳು ನೃತ್ಯ ಮಾಡಿದ ಕ್ಷಣ.

–ಪ್ರಜಾವಾಣಿ ಚಿತ್ರ: ರಂಜು ಪಿ.

ಹುಬ್ಬಳ್ಳಿಯಲ್ಲಿ 'ಜೇಮ್ಸ್' ಜಾತ್ರೆ: ಟಿಕೆಟ್‌ಗಾಗಿ ನೂಕುನುಗ್ಗಲು

ಹುಬ್ಬಳ್ಳಿ: ನಟ ಪುನೀತ್ ರಾಜಕುಮಾರ್ 'ಜೇಮ್ಸ್' ಸಿನಿಮಾ ಗುರುವಾರ ಬಿಡುಗಡೆಯಾದ ಹಿನ್ನೆಲೆಯಲ್ಲಿ, ವಿವಿಧ ಜಿಲ್ಲೆಗಳ ಥಿಯೇಟರ್‌ಗಳ ಬಳಿ ಜಾತ್ರೆಯ ವಾತಾವರಣ ನಿರ್ಮಾಣವಾಗಿತ್ತು. ವಿಜಯನಗರ ಜಿಲ್ಲೆ ಹೊಸಪೇಟೆಯ ಚಿತ್ರಮಂದಿರದ ಬಳಿ ನೂಕಾಟ, ತಳ್ಳಾಟ ಉಂಟಾಗಿ ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದರೆ, ಗುಂಪಿನಲ್ಲಿದ್ದ ಹಲವರು ಪೊಲೀಸರ ಮೇಲೆ ಕಲ್ಲು, ಚಪ್ಪಲಿ ತೀರಿದ ಘಟನೆಯೂ ನಡೆದಿದೆ.

ಬಾಗಲಕೋಟೆಯ ಶಕ್ತಿ ಚಿತ್ರಮಂದಿರದ ಎದುರು ಟಿಕೆಟ್ ಗಾಗಿ ನೂಕುನುಗ್ಗಲು ತಡೆಯಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದರು.

ಬಬಲೇಶ್ವರ ತಾಲ್ಲೂಕಿನ ದೇವಾಪುರ ಗ್ರಾಮದಲ್ಲಿ ಅಪ್ಪು ಅಭಿಮಾನಿ, ಸಿಆರ್‌ಪಿಎಫ್ ಯೋಧ ಗೌಡಪ್ಪ ಕೋನಪ್ಪನವರ ಅವರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ಲ ಮಕ್ಕಳಿಗೂ ಪೆನ್ನು, ಪುಸ್ತಕ ವಿತರಿಸಿದರು.

'ಜೇಮ್ಸ್' ನೋಡಿ ಗಳಗಳನೆ ಅತ್ತ ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಡಿಆರ್‌ಸಿ ಚಿತ್ರಮಂದಿರದಲ್ಲಿ ಗುರುವಾರ ರಾತ್ರಿ 'ಜೇಮ್ಸ್' ಸಿನಿಮಾವನ್ನು ವೀಕ್ಷಿಸಿ ಹೊರಬಂದ ಶಿವರಾಜಕುಮಾರ್ ಭಾವುಕರಾಗಿ ಗಳಗಳನೆ ಅತ್ತರು. ಅವರ ದುಃಖ ಮೇರೆ ಮೀರಿತ್ತು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಏನು ಹೇಳಬೇಕೆಂದು ಗೊತ್ತಾಗುತ್ತಿಲ್ಲ. ನಿಜಕ್ಕೂ ತುಂಬಾ ಕಷ್ಟವಾಗುತ್ತಿದೆ. ನಮಗೆಲ್ಲಿ ಶಕ್ತಿ ಹೋಗುತ್ತದೋ ಎಂದು ಭಯವಾಗುತ್ತಿದೆ. ನಮಗೂ ದೇವರು ಶಕ್ತಿ ಕೊಡಲಿ. ನಮ್ಮ ಕುಟುಂಬಕ್ಕೆ ನೈತಿಕ ಬೆಂಬಲ ನೀಡಿರುವ ಅಭಿಮಾನಿಗಳು, ಸಿನಿಮಾ ರಂಗಕ್ಕೆ ಆಭಾರಿಗಳಾಗಿದ್ದೇವೆ' ಎಂದರು.

'ಪ್ರತಿ ಸಿನಿಮಾ ಬಿಡುಗಡೆಯಾದಾಗಲೂ ಬೆಳಿಗ್ಗೆಯೇ ಅಪ್ಪು ಕರೆ ಮಾಡಿ ಚೆನ್ನಾಗಿದೆ ಎನ್ನುತ್ತಿದ್ದ. ಈಗ ಅವನ ಕರೆ ಬರುತ್ತಿಲ್ಲವಲ್ಲ ಎಂಬ ನೋವು ಕಾಡುತ್ತಿದೆ. ಇಷ್ಟು ದಿನ ಅವನ ಎಲ್ಲ ಸಿನಿಮಾವನ್ನು ಎಂಜಾಯ್ ಮಾಡಿಕೊಂಡು ನೋಡುತ್ತಿದ್ದೆ. ಆದರೆ, ಈ ಸಿನಿಮಾ ನೋಡುವಾಗ ಕಣ್ಣೀರು ಹಾಕಿದೆ' ಎಂದು ಭಾವುಕರಾದರು.

'ಅಪ್ಪಾಜಿಗಿಂತ ದೊಡ್ಡ ಹೆಸರು ಗಳಿಸಿದ್ದಾನೆ ಎಂದರೆ ಅದು ನಮ್ಮ ಭಾಗ್ಯ, ಪುಣ್ಯ. ಅವನು ಯಾವಾಗಲೂ ತುಂಬ ಉನ್ನತವಾಗಿ ಯೋಚಿಸುತ್ತಿದ್ದ. ಕನ್ನಡ ಸಿನಿಮಾಗಳನ್ನು ಹಾಲಿವುಡ್ ಸಿನಿಮಾದಂತೆ ತೆಗೆಯಬೇಕು ಎನ್ನುತ್ತಿದ್ದ. ಅವನ ಚಿಂತನೆಯಂತೆ ಜೇಮ್ಸ್ ತಯಾರಾಯಿತು. ಶಬ್ದವೇಧಿ ಸಿನಿಮಾವೂ ಮಾದಕವಸ್ತುಗಳಿಗೆ ಸಂಬಂಧಿಸಿತ್ತು. ನಂತರ ತಂದೆ ರಾಜಕುಮಾರ್ ಹೋದರು. ಜೇಮ್ಸ್ ಸಿನಿಮಾ ಸಹ ಮಾದಕದ್ರವ್ಯಕ್ಕೆ ಸಂಬಂಧಿಸಿದ್ದು. ನಿಜಕ್ಕೂ ಮಾದಕವಸ್ತು ದೇಶವನ್ನು ನಾಶ ಮಾಡುತ್ತಿದೆ' ಎಂದರು.

'ಜೇಮ್ಸ್ ಚಿತ್ರದಲ್ಲಿ ಪುನೀತ್ ಪಾತ್ರಕ್ಕೆ ಧ್ವನಿ ನೀಡುವಾಗ ಮನಸ್ಸಿಗೆ ತುಂಬಾ ನೋವಾಗುತ್ತಿತ್ತು. ಅಪ್ಪು ಇಲ್ಲದ ಹುಟ್ಟುಹಬ್ಬ ಆಚರಣೆ ತುಂಬಾ ದುಃಖದ ವಿಚಾರ. ಹುಟ್ಟುಹಬ್ಬಕ್ಕೆ ಇಬ್ಬರೂ ಪರಸ್ಪರ ಉಡುಗೊರೆಗಳನ್ನು ನೀಡುತ್ತಿದ್ದೆವು. ಅಪ್ಪುಗೆ ಸಾಕಷ್ಟು ಸಲ ವಾಚ್, ಬೆಲ್ಟ್, ಗಾಗಲ್ ಕೊಟ್ಟಿದ್ದೇನೆ. ಅಪ್ಪು ಎಲ್ಲರ ಹೃದಯದಲ್ಲಿ ಇದ್ದಾನೆ' ಎಂದು ಭಾವುಕರಾಗಿ ನುಡಿದರು.

ಚಿತ್ರನಗರಕ್ಕೆ ಪುನೀತ್ ಹೆಸರು?

ಮೈಸೂರಿನಲ್ಲಿ ರಾಜ್ಯ ಸರ್ಕಾರ ನಿರ್ಮಿಸಲಿರುವ ಚಿತ್ರನಗರಕ್ಕೆ ಪುನೀತ್ ರಾಜ್‌ಕುಮಾರ್ ಹೆಸರಿಡುವ ಕುರಿತು ಪ್ರತಿಕ್ರಿಯಿಸಿದ ಶಿವರಾಜ್‌ಕುಮಾರ್, 'ಅವನ (ಪುನೀತ್) ಹೆಸರು ಎಲ್ಲರ ಹೃದಯದಲ್ಲಿದೆ. ಅವನ ಹೆಸರಿಟ್ಟು ಏನೂ ಆಗಬೇಕಿಲ್ಲ. ಅದು ದೊಡ್ಡ ವಿಷಯವೂ ಅಲ್ಲ. ಪುನೀತ್ ಹೆಸರಿಟ್ಟರೂ ಸಂತೋಷ. ಬೇರೆಯವರ ಹೆಸರಿಟ್ಟರೂ ಸಂತೋಷ. ಕುಟುಂಬದ ಸದಸ್ಯನಾಗಿ ನಾನು ಆ ಬಗ್ಗೆ ಮಾತನಾಡಬಾರದು' ಎಂದರು.



ಮೈಸೂರಿನಲ್ಲಿ ಕಣ್ಣೀರಿಟ್ಟ ನಟ ಶಿವರಾಜಕುಮಾರ್

ಹೆಲಿಕಾಪ್ಟರ್‌ನಿಂದ ಹೂಮಳೆ

ಮೈಸೂರು: ಇಲ್ಲಿನ ಬಿ.ಎಂ. ಹ್ಯಾಬಿಟ್ಯಾಟ್ ಮಾಲ್ ಮುಂದೆ 70 ಅಡಿ ಎತ್ತರದ ಪುನೀತ್ ರಾಜ್‌ಕುಮಾರ್ ಕಟೌಟ್‌ಗೆ ಹೆಲಿಕಾಪ್ಟರ್ ಮೂಲಕ ಹೂಮಳೆಗರೆದಿದ್ದು ವಿಶೇಷವಾಗಿತ್ತು. ಅಭಿಮಾನಿಗಳಾದ ಎಸ್. ನಾಗೇಂದ್ರ, ಎಂ.ಕೆ.ವಿವೇಕ್, ಕೆ.ಹರ್ಷಿತ್, ಲಕ್ಷ್ಮೀಕಾಂತ್ ಹಾಗೂ ಎಂ.ಎನ್.ಈಶ್ವರ್ ಅವರು ಬೆಂಗಳೂರಿನಿಂದ ಹೆಲಿಕಾಪ್ಟರ್ ಕರೆಸಿದ್ದರು. ಇಲ್ಲಿನ ಡಿಆರ್‌ಸಿ ಚಿತ್ರಮಂದಿರದಲ್ಲಿ ಜೇಮ್ಸ್ ಚಿತ್ರ ಒಂದೇ ದಿನದಲ್ಲಿ 18 ಪ್ರದರ್ಶನ ಕಂಡಿತು.

ಪುನೀತ್ ಕೊನೆಯ 'ಚಿತ್ರದರ್ಶನ'

ಐಷಾರಾಮಿ ಕಾರಿಗೆ ಒರಗಿ ನಿಂತ ಪುನೀತ್ ರಾಜ್‌ಕುಮಾರ್ ಅವರ ವಿಶಾಲ ವಕ್ಷಸ್ಥಲ ನೋಡಿದಾಗ, ಮೊದಲಿಗೆ ಅನ್ನಿಸುವುದು ಅದರಲ್ಲಿದ್ದ ಹೃದಯದ ಬಡಿತ ದಿಢೀರನೆ ನಿಂತಿದ್ದಾದರೂ ಹೇಗೆ ಎಂದು. ಅವರಿಲ್ಲದ ಈ ಹೊತ್ತಿನಲ್ಲಿ ಅವರ ಕೊನೆಯ ಸಿನಿಮಾದ ಹೂರಣವನ್ನು ವಿಪರೀತ ಬಗೆದುನೋಡುವುದು ಕೂಡ ಅಮಾನವೀಯವಾದೀತೇನೊ?

ತಮ್ಮ ತಂದೆ ರಾಜ್‌ಕುಮಾರ್ ಅವರಿಗೆ ಇದ್ದಂತೆಯೇ ಬಾಂಡ್ ಚಿತ್ರಗಳ ಕುರಿತು ಪುನೀತ್‌ಗೂ ಬೆರಗು ಇತ್ತು. ಆ ಬಯಕೆ ತೀರಿಸಿಕೊಳ್ಳಲೆಂಬಂತೆ ರಾಜ್‌ಕುಮಾರ್ ದೇಸಿ ಬಾಂಡ್ ಚಿತ್ರಗಳಲ್ಲಿ ನಟಿಸಿದ್ದರು. ಅಂತಹ ರೂಹು 'ಜೇಮ್ಸ್'ನಲ್ಲಿಯೂ ಇದೆ. ಬಂದೂಕಿನ ನಳಿಕೆ ಬಹಳಷ್ಟು ಸದ್ದು ಮಾಡುವುದು, ಕಾರುಗಳು ಸರಬರನೆ ಸಾಗುವುದು... ಇವಿಷ್ಟೆ ಆದರೆ ಬಾಂಡ್ ಚಿತ್ರ ಆಗಲಾರದೆನ್ನುವ ಅರಿವು ನಿರ್ದೇಶಕರಿಗೆ ಇಲ್ಲವೆಂದೇನೂ ಅಲ್ಲ. ಲಭ್ಯ ದೃಶ್ಯಗಳಿಗೇ ಅವರು ಅಂತಹ ವೇಗ ದಕ್ಕಿಸಿಕೊಡಲು ಪ್ರಯತ್ನಿಸಿದ್ದಾರಷ್ಟೆ.

ಸಾದಾ ಭದ್ರತಾ ಸಿಬ್ಬಂದಿಯಾಗಿ ಪ್ರವೇಶ ಪಡೆಯುವ ನಾಯಕ ಕತ್ತಲ ಜಗತ್ತಿನ ಖೂಳರ ನಡುವೆ ಏನೆಲ್ಲ ಆಟವಾಡುತ್ತಾನೆ ಎನ್ನುವುದು ಕಥಾಹಂದರ. ನಾಯಕನ ಹಿಂಸಾ ಧೋರಣೆಯ ಹಿಂದೆ ಒಂದು ದಾರುಣ ಕಥೆ ಇದೆ. ಅದಕ್ಕೆ ಅಗತ್ಯವಿರುವ ಭಾವುಕ ಸನ್ನಿವೇಶಗಳನ್ನು ಇನ್ನಷ್ಟು ಚಿತ್ರೀಕರಿಸುವ ಅವಶ್ಯಕತೆ ಇತ್ತೋ ಏನೊ? ಪುನೀತ್ ಅವರ ಅಗಲಿಕೆಯಿಂದ ಅಂತಹ ಕೆಲ ದೃಶ್ಯಗಳಿಗೆ ಪೂರ್ಣಾವರಣ ಹಾಕಲು ಆಗದೇ ಇರುವುದಕ್ಕೆ ಉದಾಹರಣೆಗಳು ಸಿಗುತ್ತವೆ. ಥ್ರಿಲ್ಲರ್‌ಗೆ ಬೇಕಾದ ವೇಗವನ್ನು ಚಿತ್ರದ ಮೊದಲರ್ಧಕ್ಕೆ ದಕ್ಕಿಸಿಕೊಟ್ಟಿರುವಲ್ಲಿ ಸಂಕಲನಕಾರ ದೀಪು ಎಸ್. ಕುಮಾರ್ ಕಾಣ್ಕೆ ದೊಡ್ಡದಿದೆ. ಒಂದೇ ಒಂದು ಹಾಡಿನಲ್ಲಿ ಪುನೀತ್ ನೃತ್ಯ ಲಾಲಿತ್ಯ ನೋಡಸಿಗುತ್ತದೆ.



'ಜೇಮ್ಸ್' ಚಿತ್ರದಲ್ಲಿ ಪುನೀತ್

ಅಭಿನಯಿಸಲು ಇನ್ನೂ ಏನೇನೋ ಬಾಕಿ ಇತ್ತೆನ್ನುವುದಕ್ಕೆ ಇದೇ ಸಾಕ್ಷಿ. ಸಿನಿಮಾದ ಎರಡನೇ ಅರ್ಧವು ತಿರುವುಗಳನ್ನು ಮೂಡಿಸಿ, 'ಕಪ್ಪು–ಬಿಳುಪು' ಪರಿಕಲ್ಪನೆಯ ನಾಯಕ–ಪ್ರತಿನಾಯಕರ ಹಳೆಯ ಆಟವನ್ನು ತೋರಿಸಲು ಮೀಸಲಾಗಿದೆ. ಇದರಲ್ಲಿ ಕೌದಿಯೊಂದನ್ನು ಹೆಣೆಯಬೇಕಾದಂತಹ ಸವಾಲು ನಿರ್ದೇಶಕರು, ಸಂಕಲನಕಾರರು ಹಾಗೂ ಕೆಲವು ತಂತ್ರಜ್ಞರಿಗೆ ಎದುರಾಗಿರುವುದು ಖರೆ. ಕೌದಿಯ ಮೇಲೆ ಮುಗ್ಧತೆಯಿಂದ ಮಗು ಮಲಗಬೇಕಷ್ಟೆ. ಅದರ ಕೌಶಲ ವ್ಯಾಖ್ಯಾನಿಸಲು ಇದು ಸರಿಯಾದ ಸಂದರ್ಭವಲ್ಲ.

ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಮೂವರೂ ಒಟ್ಟಾಗಿ ಅಭಿನಯಿಸುವ ಸಿನಿಮಾ ಬರಲಿ ಎಂಬ ಮಹತ್ವಾಕಾಂಕ್ಷೆ ಅಭಿಮಾನಿಗಳಿಗೆ ಇತ್ತು. ಈ ಚಿತ್ರದಲ್ಲಿ ಅದು ಸಾಕಾರವಾಗಿದೆಯಾದರೂ ಕಡು ವಿಷಾದದಲ್ಲಿ ಅದು ಕೂಡ ಮುಳುಗಿಹೋಗಿದೆ. ಶಿವಣ್ಣನ ಪ್ರವೇಶವಾದಾಗ ಒಂದಿಷ್ಟು ಶಿಳ್ಳೆಗಳು ಸಲ್ಲುತ್ತವೆ. ಅಪ್ಪು ಪಾತ್ರಕ್ಕೆ ಡಬ್ಬಿಂಗ್ ಅನ್ನೂ ಅವರೇ ಮಾಡಿರುವುದು ಉಲ್ಲೇಖನೀಯ.

ಪುನೀತ್ ಅವರನ್ನು ತೆರೆಮೇಲೆ ನೋಡಿದಾಗ ಅವರ ಪುನರ್ಜನ್ಮವಾಗಿದೆಯೇನೋ ಎಂಬ ಭಾವವೇ ಕಾಡುತ್ತದೆ. ಅವರ ತೀಕ್ಷ್ಣ ನೋಟ, ಸಾಹಸ ದೃಶ್ಯಗಳಲ್ಲಿ ದೇಹದ ಬಾಗುವಿಕೆ, ಭಾವುಕ ಸನ್ನಿವೇಶಗಳಲ್ಲಿನ ಕಣ್ಣೀರು...ಎಲ್ಲವೂ ಮತ್ತೆ 'ಅಪ್ಪು' ಹುಟ್ಟಿಬಂದರಲ್ಲ ಎಂದು ಒಂದಿಷ್ಟು ಹೊತ್ತು ನಿರಾಳತೆ ಮೂಡಿಸುತ್ತವೆ. ದೊಡ್ಡ ತಾರಾಬಳಗದಲ್ಲಿ ಗಡ್ಡಧಾರಿಗಳದ್ದೇ ಸಿಂಹಪಾಲು. ಶರತ್ ಕುಮಾರ್ ಹಾಗೂ ಜಾನ್ ಕೊಕೇನ್ ತಮ್ಮ ಪಳಗಿದ ಅಭಿನಯವನ್ನು ತುಳುಕಿಸಿದ್ದಾರೆ. ನಾಯಕಿ ಪ್ರಿಯಾ ಆನಂದ್ ಅವರಿಗೂ ತೆರೆಯನ್ನು ಆವರಿಸಿಕೊಳ್ಳುವಷ್ಟು ಪಾತ್ರಾವಕಾಶ ಸಿಕ್ಕಿದೆ. ಇನ್ನು ಪುನೀತ್ ತೆರೆಮೇಲೆ ಇಷ್ಟು ಅವಧಿ ಕಾಣಿಸಿಕೊಳ್ಳಲು ಸಾಧ್ಯವೇ ಇಲ್ಲವಲ್ಲ ಎಂಬ ವಿಷಾದದಿಂದ ಬರುವ ಕಣ್ಣೀರು, ಚಿತ್ರದ ಭಾವುಕ ಸನ್ನಿವೇಶಗಳು ತರಿಸಲಾಗದ ಅಳಲನ್ನೂ ಮೀರಿಸುತ್ತದೆ.

-ವಿಶಾಖ ಎನ್.

ನಾವು ನೋಡಿದ ಸಿನಿಮಾ

ಜೇಮ್ಸ್ (ಕನ್ನಡ)

- ನಿರ್ಮಾಣ: ಕಿಶೋರ್ ಪಾತಿಕೊಂಡ
- ನಿರ್ದೇಶನ: ಚೇತನ್ ಕುಮಾರ್
- ತಾರಾಗಣ: ಪುನೀತ್ ರಾಜ್‌ಕುಮಾರ್, ಪ್ರಿಯಾ ಆನಂದ್, ಸಾಧು ಕೋಕಿಲ, ಶರತ್ ಕುಮಾರ್, ಶ್ರೀಕಾಂತ್, ಮುಖೇಶ್ ರಿಷಿ, ರಂಗಾಯಣ ರಘು, ಚಿಕ್ಕಣ್ಣ, ಶೈನ್ ಶೆಟ್ಟಿ, ತಿಲಕ್ ಶೇಖರ್, ಅನು ಪ್ರಭಾಕರ್, ಜಾನ್ ಕೊಕೇನ್.

ಪುಟಿನ್ ಯುದ್ಧಾಪರಾಧಿ– ಬೈಡನ್ ಹೇಳಿಕೆ; ಅಕ್ಷಮ್ಯ, ಸ್ವೀಕಾರಾರ್ಹವಲ್ಲ –ಕ್ರೆಮ್ಲಿನ್ ತಿರುಗೇಟು

ಉಕ್ರೇನ್ ಬಿಕ್ಕಟ್ಟು: ಅಮೆರಿಕ– ರಷ್ಯಾ ವಾಕ್ಸಮರ


ವಾಷಿಂಗ್ಟನ್, ಮಾಸ್ಕೊ (ಎಪಿ/ ಎಎಫ್‌ಪಿ): ಉಕ್ರೇನ್ ಮೇಲೆ ಸೇನಾ ದಾಳಿ ಮುಂದುವರಿದಿರುವಂತೆಯೇ, ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು 'ಯುದ್ಧಾಪರಾಧಿ' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಜರಿದಿದ್ದಾರೆ. ಇದಕ್ಕೆ ಅಷ್ಟೇ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ರಷ್ಯಾ, 'ಬೈಡನ್ ಹೇಳಿಕೆಯು ಅಕ್ಷಮ್ಯ ಮತ್ತು ಸ್ವೀಕಾರಾರ್ಹ ಅಲ್ಲ' ಎಂದಿದೆ.

ಶ್ವೇತಭವನದಲ್ಲಿ ಬುಧವಾರ ಮಾಧ್ಯಮದ ಪ್ರಶ್ನೆಗೆ ಉತ್ತರಿಸುವ ವೇಳೆ ಬೈಡನ್, 'ನನ್ನ ಪ್ರಕಾರ ಪುಟಿನ್ ಯುದ್ಧಾಪರಾಧಿ'. ಅವರು ತಮಗೆ ಸಂಬಂಧಪಡದ ವಿಷಯದಲ್ಲಿ ಮೂಗು ತೂರಿಸಿದ್ದಾರೆ' ಎಂದು ಟೀಕಿಸಿದರು. ಅಮೆರಿಕದ ಅಧ್ಯಕ್ಷರು ಮೊದಲ ಬಾರಿಗೆ ಪುಟಿನ್ ವಿರುದ್ಧ ಕಟುವಾದ ಪದಗಳಿಂದ ವಾಗ್ದಾಳಿ ನಡೆಸಿದರು.

'ಉಕ್ರೇನ್‌ನಲ್ಲಿ ದೌರ್ಜನ್ಯಗಳು ಹೆಚ್ಚುತ್ತಿವೆ. ಉಕ್ರೇನ್ ಅಧ್ಯಕ್ಷರು ಹೆಚ್ಚಿನ ಸಹಾಯಕ್ಕಾಗಿ ಅಮೆರಿಕದ ಕಾಂಗ್ರೆಸ್‌ಗೆ ಮೊರೆ ಇಟ್ಟಿದ್ದಾರೆ. ರಷ್ಯಾದ ಪಡೆಗಳು ಆಸ್ಪತ್ರೆಗಳ ಮೇಲೆ ಬಾಂಬ್ ದಾಳಿ ನಡೆಸಿವೆ. ವೈದ್ಯರನ್ನೂ ಒತ್ತೆಯಾಳಾಗಿ ಇರಿಸಿಕೊಂಡಿವೆ. ರಷ್ಯಾ ವಿರುದ್ಧ ಹೋರಾಡಲು ಉಕ್ರೇನ್‌ಗೆ ನಾವು ಹೆಚ್ಚಿನ ಸಹಾಯ ಮಾಡುತ್ತೇವೆ' ಎಂದು ಬೈಡನ್ ವಾಗ್ದಾನ ಮಾಡಿದರು.



ಬೈಡನ್



ಪುಟಿನ್

ಇದರ ಬೆನ್ನಲ್ಲೇ ತಕ್ಷಣದ ಪ್ರತಿಕ್ರಿಯೆ ನೀಡಿರುವ ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಜೆನ್ ಪಿಸಾಕಿ ಅವರು, 'ಅದು ಅಧ್ಯಕ್ಷರ ವೈಯುಕ್ತಿಕ ಹೇಳಿಕೆ' ಎಂದು ಸಮಜಾಯಿಷಿ ನೀಡಿದರು.

ಪುಟಿನ್ ಅವರ ಆಕ್ರಮಣದ ಕ್ರಮಗಳನ್ನು 'ಯುದ್ಧ ಅಪರಾಧ'ವೆಂದು ಘೋಷಿಸಲು ಶ್ವೇತಭವನವು ಹಿಂಜರಿಯಿತು. 'ಇದು ಸಂಶೋಧನೆಯು ಅಗತ್ಯವಿರುವ ಕಾನೂನಾತ್ಮಕ ಪದವಾಗಿದೆ' ಎಂದು ಜೆನ್ ಪಿಸಾಕಿ ಹೇಳಿದರು.

'ಬೇರೆ ರಾಷ್ಟ್ರದ ಮೇಲೆ ಅತಿಕ್ರಮಣದ ಮೂಲಕ ಕ್ರೂರ ಸರ್ವಾಧಿಕಾರಿ ಧೋರಣೆಯನ್ನು ಪುಟಿನ್ ಪ್ರದರ್ಶಿಸಿದ್ದಾರೆ. ಈ ನಡೆಯ ಕುರಿತು ಬೈಡನ್ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ' ಎಂದು ಜೆನ್ ಪಿಸಾಕಿ ವಿವರಣೆ ನೀಡಿದರು.

ಬೈಡನ್ ಹೇಳಿಕೆಗೆ ರಷ್ಯಾ ಖಂಡನೆ: ಉಕ್ರೇನ್ ಮೇಲೆ ಮಿಲಿಟರಿ ಕಾರ್ಯಾಚರಣೆ ನಡೆಸುತ್ತಿರುವುದಕ್ಕೆ ವ್ಲಾಡಿಮಿರ್ ಪುಟಿನ್ ಅವರನ್ನು 'ಯುದ್ಧಾಪರಾಧಿ' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಕರೆದಿರುವುದನ್ನು ರಷ್ಯಾ ತೀವ್ರವಾಗಿ ಖಂಡಿಸಿದೆ.

ರಷ್ಯಾ ನಾಶಕ್ಕೆ ಪಶ್ಚಿಮದವರ ಯತ್ನ: ಪುಟಿನ್ ಆರೋಪ

ರಷ್ಯಾ ನಾಶಪಡಿಸಲು ಪಶ್ಚಿಮದ ರಾಷ್ಟ್ರಗಳು ಬಯಸುತ್ತಿವೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಗಂಭೀರ ಆರೋಪ ಮಾಡಿದರು.

ವಿಡಿಯೊ ಸಂವಾದದಲ್ಲಿ ದೇಶ ಉದ್ದೇಶಿ ಮಾತನಾಡಿರುವ ಅವರು, ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳು ರಷ್ಯಾ ವಿರುದ್ಧ ರಹಸ್ಯವಾಗಿ ಕೆಲಸ ಮಾಡುತ್ತಿವೆ. ಇದಕ್ಕೆ ಕೈಜೋಡಿಸುವ 'ದುಷ್ಟರು ಮತ್ತು ದೇಶದ್ರೋಹಿ'ಗಳ ನಿರ್ಮೂಲನೆಯ ಮೂಲಕ ರಷ್ಯಾವನ್ನು ಪರಿಶುದ್ಧಗೊಳಿಸಲಾಗುವುದು ಎಂದು ಪುಟಿನ್ ಕಠಿಣ ಎಚ್ಚರಿಕೆ ನೀಡಿದರು.

ಉಕ್ರೇನ್ ಮೇಲಿನ ಆಕ್ರಮಣ ಮೂರನೇ ವಾರಕ್ಕೆ ಕಾಲಿಟ್ಟಿರುವಾಗ ರಷ್ಯಾ ಆರ್ಥಿಕ ಕುಸಿತದ ಸಮಸ್ಯೆ ಎದುರಿಸುತ್ತಿರುವ ಬೆನ್ನಲ್ಲೇ, ಪುಟಿನ್ ದೇಶದೊಳಗಿನ ತಮ್ಮ ಟೀಕಾಕಾರರ ವಿರುದ್ಧ ಹರಿಹಾಯ್ದರು. ರಷ್ಯಾ ನಾಶಪಡಿಸಲು ಪಶ್ಚಿಮವು ಬಯಸುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.

'ಯಾವುದೇ ಜನರು, ಅದರಲ್ಲೂ ವಿಶೇಷವಾಗಿ ರಷ್ಯಾದ ಜನರು ಯಾವಾಗಲೂ ದೇಶಭಕ್ತರು. ಆಕಸ್ಮಿಕವಾಗಿ ಬಾಯೊಳಗೆ ಬಂದ ಸೊಳ್ಳೆಯನ್ನು ಉಗಿಯುವಂತೆ ದುಷ್ಟರು ಮತ್ತು ದೇಶದ್ರೋಹಿಗಳನ್ನು ಹೊರದಬ್ಬುತ್ತಾರೆ' ಎಂದು ಪುಟಿನ್ ಹೇಳಿದರು.

'ಸಮಾಜದ ಸ್ವಯಂ ಶುದ್ಧೀಕರಣವು ಸ್ವಾಭಾವಿಕ ಮತ್ತು ಅತ್ಯಗತ್ಯ ಕೂಡ. ನಮ್ಮ ಒಗ್ಗಟ್ಟಿನಿಂದ ಯಾವುದೇ ಸವಾಲನ್ನು ಎದುರಿಸಲು ಸಾಧ್ಯ. ಇದು ನಮ್ಮ ದೇಶವನ್ನು ಬಲಪಡಿಸುತ್ತದೆ ಎನ್ನುವುದನ್ನು ನಾನು ಅರಿತಿರುವೆ' ಎಂದು ಹೇಳಿದರು.

ರಷ್ಯಾದ ಸರ್ಕಾರಿ ಸುದ್ದಿ ವಾಹಿನಿ 'ಒನ್'ನಲ್ಲಿ ನಿರ್ಮಾಪಕಿ ಮರೀನಾ ಓವ್ಸ್ಯಾನಿಕೋವಾ ಅವರು ಸುದ್ದಿ ವಾಚಕಿಯ ಹಿಂದೆ ನಿಂತು ಯುದ್ಧ ವಿರೋಧಿಸಿ 'ಅವರು ನಿಮಗೆ ಸುಳ್ಳು ಹೇಳುತ್ತಿದ್ದಾರೆ' ಎಂಬ ಭಿತ್ತಿಫಲಕವನ್ನು ನೇರ ಪ್ರಸಾರದಲ್ಲಿ ಪ್ರದರ್ಶಿಸಿದ ಎರಡು ದಿನಗಳ ನಂತರ ಪುಟಿನ್ ಅವರಿಂದ ಕಠಿಣ ಎಚ್ಚರಿಕೆ ಹೊರ ಬಿದ್ದಿದೆ.

ದಿನದ ಬೆಳವಣಿಗೆಗಳು

- ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ರಷ್ಯಾ– ಉಕ್ರೇನ್ ಯುದ್ಧದ ಬಗ್ಗೆ ಶುಕ್ರವಾರ ಮಾತುಕತೆ ನಡೆಸಲಿದ್ದಾರೆ ಎಂದು ಶ್ವೇತಭವನ ಹೇಳಿದೆ
- ಕಳೆದ ವಾರ ರಷ್ಯಾ ಪಡೆಗಳು ಅಪಹರಿಸಿದ್ದ ಮೆಲಿಟೊಪೋಲ್ ನಗರದ ಮೇಯರ್ ಇವಾನ್ ಅವರನ್ನು ಬಿಡುಗಡೆ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ ಉಕ್ರೇನ್ ಸೆರೆ ಹಿಡಿದಿದ್ದ ಒಂಬತ್ತು ರಷ್ಯಾದ ಸೈನಿಕರನ್ನು ರಷ್ಯಾ ಸೇನೆಗೆ ಹಸ್ತಾಂತರಿಸಿದೆ
- ಉಕ್ರೇನ್‌ನಲ್ಲಿ ಹದಗೆಡುತ್ತಿರುವ ಮಾನವೀಯ ಬಿಕ್ಕಟ್ಟಿನ ಪರಿಸ್ಥಿತಿಯಿಂದಾಗಿ ಅಮೆರಿಕ, ಬ್ರಿಟನ್, ಫ್ರಾನ್ಸ್, ಅಲ್ಬೇನಿಯಾ, ನಾರ್ವೆ ಮತ್ತು ಐರ್ಲೆಂಡ್ ಒತ್ತಾಯದ ಮೇರೆಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ತುರ್ತು ಸಭೆ ನಡೆಯಿತು. ನಾಗರಿಕರ ಸ್ಥಳಾಂತರಕ್ಕೆ ಮಾನವೀಯ ಕಾರಿಡಾರ್ ತೆರೆಯುವ ನಿರ್ಣಯದ ಸಂಬಂಧ ಶುಕ್ರವಾರ ಮತದಾನ ನಡೆಯಲಿದೆ
- ರಷ್ಯಾದ ಯುದ್ಧ ವಿಮಾನಗಳು ಮತ್ತು ಶಸ್ತ್ರಾಸ್ತ್ರಗಳ ದಾಳಿ ತಡೆಯಲು ಉಕ್ರೇನ್ ಸೇನೆಗೆ ದೂರಗಾಮಿ ಶ್ರೇಣಿಯ ಕ್ಷಿಪಣಿಗಳು ಮತ್ತು ಸ್ವಿಚ್‌ಬ್ಲೇಡ್ ಸಶಸ್ತ್ರ 100 ಡ್ರೋನ್‌ಗಳನ್ನು ಅಮೆರಿಕ ರವಾನಿಸುತ್ತಿದೆ
- ರಷ್ಯಾ ಪಡೆಗಳು ಉಕ್ರೇನಿನ ಯವೊರಿವ್ ಸೇನಾ ನೆಲೆ ಮೇಲೆ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಸಾವನ್ನಪ್ಪಿದ ಉಕ್ರೇನ್ ಸೇನೆಯ ಮೇಜರ್ ಇವಾನ್ ಸ್ಕ್ರಿಪ್ನಿಕ್ ಅವರ ಅಂತ್ಯಸಂಸ್ಕಾರದಲ್ಲಿ ಉಕ್ರೇನ್ ಯೋಧರು ಪಾಲ್ಗೊಂಡರು
- ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ತೋರುತ್ತಿರುವ ಶೌರ್ಯ ಮತ್ತು ಧೈರ್ಯ ಗೌರವಿಸಲು ಅಸ್ಸಾಂ ಮೂಲದ ಸ್ಟಾರ್ಟ್‌ಅಪ್ ಅರೋಮ್ಯಾಟಿಕ್ ಟೀ ಝೆಲೆನ್‌ಸ್ಕಿ ಅವರ ಹೆಸರನ್ನು ಚಹಾಕ್ಕೆ ಇಟ್ಟಿದೆ
- ಉಕ್ರೇನ್ ಮೇಲಿನ ಸೇನಾ ಕಾರ್ಯಾಚರಣೆ ತಕ್ಷಣ ನಿಲ್ಲಿಸಲು ಅಂತರರಾಷ್ಟ್ರೀಯ ನ್ಯಾಯಾಲಯ ನೀಡಿರುವ ಆದೇಶವನ್ನು ರಷ್ಯಾ ತಿರಸ್ಕರಿಸಿದೆ
- ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ಯುದ್ಧದ ಬಗ್ಗೆ ಭಾರತ ತಳೆದಿರುವ ನಿಲುವು ಬ್ರಿಟನ್‌ಗೆ ನಿರಾಶೆ ಮೂಡಿಸಿದೆ. ಆದರೆ, ಈಗಲೂ ಭಾರತವನ್ನು ಪ್ರಮುಖ ವ್ಯಾಪಾರಿಕ ಪಾಲುದಾರನೆಂದೇ ಪರಿಗಣಿಸಿದೆ– ಬ್ರಿಟನ್ ವಾಣಿಜ್ಯ ಸಚಿವೆ ಅನ್ನೆ ಮೇರಿ ಟ್ರೆವೆಲಿಯನ್ ಹೇಳಿಕೆ

ಮಂಗಳಯಾನ ಕೈಬಿಟ್ಟ ಯುರೋಪ್

ಪ್ಯಾರಿಸ್ (ಎಪಿ): ಮಂಗಳ ಗ್ರಹ ಮನುಷ್ಯನ ವಾಸಕ್ಕೆ ಯೋಗ್ಯವಾಗಿದೆಯೇ ಎನ್ನುವುದನ್ನು ಶೋಧಿಸಲು ರಷ್ಯಾದ ಬಾಹ್ಯಾಕಾಶ ಸಂಸ್ಥೆ (ರೋಸ್ಕೋಸ್ಮೊಸ್) ಸಹಯೋಗದಲ್ಲಿಕೈಗೊಳ್ಳಬೇಕಿದ್ದಮೊದಲ ಮಂಗಳಯಾನ ಯೋಜನೆಯನ್ನು ಕೈಬಿಟ್ಟಿರುವುದಾಗಿ ಯುರೋಪ್ ಬಾಹ್ಯಾಕಾಶ ಸಂಸ್ಥೆ (ಇಎಸ್‌ಎ) ಹೇಳಿದೆ.

'ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ಆಕ್ರಮಣ ವಿರೋಧಿಸಿ ಯುರೋಪ್ ತನ್ನ ಮೊದಲ ರೋವರ್ ಅನ್ನು ಮಂಗಳ ಗ್ರಹಕ್ಕೆ ಕಳುಹಿಸಲು ಇನ್ನು ಮುಂದೆ ಯಾವತ್ತಿಗೂ ಪ್ರಯತ್ನಿಸುವುದಿಲ್ಲ. 'ಎಕ್ಸೋಮಾರ್ಸ್ ರೋವರ್ ಮಿಷನ್' ಅನ್ನು ಸ್ಥಗಿತಗೊಳಿಸಲಾಗುತ್ತಿದೆ' ಎಂದು ತಿಳಿಸಿದೆ.

ರಾಹುಲ್–ಹೂಡಾ ಮಾತುಕತೆ; ಭಿನ್ನಮತೀಯರ ಬೇಡಿಕೆ, ಪಕ್ಷ ಸಂಘಟನೆ ಚರ್ಚೆ

ಆಜಾದ್ ನಿವಾಸದಲ್ಲಿ ಭಿನ್ನರ ಸರಣಿ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಹರಿಯಾಣದ ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಮುಖಂಡ ಭೂಪಿಂದರ್ ಹೂಡಾ ಅವರು ಗುರುವಾರ ಭೇಟಿ ಮಾಡಿದ್ದಾರೆ. ಭಿನ್ನಮತೀಯರು, ಪಕ್ಷ ಸಂಘಟನೆ ಕುರಿತಂತೆ ಅವರು ಮಾತುಕತೆ ನಡೆಸಿದ್ದಾರೆ ಎಂದು ಹೇಳಲಾಗಿದೆ.

ಈ ಮಾತುಕತೆಯ ಬೆನ್ನಲ್ಲೇ, ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಗೆ ಆಗ್ರಹಿಸಿರುವ 23 ಮುಖಂಡರ ಗುಂಪು (ಗ್ರೂಪ್–23) ಗುರುವಾರ ಎರಡು ಬಾರಿ ಸಭೆ ನಡೆಸಿತು. ಒಟ್ಟಾರೆ 24 ಗಂಟೆಗಳ ಅವಧಿಯಲ್ಲಿ 3 ಬಾರಿ ಸಭೆ ಜರುಗಿತು.

ಕಾಂಗ್ರೆಸ್ ಮುಖಂಡ ಗುಲಾಂ ನಬಿ ಆಜಾದ್ ಅವರ ನಿವಾಸದಲ್ಲಿ ಬುಧವಾರ ಮೊದಲ ಸಭೆ ನಡೆದಿತ್ತು. ರಾಹುಲ್ ಗಾಂಧಿ ಜೊತೆಗಿನ ಮಾತುಕತೆ ಬಳಿಕ ಹೂಡಾ ಅವರು ಆಜಾದ್ ಅವರ ನಿವಾಸಕ್ಕೆ ತೆರಳಿ ಸಭೆ ನಡೆಸಿದರು. ಎರಡನೇ ಸಭೆಯಲ್ಲಿ ಮುಖಂಡ ಆನಂದ್ ಶರ್ಮಾ ಅವರೂ ಭಾಗಿಯಾಗಿದ್ದರು. ಹೂಡಾ ಅವರು ರಾಹುಲ್ ಜೊತೆಗಿನ ಮಾತುಕತೆಯ ವಿವರಗಳನ್ನು ಆಜಾದ್‌ಗೆ ನೀಡಿದರು. ಸಂಜೆ ಹೊತ್ತಿಗೆ ಮತ್ತೊಂದು ಸಭೆ ನಡೆಯಿತು. ಮೂರನೇ ಸಭೆಯಲ್ಲಿ ಕಪಿಲ್ ಸಿಬಲ್, ಆನಂದ್ ಶರ್ಮಾ ಇದ್ದರು.



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ನಿರ್ಗಮಿಸಿದ ಭೂಪಿಂದರ್ ಹೂಡಾ

– ಪಿಟಿಐ ಚಿತ್ರ

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಆಜಾದ್ ಜೊತೆ ಬುಧವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದರು. ಇದಾದ ಮರುದಿನವೇ ರಾಹುಲ್–ಹೂಡಾ ಸಭೆ ನಡೆಸಿ ಒಂದು ಗಂಟೆ ಚರ್ಚೆ ನಡೆಸಿದ್ದು ಗಮನಾರ್ಹ. ಸೋನಿಯಾ ಹಾಗೂ ಆಜಾದ್ ಮಧ್ಯೆ ಗುರುವಾರ ನೇರ ಮಾತುಕತೆ ನಡೆಯಲಿದೆ ಎನ್ನಲಾಗಿತ್ತು. ಆದರೆ ಭೇಟಿ ಆಗಲಿಲ್ಲ. ಆಜಾದ್ ಅವರು ಪಕ್ಷದ ಪುನರ್‌ರಚನೆ ಬಗ್ಗೆ ಸಮಗ್ರ ಪ್ರಸ್ತಾವವನ್ನು ಸೋನಿಯಾ ಅವರ ಮುಂದೆ ಇರಿಸುತ್ತಾರೆ ಎಂದು ಹೇಳಲಾಗಿತ್ತು.

ಆಜಾದ್, ಹೂಡಾ, ಶರ್ಮಾ ಸೇರಿದಂತೆ ಪಕ್ಷದ 23 ಮುಖಂಡರು, ಕಾಂಗ್ರೆಸ್‌ನ ನಾಯಕತ್ವ ವಿಚಾರದಲ್ಲಿ ಸ್ಪಷ್ಟನೆ ನೀಡುವಂತೆ ಕೋರಿ ಸೋನಿಯಾ ಗಾಂಧಿ ಅವರಿಗೆ 2020ರ ಆಗಸ್ಟ್‌ನಲ್ಲಿ ಪತ್ರ ಬರೆದಿದ್ದರು.

ಇತ್ತೀಚೆಗೆ ನಡೆದ ಸಿಡಬ್ಲ್ಯುಸಿ ಸಭೆಯಲ್ಲಿ ಭೂಪಿಂದರ್ ಹೂಡಾ ಬಗ್ಗೆ ಪ್ರಿಯಾಂಕಾ ಅವರು ಮೆಚ್ಚುಗೆಯ ಮಾತುಗಳನ್ನಾಡಿದ್ದರು. ರಾಜ್ಯಸಭಾ ಸದಸ್ಯರಾಗಿರುವ ಹೂಡಾ ಅವರು ಉತ್ತರ ಪ್ರದೇಶ ಚುನಾವಣಾ ಪ್ರಚಾರದಲ್ಲಿ ಪ್ರಿಯಾಂಕಾ ಗಾಂಧಿ ಅವರ ಜೊತೆ ತೊಡಗಿಸಿಕೊಂಡಿದ್ದರು.

ಪಕ್ಷ ಬಲಪಡಿಸುವ ಉದ್ದೇಶ: ಗುಲಾಂ ನಬಿ ಆಜಾದ್ ನಿವಾಸದಲ್ಲಿ ಬುಧವಾರ ಮೊದಲ ಸಭೆ ನಡೆಸಿದ್ದ ಜಿ–23 ಗುಂಪಿನ 18 ಮುಖಂಡರು ಜಂಟಿ ಹೇಳಿಕೆ ನೀಡಿದ್ದರು. 'ಸಾಮೂಹಿಕ ಮತ್ತು ಎಲ್ಲರನ್ನೂ ಒಳಗೊಂಡ ನಾಯಕತ್ವ ಅಗತ್ಯ' ಎಂದು ಪ್ರತಿಪಾದಿಸಿದ್ದರು. ಪಕ್ಷವನ್ನು ಇನ್ನಷ್ಟು ಬಲಗೊಳಿಸುವುದು ತಮ್ಮ ಉದ್ದೇಶವೇ ಹೊರತು ದುರ್ಬಲಗೊಳಿಸುವುದು ಅಲ್ಲ ಎಂದು ನಾಯಕರು ಹೇಳಿದ್ದರು.

ಗುಜರಾತ್ ಚುನಾವಣಾ ಕಣಕ್ಕೆ ಎಎಪಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್ : ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಜಯಗಳಿಸಿ ಅಧಿಕಾರ ಹಿಡಿದಿರುವ ಆಮ್ ಆದ್ಮಿ ಪಕ್ಷವು (ಎಎಪಿ), ಈಗ ಗುಜರಾತ್ ವಿಧಾನಸಭಾ ಚುನಾವಣೆ ಮೇಲೆ ಕಣ್ಣಿಟ್ಟಿದೆ. ದೆಹಲಿ ಮುಖ್ಯಮಂತ್ರಿ ಹಾಗೂ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಹಾಗೂ ಪಂಜಾಬ್ ನೂತನ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಗುಜರಾತ್‌ನಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಈ ಇಬ್ಬರೂ ನಾಯಕರು ಸಾವಿರಾರು ಕಾರ್ಯಕರ್ತರ ಜೊತೆ ಅಹಮದಾಬಾದ್‌ನಲ್ಲಿ ಏಪ್ರಿಲ್ 2ರಂದು ಬೃಹತ್ ಪಾದಯಾತ್ರೆ ನಡೆಸಲಿದ್ದಾರೆ. ಮಧ್ಯಮವರ್ಗ ಹಾಗೂ ಬಡವರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ.

ಕೇಜ್ರಿವಾಲ್, ಮಾನ್ ಅವರು ಬಾಪುನಗರ ಮತ್ತು ನಿಕೋಲ್ ಪ್ರದೇಶಗಳಲ್ಲಿ ತಿರಂಗಾ ಯಾತ್ರೆ ಕೈಗೊಳ್ಳಲಿದ್ದಾರೆ.

'ಪಾದಯಾತ್ರೆ ಮೂಲಕ ರಾಜ್ಯದಲ್ಲಿ ಚುನಾವಣಾ ಪ್ರಚಾರ ಆರಂಭವಾಗಲಿದೆ. ಬಿಜೆಪಿಯು ಅವಧಿಪೂರ್ವ ಚುನಾವಣೆಗೆ ಹೋಗುವ ಸಾಧ್ಯತೆಯಿದೆ' ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದ್ದಾರೆ.

ಪಾದಯಾತ್ರೆಗೆ ಅನುಮತಿ ನೀಡುವಂತೆ ಪೊಲೀಸರಿಗೆ ಮನವಿ ಸಲ್ಲಿಸಲಾಗಿದೆ. 'ರಾಜ್ಯದ ವಿವಿಧ ಭಾಗಗಳಿಂದ 10 ಸಾವಿರ ಜನರು ಬರುವ ನಿರೀಕ್ಷೆಯಿದೆ' ಎಂದು ಪಕ್ಷದ ಮುಖಂಡ ಆರ್.ಸಿ. ಪಟೇಲ್ ಅವರು ಪೊಲೀಸರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪಂಜಾಬ್: ಭ್ರಷ್ಟಾಚಾರ ತಡೆ ಸಹಾಯವಾಣಿ ಆರಂಭ

ಚಂಡೀಗಡ (ಪಿಟಿಐ): ಪಂಜಾಬ್‌ನಲ್ಲಿ ಭ್ರಷ್ಟಾಚಾರ ತಡೆ ಸಹಾಯವಾಣಿಗೆ ಮಾರ್ಚ್ 23ರಂದು ಚಾಲನೆ ನೀಡುವುದಾಗಿ ರಾಜ್ಯದ ಮುಖ್ಯಮಂತ್ರಿ ಭಗವಂತ ಮಾನ್ ಅವರು ಗುರುವಾರ ಘೋಷಿಸಿದರು.

ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಜನ್ಮ ದಿನಾಚರಣೆಯಂದು ಈ ಸಂಖ್ಯೆಯನ್ನು ಪ್ರಕಟಿಸಲಾಗುವುದು ಎಂದು ಮಾನ್ ಹೇಳಿದರು.

ಈ ಕುರಿತು ವಿಡಿಯೊ ಸಂದೇಶದ ಮೂಲಕ ಮಾಹಿತಿ ನೀಡಿರುವ ಭಗವಂತ ಮಾನ್ ಅವರು, 'ಇದು ನನ್ನ ವೈಯಕ್ತಿಕ ಮೊಬೈಲ್ ಸಂಖ್ಯೆ ಆಗಿರಲಿದೆ. ಯಾವುದೇ ಅಧಿಕಾರಿ ಲಂಚ ನೀಡುವಂತೆ ನಿಮ್ಮನ್ನು ಕೇಳಿದರೆ ಅದನ್ನು ನಿರಾಕರಿಸಬೇಡಿ. ಅದರ ವಿಡಿಯೊ ಅಥವಾ ಆಡಿಯೊ ಮುದ್ರಿಸಿ ಅದನ್ನು ನಾವು ನೀಡುವ ಸಂಖ್ಯೆಗೆ ಕಳುಹಿಸಿ. ನೀವು ಕಳಿಸುವ ವಿಡಿಯೊ ಅಥವಾ ಆಡಿಯೊವನ್ನು ನಮ್ಮ ಕಚೇರಿ ಪರಿಶೀಲಿಸುತ್ತದೆ ಎಂಬ ಭರವಸೆಯನ್ನು ನಾನು ನೀಡುತ್ತೇನೆ. ಒಂದುವೇಳೆ ಭ್ರಷ್ಟ ವ್ಯಕ್ತಿ ಸಿಕ್ಕಿಬಿದ್ದರೆ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಅವರು ಹೇಳಿದರು. ಜೊತೆಗೆ, ಭ್ರಷ್ಟಾಚಾರರಹಿತ ಸರ್ಕಾರವನ್ನು ಪಂಜಾಬ್‌ಗೆ ನೀಡುವುದಾಗಿ ಭರವಸೆ ನೀಡಿದರು.

ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷ ಸರ್ಕಾರ ರಚಿಸಿದಾಗಲೂ ಭ್ರಷ್ಟ ಅಧಿಕಾರಿಗಳ ವಿಡಿಯೊಗಳನ್ನು ಒದಗಿಸುವಂತೆ ಜನರನ್ನು ಕೇಳಿತ್ತು. ಈ ಕ್ರಮದಿಂದ ದೆಹಲಿಯಲ್ಲಿ ಭ್ರಷ್ಟಾಚಾರವು ಸಂಪೂರ್ಣವಾಗಿ ಕೊನೆಗೊಂಡಿತು ಎಂದು ಹೇಳಿದರು.

ಪಂಜಾಬ್‌ನ ಇಹಾಸದಲ್ಲೇ ಇದು ಅತ್ಯಂತ ದೊಡ್ಡ ಘೋಷಣೆ ಎಂದು ಮಾನ್ ಅವರು ಹೇಳಿದರು.

ಮಾನ್ ಅವರ ಘೋಷಣೆಯನ್ನು ಸ್ವಾಗತಿಸಿದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, 'ನಮ್ಮ ಸರ್ಕಾರವು ರಾಷ್ಟ್ರ ರಾಜಧಾನಿಯಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡಿದೆ. ಈಗ ಮಾನ್ ಮತ್ತು ಅವರ ಸಚಿವರು ಪಂಜಾಬ್‌ನಲ್ಲೂ ಪ್ರಾಮಾಣಿಕ ಸರ್ಕಾರ ನೀಡಲಿದ್ದಾರೆ' ಎಂದರು.

ರಾಜ್ಯಸಭೆ: ಎಎಪಿ ಅಭ್ಯರ್ಥಿ ಹರಭಜನ್?

ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಹರಭಜನ್ ಸಿಂಗ್ ಅವರನ್ನು ಆಮ್ ಆದ್ಮಿ ಪಕ್ಷವು (ಎಎಪಿ) ರಾಜ್ಯಸಭಾ ಸದಸ್ಯತ್ವದ ಅಭ್ಯರ್ಥಿಯಾಗಿ ಆಯ್ಕೆ ಮಾಡುವ ಸಾಧ್ಯತೆ ಇದೆ. 'ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಸೇರಿ ಎಎಪಿಯ ಪ್ರಮುಖ ನಾಯಕರು ಹರಭಜನ್ ಸಿಂಗ್ ಅವರನ್ನು ಪಕ್ಷದ ರಾಜ್ಯಸಭೆ ಅಭ್ಯರ್ಥಿ ಆಗಬೇಕು ಎಂದು ಕೇಳಿಕೊಂಡಿದ್ದಾರೆ. ರಾಜ್ಯದಲ್ಲಿ ಕ್ರೀಡಾ ಕ್ಷೇತ್ರದ ಗುಣಮಟ್ಟ ಕುಸಿದಿದೆ. ಅದನ್ನು ಮೇಲೆತ್ತುವ ಕೆಲಸವನ್ನು ಹರಭಜನ್ ಸಿಂಗ್ ಮಾಡಬೇಕು ಎಂದು ಮಾನ್ ಅವರು ಬಯಸಿದ್ದಾರೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.


ಶುಕ್ರವಾರ, ಮಾರ್ಚ್ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 77 | ಪುಟ 16

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ

'ತೋತಾಪುರಿ' ತಂದು 'ರಾಘವೇಂದ್ರ ಸ್ಟೋರ್ಸ್'ನಲ್ಲಿ 'ರಂಗನಾಯಕ' ಜಗ್ಗೇಶ್ ನವರಸದ ಭರ್ಜರಿ ಭೋಜನ ಸಿದ್ಧಪಡಿಸಿದ್ದಾರೆ

ಎಲ್ಲರಿಗೂ ಹೋಳಿ ಹಬ್ಬದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	₹/$
57,864 ▲	17,287 ▲	75.84 ▲

ಮಹಿಳೆಯರು, ಮಕ್ಕಳು ಆಶ್ರಯ ಪಡೆದಿದ್ದ ರಂಗಮಂದಿರದ ಮೇಲೆ ರಷ್ಯಾ ದಾಳಿ: ಉಕ್ರೇನ್

1,000 ಜನರಿದ್ದ ಕಟ್ಟಡ ಧ್ವಂಸ

ಕೀವ್ (ಎಪಿ/ಎನ್‌ವೈಟಿ): ಯುದ್ಧದಿಂದ ತಲ್ಲಣಗೊಂಡಿರುವ ಉಕ್ರೇನ್‌ನ ನಗರ ಮರಿಯುಪೋಲ್‌ನ ರಂಗಮಂದಿರವೊಂದರ ಮೇಲೆ ರಷ್ಯಾ ಬುಧವಾರ ರಾತ್ರಿ ಬಾಂಬ್ ದಾಳಿ ನಡೆಸಿದೆ ಎಂದು ಉಕ್ರೇನ್ ಹೇಳಿದೆ. ಮೂರು ಮಹಡಿಯ ಈ ರಂಗಮಂದಿರದಲ್ಲಿ ಮಕ್ಕಳು ಮತ್ತು ಮಹಿಳೆಯರು ಸೇರಿ ಭಾರಿ ಸಂಖ್ಯೆಯಲ್ಲಿ ಜನರು ಆಶ್ರಯ ಪಡೆದಿದ್ದರು ಎಂದು ವರದಿಯಾಗಿದೆ. ಕಟ್ಟಡದ ಮಧ್ಯಭಾಗವು ಸಂಪೂರ್ಣವಾಗಿ ನಾಶವಾಗಿದೆ. ಬಾಂಬ್ ದಾಳಿಯಲ್ಲಿ ಬದುಕುಳಿದವರ ರಕ್ಷಣಾ ಕಾರ್ಯಾಚರಣೆ ಗುರುವಾರ ಆರಂಭವಾಗಿದೆ.

ಕಟ್ಟಡದಲ್ಲಿ 1,000ದಿಂದ 1,200 ಜನರು ಆಶ್ರಯ ಪಡೆದಿದ್ದರು ಎಂದು ಮರಿಯುಪೋಲ್‌ನ ಉಪ ಮೇಯರ್ ಹೇಳಿದ್ದಾಗಿ 'ಬಿಬಿಸಿ' ವರದಿ ಮಾಡಿದೆ. ಸಾವು ನೋವಿನ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲ.

ಈ ಪ್ರದೇಶದ ಮೇಲೆ ರಷ್ಯಾ ಪಡೆಗಳು ನಿರಂತರವಾಗಿ ಶೆಲ್ ದಾಳಿ ನಡೆಸುತ್ತಿವೆ. ಹಾಗಾಗಿ ರಕ್ಷಣಾ ಕಾರ್ಯಾಚರಣೆ ಮತ್ತು ಸಾವು ನೋವಿನ ಮಾಹಿತಿ ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ ಎಂದು ಮೇಯರ್ ಅವರ ಸಲಹೆಗಾರರೊಬ್ಬರು ಹೇಳಿದ್ದಾರೆ.

ರಷ್ಯಾ ಪಡೆಗಳಿಗೆ ಉಕ್ರೇನ್‌ನಲ್ಲಿ ಭಾರಿ ಪ್ರತಿರೋಧ ಮುಂದುವರಿದಿದೆ ಮತ್ತು ಭಾರಿ ನಷ್ಟವೂ ಉಂಟಾಗಿದೆ. ಹೀಗಾಗಿ, ಉಕ್ರೇನ್‌ನ ನಗರಗಳ ಮೇಲೆ ಬಾಂಬ್ ಮತ್ತು ಕ್ಷಿಪಣಿ ದಾಳಿಯನ್ನು ರಷ್ಯಾ ಹೆಚ್ಚಿಸಿದೆ. ಯುದ್ಧವು ನಾಲ್ಕನೇ ವಾರಕ್ಕೆ ಕಾಲಿರಿಸಿದ್ದು, ಜನವಸತಿ ಪ್ರದೇಶಗಳನ್ನೂ ಬಿಡದೆ ರಷ್ಯಾ ದಾಳಿ ನಡೆಸುತ್ತಿದೆ. ಆಹಾರ ಸಂಗ್ರಹಿಸಲು ಸರದಿಯಲ್ಲಿ ನಿಂತಿದ್ದವರ ಮೇಲೆಯೂ ದಾಳಿ ನಡೆಸಲಾಗಿದೆ.

'ರಷ್ಯಾ ಪಡೆಯು ದೊಡ್ಡ ಬಾಂಬನ್ನು ಉದ್ದೇಶಪೂರ್ವಕವಾಗಿ ರಂಗಮಂದಿರದ ಮೇಲೆ ಹಾಕಿದೆ. ನಮ್ಮ ಜನರ ಮೇಲೆ ರಷ್ಯಾ ಮಾಡುತ್ತಿರುವ ಅನಾಚಾರ ನೋಡಿ ಹೃದಯ ಒಡೆದು ಹೋಗಿದೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡೊಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಉಕ್ರೇನ್ ಮತ್ತು ರಷ್ಯಾ ನಡುವೆ ಸಂಧಾನ ಮಾತುಕತೆ ಗುರುವಾರ ನಾಲ್ಕನೇ ದಿನಕ್ಕೆ ಕಾಲಿಟ್ಟಿದೆ. ಆದರೆ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಪ್ರತಿಕೂಲ ಹೇಳಿಕೆಗಳನ್ನು ನಿರಂತರವಾಗಿ ನೀಡುತ್ತಿದ್ದಾರೆ. ಹಾಗಾಗಿ, ಮಾತುಕತೆಯಲ್ಲಿ ಯಾವುದೇ ಭರವಸೆ ಮೂಡಿಲ್ಲ. ಪಶ್ಚಿಮ ದೇಶಗಳ ಪರವಾಗಿರುವ ರಷ್ಯನ್ನರನ್ನು 'ಕೊಳಚೆ ಮತ್ತು ದೇಶದ್ರೋಹಿಗಳು' ಎಂದು ಪುಟಿನ್ ಹೇಳಿದ್ದಾರೆ. ಅವರಿಗೆ ತಕ್ಕ ಶಾಸ್ತಿಯಾಗಬೇಕು ಎಂದಿದ್ದಾರೆ.

ರಂಗಮಂದಿರದ ಮೇಲೆ ದಾಳಿ ನಡೆಸಲಾಗಿದೆ ಎಂಬ ಆರೋಪವನ್ನು ರಷ್ಯಾ ಅಲ್ಲಗಳೆದಿದೆ.



ಉಕ್ರೇನ್‌ನ ಮರಿಯುಪೋಲ್‌ನಲ್ಲಿ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಗೆ ಹಾನಿಗೊಂಡ ರಂಗಮಂದಿರ —ಎಎಫ್‌ಪಿ ಚಿತ್ರ

- ಅಮೆರಿಕ ಸೇರಿದಂತೆ ದುರಹಂಕಾರದಿಂದ ವರ್ತಿಸುವ ಎಲ್ಲ ಶತ್ರುಗಳಿಗೆ ತಕ್ಕ ಪಾಠ ಕಲಿಸುವ ಸಾಮರ್ಥ್ಯ ನಮಗಿದೆ: ರಷ್ಯಾದ ಭದ್ರತಾ ಮಂಡಳಿ ಉಪಕಾರ್ಯದರ್ಶಿ ಡಿಮಿಟ್ರ ಮೆಡ್ವೆಡೆವ್
- ಉಕ್ರೇನ್‌ನಲ್ಲಿ ಇನ್ನೂ 15–20 ಭಾರತೀಯರು ಸಿಲುಕಿದ್ದು, ಅವರನ್ನು ಕರೆತರುವ ಪ್ರಯತ್ನ ಮುಂದುವರಿದಿದೆ: ವಿದೇಶಾಂಗ ಸಚಿವಾಲಯ
- ರಷ್ಯಾದ ಯುದ್ಧನೌಕೆಯೊಂದನ್ನು ಕಪ್ಪು ಸಮುದ್ರದಲ್ಲಿ ಮುಳುಗಿಸಲಾಗಿದೆ ಎಂದು ಉಕ್ರೇನ್ ಹೇಳಿಕೊಂಡಿದೆ.
- ಉಕ್ರೇನ್ ಪಡೆಗಳಿಂದ ರಷ್ಯಾದ 7,000 ಸೈನಿಕರ ಹತ್ಯೆ: ಅಮೆರಿಕ
- ರಷ್ಯಾ ಪಡೆಗಳ ಬೇಕಾಬಿಟ್ಟಿ ದಾಳಿಯಿಂದಾಗಿ ಈವರೆಗೆ ಮರಿಯುಪೋಲ್‌ನಲ್ಲಿ 2,000ಕ್ಕೂ ಹೆಚ್ಚು ನಾಗರಿಕರು ಬಲಿಯಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ
- ಉಕ್ರೇನ್‌ನ ಹಾರ್ಕಿವ್ ನಗರದ ಒಂದು ಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರದ ಮೇಲೆ ರಷ್ಯಾ ನಡೆಸಿದ ದಾಳಿಯಲ್ಲಿ 21 ಜನರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ

'ಗೈರಾದವರಿಗೆ ಮರು ಪರೀಕ್ಷೆ ಇಲ್ಲ'

ಹಿಜಾಬ್: ಮಧ್ಯಂತರ ಆದೇಶಕ್ಕೂ ಮೊದಲಿನವರಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಜಾಬ್ ಕುರಿತು ಹೈಕೋರ್ಟ್ ಮಧ್ಯಂತರ ಆದೇಶ ನೀಡುವುದಕ್ಕೆ ಮೊದಲು ಪರೀಕ್ಷೆಗಳಿಗೆ ಹಾಜರಾಗದ ವಿದ್ಯಾರ್ಥಿನಿಯರಿಗೆ ಮತ್ತೊಮ್ಮೆ ಪರೀಕ್ಷೆ ನಡೆಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಲಿದೆ. ಆದೇಶದ ಬಳಿಕ ಪರೀಕ್ಷೆಗೆ ಹಾಜರಾಗದವರನ್ನು ಪರಿಗಣಿಸುವುದಿಲ್ಲ' ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ವಿಧಾನಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ಬಿಜೆಪಿಯ ರಘುಪತಿ ಭಟ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಪರೀಕ್ಷೆ ನಡೆಸುವ ಬಗ್ಗೆ ಸರ್ಕಾರ ನಿಲುವು ತಳೆಯಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ಬಗ್ಗೆ ಮುಖ್ಯಮಂತ್ರಿ ಮತ್ತು ಇತರರ ಜತೆ ಚರ್ಚೆ ನಡೆಸಿ ನಿರ್ಣಯ ತೆಗೆದುಕೊಳ್ಳುತ್ತೇವೆ' ಎಂದು ಭರವಸೆ ನೀಡಿದರು.

ಪ್ರತಿಭಟನೆಯ ಹಕ್ಕು ಇದೆ: ಸಿದ್ದರಾಮಯ್ಯ

'ಹೈಕೋರ್ಟ್ ತೀರ್ಪಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಲು ಶಾಂತಿಯುತವಾಗಿ ಬಂದ್, ಪ್ರತಿಭಟಿಸುವುದು ಸಂವಿಧಾನಾತ್ಮಕ ಹಕ್ಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಪಾದಿಸಿದರು.

'ಪ್ರತಿಭಟನೆ, ಬಂದ್‌ಗಳನ್ನು ಸರ್ಕಾರ ಹೇಗೆ ತಡೆಯಲು ಸಾಧ್ಯ. ಅದನ್ನು ಹತ್ತಿಕ್ಕಬಾರದು. ಹಾಗಂತ ನಾನು ಹೈಕೋರ್ಟ್ ಆದೇಶವನ್ನು ಅಗೌರವಿಸುತ್ತಿಲ್ಲ. ನ್ಯಾಯಾಲಯದ ವಿರುದ್ಧವೂ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಜಗದೀಶ ಶೆಟ್ಟರ್, 'ನೀವೊಬ್ಬ ವಕೀಲರಾಗಿ ಈ ರೀತಿ ಮಾತನಾಡುವುದು ಸರಿಯಲ್ಲ. ಇಂತಹ ಬೇಡಿಕೆಗಳಿಗೆ ಕೊನೆ ಇರುವುದಿಲ್ಲ. ಇದಕ್ಕೆ ಅವಕಾಶ ಕೊಟ್ಟರೆ ಅರಾಜಕತೆ ಸೃಷ್ಟಿ ಆಗುತ್ತದೆ' ಎಂದರು.

5ನೇ ಪುಟ ನೋಡಿ

ಅಭಿವೃದ್ಧಿ ಕಾಣದ ಶಾಂತವೇರಿ

• ನಿರಂಜನ ವಿ.

ತೀರ್ಥಹಳ್ಳಿ: ರಾಜ್ಯದ 7.80 ಲಕ್ಷಕ್ಕೂ ಹೆಚ್ಚು ಗೇಣಿದಾರರ ಭೂಮಿಯ ಹಕ್ಕಿಗಾಗಿ ಶ್ರಮಿಸಿದ್ದ ಶಾಂತವೇರಿ ಗೋಪಾಲಗೌಡರ ಜನ್ಮಭೂಮಿ ಇಂದಿಗೂ ಅಭಿವೃದ್ಧಿ ಕಂಡಿಲ್ಲ. ಹುಟ್ಟೂರಿನಲ್ಲಿ ಅವರ ಕುರುಹುಗಳು ಮಾಸಿವೆ. 20 ಅಡಿ ಜಾಗದಲ್ಲಿದ್ದ ಹುಲ್ಲಿನ ಗುಡಿಸಲಿನ ನೆಲಗಟ್ಟು, ಒಂದು ಹಳೆಯ ತೆಂಗಿನಮರ ಮಾತ್ರ ಕಾಣಬಹುದು.

ಗೋಪಾಲಗೌಡರ ಸ್ಮರಣೆಗಾಗಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ 2012-13ರಲ್ಲಿ ₹ 5 ಲಕ್ಷ ಮೊತ್ತದಲ್ಲಿ ನಿರ್ಮಾಣವಾದ ಸಮುದಾಯ ಭವನ ಉದ್ಘಾಟನೆಗೂ ಮುನ್ನವೇ ಶಿಥಿಲಾವಸ್ಥೆ ತಲುಪಿದೆ. ಇಂದಿಗೂ ಶಾಂತವೇರಿಗೆ ಹೋಗಲು ಸರಿಯಾದ ರಸ್ತೆ ಇಲ್ಲ. ಸಮುದಾಯ ಭವನದ ಕಟ್ಟಡದ ಪಕ್ಕದಲ್ಲಿ ಸುಮಾರು 1 ಕಿ.ಮೀ ದೂರದ ಆರಗದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕುಡಿಯುವ ನೀರು ಪೂರೈಕೆಗೆಂದು 2020ರಲ್ಲಿ ₹ 1.5 ಲಕ್ಷ ವೆಚ್ಚದಲ್ಲಿ ಕೊಳವೆಬಾವಿ ಕೊರೆಸಲಾಗಿದೆ. ಶಾಲೆ ಮತ್ತು ಸ್ಥಳೀಯರಿಗೂ ಈ ಕೊಳವೆಬಾವಿಯಿಂದ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ ಎಂಬುದು ಗ್ರಾಮದ ಮಹಿಳೆಯರ ದೂರು.

ಪುರಂದರ ದಾಸರ ಹುಟ್ಟೂರು ಆರಗ ಸಮೀಪದ ಕ್ಷೇಮಪುರ ಎಂದು 2018ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಇದೇ ನೆಲದಿಂದ ಸ್ವತಃ ಗೋಪಾಲಗೌಡರು, ಪಟ್ಟಮಕ್ಕಿ ರತ್ನಾಕರ್ ಅರಿಸಿ ಬಂದಿದ್ದರು.

5ನೇ ಪುಟ ನೋಡಿ

ಅನುಭವ ಮಂಟಪ

ಮೀಸಲಾತಿ ಬಡತನ ನಿರ್ಮೂಲನೆ ಕಾರ್ಯಕ್ರಮ ಅಲ್ಲ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕಲಬುರಗಿ: ಹೋಳಿ ಆಚರಿಸಿದ ಹಿಂದೂ– ಮುಸ್ಲಿಂ ಯುವಕರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಹೋಳಿ ಹಬ್ಬದ ಮುನ್ನಾದಿನ ಗುರುವಾರವೇ ನಗರದ ವಿವಿಧೆಡೆ ರಂಗಿನಾಟ ನಡೆಯಿತು. ಇಲ್ಲಿನ ಪುಟಾಣಿ ಗಲ್ಲಿಯಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಹಿಂದೂ ಹಾಗೂ ಮುಸ್ಲಿಂ ಯುವಕರು ಪರಸ್ಪರ ಬಣ್ಣ ಹಚ್ಚಿ, ಹೆಜ್ಜೆ ಹಾಕಿ ಸಂಭ್ರಮಿಸಿದರು.

ಪುಟಾಣಿಗಲ್ಲಿ ವ್ಯಾಪಾರಸ್ಥರ ಮುಖಂಡರಾದ ಬಾಬುರಾವ್ ಜಹಗೀರದಾರ್, ಇಮ್ರಾನ್, ಇಕ್ಬಾಲ್ ಅವರ ನೇತೃತ್ವದಲ್ಲಿ ಎಲ್ಲರೂ ಹೋಳಿ ಹಬ್ಬದ ಹಾಡು ಹಾಡಿ, ಕುಣಿದು ನಲಿದರು.

ನಗರದ ಮಿಲನ್ ಚೌಕ್, ಚಪ್ಪಲ್ ಬಜಾರ್, ಬ್ರಹ್ಮಪೂರ, ಒಕ್ಕಲಗೇರಿ, ರೋಜಾ ಬಡಾವಣೆ ಸೇರಿ ವಿವಿಧೆಡೆ ಗುರುವಾರವೇ ಬಣ್ಣದಾಟ ನಡೆಯಿತು.

'ಗುರುವಾರ ಮಧ್ಯಾಹ್ನ 1ಕ್ಕೆ ಆರಂಭವಾಗುವ ಹುಣ್ಣಿಮೆಯು ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಮುಗಿಯುತ್ತದೆ. ಹುಣ್ಣಿಮೆ ಮುಗಿದ ಬಳಿಕ ಕಾಮನನ್ನು ಸುಡುವುದು ಸರಿಯಲ್ಲ. ಮೇಲಾಗಿ, ಶುಕ್ರವಾರ ಬೆಳಿಗ್ಗೆಯಿಂದಲೇ ಮೊಸರು ಗಡಿಗೆ ಒಡೆಯುವ ಸ್ಪರ್ಧೆ ಆರಂಭವಾಗುತ್ತವೆ. ಹೀಗಾಗಿ, ಮುನ್ನಾದಿನವೇ ನಾವು ಬಣ್ಣ ಎರಚಾಡಿ, ಕಾಮನ ಪ್ರತಿಮೆ ಸುಡುವ ಪದ್ಧತಿ ರೂಢಿಸಿಕೊಂಡಿದ್ದೇವೆ' ಎಂದು ಬಾಬುರಾವ್ ತಿಳಿಸಿದರು.



ಕಲಬುರಗಿಯ ಪುಟಾಣಿ ಗಲ್ಲಿಯಲ್ಲಿ ಗುರುವಾರ ಹಿಂದೂ– ಮುಸ್ಲಿಂ ಯುವಕರು ಹೋಳಿ ಅಂಗವಾಗಿ ಬಣ್ಣದಾಟ ಆಡಿ, ಕುಣಿದು ಕುಪ್ಪಳಿಸಿದರು —ಪ್ರಜಾವಾಣಿ ಚಿತ್ರ

ಚುನಾವಣೆಗೆ ಸಿದ್ಧವಾಗುತ್ತಿರುವ ಬಿಜೆಪಿ

ಸಚಿವ ಸಂಪುಟ ಸರ್ಜರಿ ಸಾಧ್ಯತೆ ವಿರಳ

• ಸಿದ್ದಯ್ಯ ಹಿರೇಮಠ

ನವದೆಹಲಿ: ವಿಧಾನಸಭೆ ಚುನಾವಣೆಗೆ ಮೊದಲು ಯಾವುದೇ ಗೊಂದಲಗಳಿಗೆ ಎಡೆ ಮಾಡಿಕೊಡದಿರಲು ಬಿಜೆಪಿ ಹೈಕಮಾಂಡ್ ಬಯಸಿರುವುದರಿಂದ, ರಾಜ್ಯ ಸಚಿವ ಸಂಪುಟದ ವಿಸ್ತರಣೆ ಅಥವಾ ಪುನರ್ ರಚನೆಯ ಸಾಧ್ಯತೆಗಳು ವಿರಳವಾಗಿವೆ.

ಇನ್ನೂ ಒಂದು ವರ್ಷ ಬಾಕಿ ಉಳಿದಿರುವಂತೆಯೇ ಚುನಾವಣೆಯ ಜಪ ಆರಂಭಿಸಿರುವ ಬಿಜೆಪಿ ಹೈಕಮಾಂಡ್, ಕಾರ್ಯಕರ್ತರೊಂದಿಗೆ ಚಿಂತನ–ಮಂಥನ ಸಭೆ, ಬೂತ್ ಮಟ್ಟದ ನೋಂದಣಿ ಅಭಿಯಾನ ಹಾಗೂ ಪ್ರಮುಖರ ರ‍್ಯಾಲಿಗೆ ಸಿದ್ಧತೆ ನಡೆಸುತ್ತಿದೆ.

ಸಚಿವ ಸ್ಥಾನದ ಆಕಾಂಕ್ಷಿಗಳಲ್ಲಿ ಕೆಲವರಿಗೆ ಅಸಮಾಧಾನವಾಗಿ, ಅನಗತ್ಯ ಗೊಂದಲ ಸೃಷ್ಟಿಯಾಗಬಹುದು ಎಂಬ ಕಾರಣದಿಂದಲೇ ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆಗೆ ಕೈಹಾಕುವುದು ಬೇಡ ಎಂಬ ಸಂದೇಶವನ್ನು ಹೈಕಮಾಂಡ್ ರವಾನಿಸಿದೆ ಎಂದು ಪಕ್ಷದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ನಾಲ್ಕು ಸ್ಥಾನಗಳು ಖಾಲಿ ಉಳಿದಿವೆ. ಆದರೆ, ಆಕಾಂಕ್ಷಿಗಳು ಡಜನ್‌ಗೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಸಚಿವ ಸ್ಥಾನ ದೊರೆಯದೇ ನಿರಾಸೆಗೆ ಒಳಗಾದವರು ಬಂಡೇಳುವುದು ಸಹಜ. ಚುನಾವಣಾ ಹೊಸ್ತಿಲಲ್ಲಿ ಅಂತಹ ಅನಗತ್ಯ ಗೊಂದಲಕ್ಕೆ ಅವಕಾಶ ನೀಡುವುದು ಸರಿಯಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದರು.

ಕಳೆದ ತಿಂಗಳು ದೆಹಲಿಗೆ ಭೇಟಿ ನೀಡಿದ್ದ ಬೊಮ್ಮಾಯಿ, 'ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವಂತೆ ಕೆಲವರು ದುಂಬಾಲು ಬಿದ್ದಿದ್ದು, ಕೂಡಲೇ ಅನುಮತಿ ನೀಡಬೇಕು' ಎಂಬ ಮನವಿಯನ್ನು ವರಿಷ್ಠರಲ್ಲಿ ಸಲ್ಲಿಸಿದ್ದರು. ಐದು ರಾಜ್ಯಗಳ ಚುನಾವಣೆ ನಂತರ ಈ ಬಗ್ಗೆ ಗಮನ ಹರಿಸುವ ಉತ್ತರ ದೊರೆತಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆಗೆ ಕೈಹಾಕುವುದು ಸೂಕ್ತವಲ್ಲ ಎಂಬ ತೀರ್ಮಾನ ವರಿಷ್ಠರದ್ದಾಗಿದೆ ಎಂದೂ ಅವರು ಹೇಳಿದರು.

'ಪರಿವಾರವಾದ ಮತ್ತು ಜಾತಿವಾದಕ್ಕೆ ಪಕ್ಷದಲ್ಲಿ ಅವಕಾಶ ಇಲ್ಲ' ಎಂಬ ಸಂದೇಶವನ್ನೂ ಪ್ರಧಾನಿ ಮೋದಿ ಇತ್ತೀಚೆಗಷ್ಟೇ ನಡೆದ ಪಕ್ಷದ ಸಂಸದೀಯ ಮಂಡಳಿ ಸಭೆಯಲ್ಲಿ ನೀಡಿದ್ದರಿಂದ, ಭವಿಷ್ಯದಲ್ಲಿ ಪಕ್ಷದ ರಾಜ್ಯ ನಾಯಕರ ವಾರಸುದಾರರಿಗೆ ಪ್ರಮುಖ ಸ್ಥಾನದ ಅವಕಾಶ ದೊರೆಯುವ ಸಾಧ್ಯತೆಗಳೂ ಕ್ಷೀಣಿಸಿವೆ. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರೂ ಇದಕ್ಕೆ ಹೊರತಾಗಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಪಕ್ಷ ಸಂಘಟನೆಗೆ ಒತ್ತು ನೀಡಿ: ಚುನಾವಣೆಗೆ ಮೊದಲು ಪಕ್ಷ ಸಂಘಟನೆಗೆ ಒತ್ತು ನೀಡುವಂತೆ ಬೂತ್ ಮಟ್ಟದ ಮುಖಂಡರಿಂದ ಸಚಿವ ಸ್ಥಾನದಲ್ಲಿ ಇರುವವರಿಗೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಆದರೆ, ಈ ಬಗ್ಗೆ ಯಾರೆಲ್ಲ ಗಂಭೀರವಾಗಿದ್ದಾರೆ ಎಂಬ ಮಾಹಿತಿಯನ್ನೂ ವರಿಷ್ಠರು ಗುಪ್ತವಾಗಿಯೇ ಕಲೆ ಹಾಕುತ್ತಿದ್ದಾರೆ.

ಪಕ್ಷದ ಜಿಲ್ಲಾ, ತಾಲ್ಲೂಕು ಮಟ್ಟದ ಕಚೇರಿಗಳಿಗೆ ಶಾಸಕರು, ಸಂಸದರು, ಸಚಿವರು ಇತ್ತೀಚೆಗೆ ಎಷ್ಟು ಬಾರಿ ಭೇಟಿ ನೀಡಿದ್ದಾರೆ?, ಪಕ್ಷ ಸಂಘಟನೆಗೆ ಆಸಕ್ತಿ ತೋರಿದ್ದಾರೋ ಇಲ್ಲವೋ?, ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿದ್ದಾರೆಯೇ?, ಜನಸಾಮಾನ್ಯರ ಅಹವಾಲುಗಳ ಬಗ್ಗೆ ಗಮನ ಹರಿಸಿದ್ದಾರೆಯೇ? ಎಂಬ ಸಮಗ್ರ ಮಾಹಿತಿ ಕಲೆ ಹಾಕುವಂತೆ ಪಕ್ಷದ ರಾಜ್ಯ ಉಸ್ತುವಾರಿಗೆ ಸೂಚನೆ ನೀಡಲಾಗಿದೆ.

ಚುನಾವಣೆಯ ಗೆಲುವು, ಶಾಸಕ ಸ್ಥಾನ ಮತ್ತು ಸಚಿವಗಿರಿಯ ಬಗ್ಗೆ ಮಾತ್ರ ಆಲೋಚಿಸುತ್ತ, ಪಕ್ಷ ಸಂಘಟನೆಯನ್ನು ನಿರ್ಲಕ್ಷಿಸಿದವರಿಗೆ ಮುಂಬರುವ ಚುನಾವಣೆಯಲ್ಲಿ ಟಿಕೆಟ್ ದೊರೆಯುವ ಸಾಧ್ಯತೆಗಳೂ ಇಲ್ಲ ಎಂದು ಅವರು ಹೇಳಿದರು.

ಪ್ರಜಾವಾಣಿ ವಿಶೇಷ

ಒತ್ತಡ ನಿವಾರಣೆಗೆ ಬೊಮ್ಮಾಯಿ ಮನವಿ

ನವದೆಹಲಿ: ನಾಲ್ವರನ್ನು ಸಂಪುಟದಿಂದ ಕೈಬಿಟ್ಟು, ಎಂಟು ಜನ ಆಕಾಂಕ್ಷಿಗಳಿಗೆ ಸಚಿವ ಸ್ಥಾನ ನೀಡಲು ಮುಖ್ಯಮಂತ್ರಿ ಬೊಮ್ಮಾಯಿ ಅನುಮತಿ ಕೋರಿದ್ದಾರೆ. 'ಸಚಿವ ಸ್ಥಾನಕ್ಕೆ ಸಾಕಷ್ಟು ಒತ್ತಡವಿದೆ, ಪುನರ್ ರಚನೆ ಅಥವಾ ವಿಸ್ತರಣೆ ಆಗದಿದ್ದರೆ ಅವಕಾಶ ವಂಚಿತರು ಬಂಡೇಳುವ ಸಾಧ್ಯತೆ ಇದ್ದು, ಒತ್ತಡ ನಿವಾರಿಸಿ' ಎಂದೂ ಅವರು ವರಿಷ್ಠರಿಗೆ ಮನವರಿಕೆ ಮಾಡುವ ಉದ್ದೇಶದಿಂದ ಶೀಘ್ರವೇ ದೆಹಲಿಗೆ ಭೇಟಿ ನೀಡುವ ಸಾಧ್ಯತೆ ಇದೆ. ಆದರೆ, ಈ ಸಂಬಂಧ ವರಿಷ್ಠರಿಂದ ಅನುಮತಿ ದೊರೆಯುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

19ಕ್ಕೆ ಜಲಸ್ಪಂದನ ಕಾರ್ಯಕ್ರಮ

ಬೆಂಗಳೂರು: ನೀರು ಮತ್ತು ಒಳ ಚರಂಡಿಗೆ ಸಂಬಂಧಿಸಿದಂತೆ ಜಲ ಮಂಡಳಿಯು ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಲು ಪ್ರತಿ 3ನೇ ಶನಿವಾರ ಜನ ಸ್ನೇಹಿ ಹೆಜ್ಜೆಯಾದ 'ಜಲಸ್ಪಂದನ' ಕಾರ್ಯಕ್ರಮವನ್ನು ದೂರವಾಣಿ ಮೂಲಕ ಆಯೋಜಿಸಿದೆ. ಇದೇ 19ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ 16 ವಿವಿದೆಡೆ ಮುಖ್ಯ ಎಂಜಿನಿಯರ್, ಹೆಚ್ಚುವರಿ ಮುಖ್ಯ ಎಂಜಿನಿಯರ್ ಅವರ ಸಮ್ಮುಖದಲ್ಲಿ 'ಜಲ ಸ್ಪಂದನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮಹಾಲಕ್ಷ್ಮೀ ಬಡಾವಣೆ ಕ್ಷೇತ್ರದ ವ್ಯಾಪ್ತಿಯ ಕಾಮಗಾರಿ • ಕೆಆರ್‌ಎಸ್ ಪಕ್ಷ ಆರೋಪ

ಬುಲೇವಾರ್ಡ್ ಉದ್ಯಾನ: ಟೆಂಡರ್‌ನಲ್ಲಿ ಅಕ್ರಮ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 'ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ'ಯ ಅನುದಾನದಡಿ ಕೈಗೊಳ್ಳಲಾಗುವ ಬುಲೇವಾರ್ಡ್ ಉದ್ಯಾನ ಅಭಿವೃದ್ಧಿ ಕಾಮಗಾರಿಯ ಟೆಂಡರ್‌ನಲ್ಲೂ ಅಕ್ರಮದ ವಾಸನೆ ಕಂಡುಬಂದಿದೆ.

ಮಹಾಲಕ್ಷ್ಮೀ ಬಡಾವಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು ₹ 24.99 ಕೋಟಿ ಮೊತ್ತದ ಈ ಯೋಜನೆಗೆ 2020 ಆ. 28ರಂದು ಟೆಂಡರ್ ಆಹ್ವಾನಿಸಿದ್ದರು. ಗುತ್ತಿಗೆದಾರರಾದ ಎಂ. ವೆಂಕಟಾಚಲಪತಿ ಮತ್ತು ವೈ.ಪಿಚ್ಚೇಶ್ವರರಾವ್ ಅವರ ಅರ್ಜಿಗಳು ತಾಂತ್ರಿಕ ಅರ್ಹತೆ ಗಳಿಸಿದ್ದವು. 2021ರ ಜ.13ರಂದು ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯ ತಾಂತ್ರಿಕ ಮತ್ತು ಆರ್ಥಿಕ ಮೌಲ್ಯಮಾಪನ ಹಾಗೂ ದರ ಸಂಧಾನ ಸಮಿತಿಯು ಈ ಎರಡು ಬಿಡ್‌ಗಳನ್ನು ಅಂಗೀಕರಿಸಿತ್ತು. 2021ರ ಫೆ. 9ರಂದು ಆರ್ಥಿಕ ಬಿಡ್ ತೆರೆಯಲಾಗಿತ್ತು. ಕಡಿಮೆ ಮೊತ್ತ (₹28.73 ಕೋಟಿ) ನಮೂದಿಸಿದ್ದ ವೆಂಕಟಾಚಲಪತಿ ಅವರೊಂದಿಗೆ ದರ ಸಂಧಾನ ನಡೆಸಿದ್ದ ಬಿಬಿಎಂಪಿ ಅಧಿಕಾರಿಗಳು ₹ 27.36 ಕೋಟಿಗೆ ಬಿಡ್ ಅಂತಿಮಗೊಳಿಸಿದ್ದರು. ನಗರಾಭಿವೃದ್ಧಿ ಇಲಾಖೆಯು ₹ 26.24 ಕೋಟಿ ವೆಚ್ಚದ ಕಾಮಗಾರಿಗೆ 2022ರ ಫೆ.17ರಂದು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಕಾಮಗಾರಿಗೆ ಅಗತ್ಯವಿರುವ 457 ಸಾಮಗ್ರಿಗಳಲ್ಲಿ 73ಕ್ಕೆ ಮಾತ್ರ ಲೋಕೋಪಯೋಗಿ ಇಲಾಖೆಯ ದರಪಟ್ಟಿ (ಎಸ್.ಆರ್) ಪ್ರಕಾರ ದರ ನಮೂದಿಸಲಾಗಿದೆ. ಇನ್ನುಳಿದ 384 ಸಾಮಗ್ರಿಗಳಿಗೆ ಡೇಟಾ ರೇಟ್ ಅಂದಾಜು ವೆಚ್ಚವನ್ನು ತೋರಿಸಲಾಗಿದೆ. ಕಡಿಮೆ ದರದಲ್ಲಿ ಲಭ್ಯ ಇರುವ ವಸ್ತುಗಳಿಗೂ ಅತಿ ಹೆಚ್ಚು ದರ ನಮೂದಿಸಲಾಗಿದೆ. ಆದರೆ, ಗಿಡಗಳನ್ನು ಕಾಮಗಾರಿಯಲ್ಲಿ ಸೇರಿಸಲು ಅವಕಾಶವಿಲ್ಲ. ಗಿಡಗಳಿಗೆ ಎಸ್.ಆರ್. ದರಪಟ್ಟಿಯಲ್ಲಿ ದರ ಲಭ್ಯವಿಲ್ಲದಿರುವುದನ್ನೇ ನೆಪವನ್ನಾಗಿಸಿ ದುಬಾರಿ ದರವನ್ನು ತೋರಿಸಲಾಗಿದೆ. ಕಬ್ಬಿಣದ ಗೇಟ್‌ಗಳಿಗೆ ಎಸ್.ಆರ್ ಪಟ್ಟಿಯಲ್ಲಿ ದರ ಲಭ್ಯವಿದ್ದರೂ ಅದನ್ನು ಬಳಸಿಲ್ಲ.


ಸಗಟು ಖರೀದಿ ಮಾಡುವಾಗ ಗಿಡವೊಂದಕ್ಕೆ ಹೆಚ್ಚೆಂದರೆ ₹15 ದರ ವಿಧಿಸಲಾಗುತ್ತದೆ. ಆದರೆ, ಈ ಟೆಂಡರ್‌ನಲ್ಲಿ ಗಿಡಗಳಿಗೆ ₹75ರಂತೆ ದರ ನಮೂದಿಸಲಾಗಿದೆ. ಪ್ರತಿ ಗಿಡಕ್ಕೆ ₹86 ರಂತೆ ಟೆಂಡರ್‌ನಲ್ಲಿ ಬಿಡ್ ಮಾಡಲಾಗಿದೆ. 3 ಅಡಿಯಿಂದ 5 ಅಡಿ ಎತ್ತರದ ಫೈಕಸ್ ಜಾತಿಯ ಗಿಡವು ₹ 128 ರಿಂದ ₹ 425ರ ದರದಲ್ಲಿ ಮಾರುಕಟ್ಟೆಯಲ್ಲಿ ಲಭ್ಯ. ಈ ಗಿಡವೊಂದಕ್ಕೆ ₹2,500 ಅಂದಾಜು ಮೊತ್ತ ನಮೂದಿಸಲಾಗಿದೆ. ಬಿಡ್ ದಾರರು ಪ್ರತಿಗಿಡಕ್ಕೆ ₹ 2,875 ನಮೂದಿಸಿದ್ದಾರೆ.

ಈ ಟೆಂಡರ್ ಅಕ್ರಮದ ಬಗ್ಗೆ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷವು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ದೂರು ನೀಡಿದ್ದು, 'ಈ ಕಾಮಗಾರಿಯ ಟೆಂಡರ್ ಅನ್ನು ರದ್ದುಗೊಳಿಸಿ, ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮತ್ತು ಗುತ್ತಿಗೆದಾರರ ವಿರುದ್ಧ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದೆ.

'ಮಾರುಕಟ್ಟೆಯಲ್ಲಿ ಎಂ. ಎಸ್. ಟ್ಯೂಬ್ಯುಲಾರ್ ಟ್ರೆಸ್‌ಗಳಿಗೆ ಪ್ರತಿ ಕೆ.ಜಿ.ಗೆ ₹ 80 ರಿಂದ ₹90 ದರ ಇದೆ. ಆದರೂ ಅವುಗಳಿಗೆ ಪ್ರತಿ ಕೆ.ಜಿ.ಗೆ ₹ 117.66 ಅಂದಾಜು ಮೊತ್ತ ನಿಗದಿ ಮಾಡಲಾಗಿದೆ. ಟೆಂಡರ್‌ದಾರರು ಪ್ರತಿ ಕೆ.ಜಿ.ಗೆ ₹ 135ರಂತೆ ನಮೂದಿಸಿದ್ದಾರೆ. ಇದರಿಂದಲೇ ₹1.68 ಕೋಟಿ ನಷ್ಟವಾಗಲಿದೆ. 55 ಇಂಚು ಅಗಲದ ಎಲ್‌ಇಡಿ ಡಿಸ್‌ಪ್ಲೇ ಮಾರುಕಟ್ಟೆಯಲ್ಲಿ ₹ 33,000 ₹48,000ಕ್ಕೆ ಲಭ್ಯವಿದ್ದರೆ, ಈ ಟೆಂಡರ್‌ನಲ್ಲಿ ₹1,15,656 ರಂತೆ ಅಂದಾಜು ಬೆಲೆ ನಮೂದಿಸಲಾಗಿದೆ. ಬಿಡ್‌ದಾರರು ₹ 1,33,004 ದರವನ್ನು ನಮೂದಿಸಿದ್ದಾರೆ. ಹೆಚ್ಚುವರಿಯಾಗಿ ನಮೂದಿಸಿರುವ ದರದಿಂದ ಸರ್ಕಾರದ ಬೊಕ್ಕಸಕ್ಕೆ ₹ 12.50 ಕೋಟಿ ನಷ್ಟವಾಗುತ್ತಿದೆ' ಎಂದು ಕೆಆರ್‌ಎಸ್ ಪಕ್ಷವು ಆರೋಪಿಸಿದೆ.

'ಕಾಮಗಾರಿ ನಡೆಸಲು ಆಯ್ಕೆಯಾಗಿರುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಹತಾ ದಾಖಲೆಗಳ ನೈಜತೆ ಬಗ್ಗೆಯೂ ಸಂದೇಹವಿದೆ. ಅವರು ನೀಡಿರುವ ವಾರ್ಷಿಕ ವಹಿವಾಟು ಪ್ರಮಾಣಪತ್ರಕ್ಕೂ, ಅವರು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿರುವ ಆದಾಯ ತೆರಿಗೆಗೆ ಸಂಬಂಧಿಸಿದ ದಾಖಲೆಗಳಿಗೂ ಬಹಳ ವ್ಯತ್ಯಾಸವಿದೆ' ಎಂದು ಪಕ್ಷದ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ್ ಎಸ್. ಆರೋಪಿಸಿದ್ದಾರೆ.

ಸಮಗ್ರ ತನಿಖೆ ಮಾಡಲಿ: ಗೋಪಾಲಯ್ಯ



'ಉದ್ಯಾನ ಕಾಮಗಾರಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಈ ಬಗ್ಗೆ ಅನುಮಾನ ಇದ್ದವರು ಸ್ಥಳ ಪರಿಶೀಲನೆ ಮಾಡಿ ನೋಡಲಿ. ಬಿಬಿಎಂಪಿ ಆಯುಕ್ತರು ಸಹ ಸಮಗ್ರ ತನಿಖೆ ಮಾಡಲಿ' ಎಂದು ಕ್ಷೇತ್ರದ ಶಾಸಕರೂ ಆಗಿರುವ ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

'ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕಳುಹಿಸಿದ ಕಡತಗಳನ್ನು ಕನಿಷ್ಠ ನಾಲ್ಕು ಬಾರಿ ಪರಿಶೀಲಿಸಿ ಸಹಿ ಹಾಕುವಂತೆ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಸೂಚಿಸಿದ್ದೇನೆ. ಜತೆಗೆ, ಬುಲೇವಾರ್ಡ್‌ಗಳ ಕಾಮಗಾರಿ ಪೂರ್ಣ ಆಗಿಲ್ಲ. ಬಿಲ್ ಪಾವತಿಯೂ ಆಗಿಲ್ಲ. ಅಕ್ರಮ ನಡೆಯಲು ಹೇಗೆ ಸಾಧ್ಯ' ಎಂದು ಅವರು ಪ್ರಶ್ನಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Yelahanka

PRESTIGE MONTE Carlo, 3 BHK, Area- 1535. sft, Semi furnished apartment for Resale. Contact 6366971311.

House

Magadi Road

3,200 SFT, West Facing Residential Property is for Sale at Magadi Road Housing Board. Contact: 6362961311/ 9901050888

Sites

Devanahalli

PRESTIGE PARK DRIVE, Located at Devanahalli, plots sizes available for sale ranging from 30*40, 30*50, 40*60 & larger plots up to 3389 sqft. Contact: 6366971311.

General

PRESTIGE GOLFSHIRE MARINA, Plot of 13345 Sft for sale on Nandi Hills Road, For details, call: 7259886212.

Vishweshwariah Layout

BDA SITE Sale Vishweshwaraiah 30x40 1st Block North 9000, 30x40 4th Block North 5800 Negotiable. 50x80 6th Block 60ft Road:- 8892901567/ 9341733480

Vidyaranyapura

FOUR CONTIGUOUS Sites measuring 1830, 2080 & 2400*2 sqft located in Sai Orchard Layout, Vidyaranyapura-Hesarghatta Main Road with clear titles, Call: 9697039355. Email : brnbmc@gmail.com

REAL ESTATE BUYING

General

General

FOR AGRICULTURE Land Conversion,Change of land use,Phodi, Approvals/ Sanctions, NOC's, RERA Project Registration, Property Documentation work. Call Verna Developers, MG-Road, Bengaluru. 9916310226/ 9620253180.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

BARE SHELL accommodation available for Rent at Victoria Road, Bangalore suitable for: Software Company/ Corporate office/ Bank/ Administrative office. 1000 sqft- 25000 sqft @ Rs. 50/- per sqft. Facilities- car and 2 wheeler parking, lift, security, back-up power. 09880448321/ 09845064386/ 09620421693/ 080-41290053.

6000 SQUARE feet builtup space Near Teachers College, R.V. Main Road facing reserved 5 car parking with 6000 Sq.ft open compound 45kw Power reasonable rent. Contact Owner: 9342819739.

FULLY FURNISHED accommodation available for Rent at SR Complex, Koramangala, 3,500 sqft- 25,000 sqft. Ample car parking, 100% back-up power, security, house keeping. 09880448321/ 09845064386/ 09620421693/ 080-41290053.

House

RENT 3 BHK Independent house measuring on site 2600 sq. ft North facing at KHB Surya City, Chandapura, Bangalore. 9448579516/9448558581.

FOR RENT 69,000/- R.M.V Second Three B.H.K HIG Bungalow 349, 5th Main Contact: 9986033339, 9341833353

JOB OPPORTUNITIES

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

General

WANTED ASSISTANT Manager, Receptionists, House-Keeping Assistants, Computer Skill essential for a hotel off Brigade road. Contact: 9844005311, pvrnaidu@hotmail.com

Part-Time Jobs

REPUTED MNC Company Will Provide Work From Home, Earn 30 to 35K Malleswaram 7019215243/ 9886641282

Teachers/ Professors

GARDEN CITY PUBLIC SCHOOL Urgently Required TEACHERS for Nursery, Primary and High School. Contact: 8722613039

AUTOMOTIVE

Automobile Services

Auto Consultants

CERAMIC COATING: USA make chemical application. OFFER PRICE Rs. 24990 all inclusive (Reg 35k) including windshield coat and full interior detail. Expires 31st March 2022. Book appointment: MidCity Motors 8147853841 Open 7am.

BUSINESS

Business Offers

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 9958628785.

EDUCATIONAL

Correspondence Courses

PASS IN ONE YEAR! LL.B/LL.M/B.Tech/M.Tech/ Diploma/M.Phil/MBA/MCA/ M.Sc/BCA/BBA/B.Sc/B.Com/ 10th/ PU (NIOS). Asha Academy, Bangalore: 9448460103/ 7093438248

PERSONAL

Announcements

I,K.A.NAYAGAM S/O M.Kandaswamy Residing-at No.8, 8th-Cross, Sir.M.V.Nagar, Kalkere Main-Road, Ramamurthy Nagar, Bangalore-560016 have-declare my-name-in Aadhaar:- AVUDAINAYAGAM.K , Pancard:- KANDASWAMY AVUDAI NAYAGAM & Property Sale-deed:- K.A.NAYAGAM this-three names-are belongs-to one-person Vide-Affidavit dated: 14-03-2022, sworn-before Notary H.R.Karunakara, Bangalore

Change of Name

I, JAYARAJ KARKADA S/o. Edward John Karkada R/a #18, Jeeva Bugge, 13th Cross, G.K.Layout, Hosa Road, Behind Sujana School, Electronics City, Bengaluru-560100 Declare That JAYARAJ KARKADA and JAYARAJ Both Names are Pertaining to Me only, Henceforth, Known as JAYARAJ KARKADA vide Affidavit Dated: 17.03.2022 Before Notary K.V. Mani, Bengaluru.

I, NIRANJANA Kumara.C , hereby state that I have changed my son's name from Sushrutha Niranjana Gowda to 'SANKSHIPTH NIRANJANA' (DOB: 25/7/2013) sworn in before Notary S. Vijayakumar vide affidavit dated 20/7/2021 at Bengaluru.

GEDAL KANATAMMA, Mother/o, 14870084N, NK /MT, GEDAL ARJUNA RAO, Vill- Badaputti, Chatrapur, Ganjam, Odisha, changed name from GEDAL KANATAMMA to GEDAL KANTAMMA, 16/03/2022, Notary K.V. Mani, Bangalore

I, JAYASHRI KANTANAVAR R/at No. 119, Killa, Gokak, Belgaum- 591307, have changed my name to KEERTI KISHOR GUDI vide affidavit dated: 16/03/2022 Before Notary Onkarappa N.R Bangalore.

I, RAVI Shankar R.have changed my son's name From AADVIK S.R. to ROHITH S.R. vide affidavit dated 23-12-2021. Before G. Dayananda, Notary, Bangalore.

I, CHANDAN, changed my-name to CHANDAN RAMACHANDRAN Dated:12-03-2022. Sworn before Notary H.S.Sakalesh Aradhya, Bengaluru

ನೂತನ ಹೈಬ್ರಿಡ್ ತಂತ್ರಜ್ಞಾನದಲ್ಲಿ ನಿರ್ಮಿಸಿದ ಕಟ್ಟಡ ಲೋಕಾರ್ಪಣೆ

45 ದಿನಗಳಲ್ಲೇ ಸಿದ್ಧವಾದ ಡಿಆರ್‌ಡಿಒ ಕಟ್ಟಡ ಸಂಕೀರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಅಂಗ ಸಂಸ್ಥೆಯಾದ ವೈಮಾನಿಕ ಅಭಿವೃದ್ಧಿ ಸಂಸ್ಥೆಯ (ಎಡಿಇ) ಹೊಸ ತಿಪ್ಪಸಂದ್ರದ ಪ್ರಾಂಗಣದಲ್ಲಿ ವಿಮಾನ ಹಾರಾಟ ನಿಯಂತ್ರಣ ವ್ಯವಸ್ಥೆಯ ಏಕೀಕೃತ ಕಟ್ಟಡ ಸಂಕೀರ್ಣವನ್ನು (ಎಫ್‌ಸಿಎಸ್) ದಾಖಲೆಯ 45 ದಿನಗಳಲ್ಲಿ ನಿರ್ಮಿಸಿದೆ. ದೇಸಿ ಹೈಬ್ರಿಡ್ ತಂತ್ರಜ್ಞಾನ ಬಳಸಿ ನಿರ್ಮಿಸಲಾದ ಏಳು ಅಂತಸ್ತುಗಳ ಈ ಕಟ್ಟಡವನ್ನು ರಕ್ಷಣಾ ಸಚಿವ ರಾಜನಾಥ ಸಿಂಗ್ ಗುರುವಾರ ಲೋಕಾರ್ಪಣೆಗೊಳಿಸಿದರು.

ಡಿಆರ್‌ಡಿಒ ಎಲ್ ಆ್ಯಂಡ್ ಟಿ ಸಹಯೋಗದಲ್ಲಿ ಈ ಕಟ್ಟಡ ಸಂಕೀರ್ಣ ನಿರ್ಮಿಸಲಾಗಿದೆ. ಮದ್ರಾಸ್‌ನ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಹಾಗೂ ರೂರ್ಕಿ ಐಐಟಿಗಳು ಇದರ ವಿನ್ಯಾಸಗೊಳಿಸುವಿಕೆಲ್ಲಿ ತಾಂತ್ರಿಕ ನೆರವು ಒದಗಿಸಿವೆ. ಅತ್ಯಾಧುನಿಕ ಮಧ್ಯಮ ಯುದ್ಧ ವಿಮಾನಗಳ ಸುಧಾರಣೆಗೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಈ ಕಟ್ಟಡ ಬಳಕೆ ಆಗಲಿದೆ. ವೈಮಾನಿಕ ಅಭಿವೃದ್ಧಿ ಸಂಸ್ಥೆಯು ಯುದ್ಧ ವಿಮಾನದ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನೂ ಇಲ್ಲಿ ಅಭಿವೃದ್ಧಿಪಡಿಸಲಿದೆ.

'ಈ ಹೈಬ್ರಿಡ್ ತಂತ್ರಜ್ಞಾನವು ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಮೈಲುಗಲ್ಲು. ನಿರ್ಮಾಣ ತಂತ್ರಜ್ಞಾನದಲ್ಲಿ ಭಾರತವು ಮುಂಚೂಣಿ ರಾಷ್ಟ್ರವಾಗಿ ಹೊರಹೊಮ್ಮಲು ಇದು ಕಾರಣವಾಗಲಿದೆ. ನಿರ್ಮಾಣ ಪ್ರಕ್ರಿಯೆಯ ಉತ್ಪಾದಕತೆಯನ್ನು ಇದು ಹೆಚ್ಚಿಸಲಿದೆ. ಸಂಪನ್ಮೂಲದ ಸದ್ಬಳಕೆಯನ್ನು ಉತ್ತೇಜಿಸಲಿದೆ. ಸರಕು ವ್ಯರ್ಥವಾಗುವುದನ್ನು ತಡೆದು, ನಷ್ಟವನ್ನು ತಪ್ಪಿಸಲಿದೆ. ನಿರ್ಮಾಣ ಕಾರ್ಯವು ತ್ವರಿತವಾಗಿ ಪೂರ್ಣಗೊಳಿಸುವುದಕ್ಕೆ ನೆರವಾಗಲಿದೆ' ಎಂದು ರಾಜನಾಥ ಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.

'ಯುದ್ಧ ವಿಮಾನಗಳ ಪೈಲೆಟ್‌ಗಳಿಗೆ ನೈಜ ಅನುಭವ ಒದಗಿಸುವ ಸಿಮುಲೇಟರ್ ತರಬೇತಿ ನೀಡುವುದಕ್ಕೂ ಈ ಕಟ್ಟಡ ಬಳಕೆ ಆಗಲಿದೆ. ಪೈಲಟ್‌ಗಳು ತಪ್ಪುಗಳಿಂದ ಪಾಠ ಕಲಿಯುವಾಗಲೂ ಯಾವುದೇ ನಷ್ಟವಾಗದಂತಹ ತರಬೇತಿ ಇದರಿಂದ ಸಾಧ್ಯ. ಈ ಅತ್ಯಾಧುನಿಕ ಕಟ್ಟಡ ಸಂಕೀರ್ಣವು ರಾಷ್ಟ್ರೀಯ ಭದ್ರತೆ ವ್ಯವಸ್ಥೆಯನ್ನು ಬಲಿಷ್ಟಗೊಳಿಸುವಲ್ಲಿ ಈ ಮಹತ್ತರ ಪಾತ್ರ ವಹಿಸಲಿದೆ' ಎಂದು ರಕ್ಷಣಾ ಸಚಿವರು ಬಣ್ಣಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ನವಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣ ನಮ್ಮ ಸರ್ಕಾರದ ಆಶಯ. ಇದಕ್ಕೆ ಡಿಆರ್‌ಡಿಒ ಸಹಕಾರ ಅಗತ್ಯ. ರಾಜ್ಯದ ನಿರ್ಮಾಣ ಚಟುವಟಿಕೆಗೆ ಈ ಹೈಬ್ರಿಡ್ ತಂತ್ರಜ್ಞಾನ ಬಳಸಿ ಸಂಪನ್ಮೂಲ ಹಾಗೂ ಸಮಯ ಉಳಿಸಬಹುದು' ಎಂದರು.

ಅಂಕಿ-ಅಂಶಗಳು

1.3 ಲಕ್ಷ ಚದರ ಅಡಿ ಎಫ್‌ಸಿಎಸ್ ಕಟ್ಟಡದ ವಿಸ್ತೀರ್ಣ

45 ದಿನಗಳು ಕಟ್ಟಡ ನಿರ್ಮಾಣಕ್ಕೆ ತಗುಲಿದ ಅವಧಿ

7 ಕಟ್ಟಡದಲ್ಲಿರುವ ಮಹಡಿಗಳು



ಹೊಸ ತಿಪ್ಪಸಂದ್ರದ ಸುರಂಜನ್‌ದಾಸ್ ರಸ್ತೆ ಬಳಿಯ ಎಡಿಇ ಪ್ರಾಂಗಣದಲ್ಲಿ ಡಿಆರ್‌ಡಿಒ ನಿರ್ಮಿಸಿರುವ ವಿಮಾನ ಹಾರಾಟ ನಿಯಂತ್ರಣ ವ್ಯವಸ್ಥೆಯ ಏಕೀಕೃತ ಕಟ್ಟಡ ಸಂಕೀರ್ಣ — ಪ್ರಜಾವಾಣಿ ಚಿತ್ರ

'ಬೊಮ್ಮಾಯಿ ಅವರದ್ದು ಸಮರ್ಥ ನಾಯಕತ್ವ'

'ಕರ್ನಾಟಕ ರಾಜ್ಯವು ತನ್ನ ಸಮರ್ಥ ಹಾಗೂ ದಕ್ಷ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಪ್ರಗತಿ ಸಾಧಿಸುತ್ತಿದ್ದು, ಅತಿ ಶೀಘ್ರದಲ್ಲಿಯೇ ವಿಶ್ವದಲ್ಲಿ ತನ್ನ ಅಸ್ಮಿತೆಯನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗಲಿದೆ. ದೇಶದ ಪ್ರಗತಿಗೆ ಸಂಬಂಧಿಸಿದಂತೆ ಬೊಮ್ಮಾಯಿ ಬದ್ಧತೆ ಪ್ರಶ್ನಾತೀತ' ಎಂದು ರಾಜನಾಥ್ ಸಿಂಗ್ ಬಣ್ಣಿಸಿದರು.

ಏನಿದು ಹೈಬ್ರಿಡ್ ತಂತ್ರಜ್ಞಾನ?

ಡಿಆರ್‌ಡಿಒ ಎಲ್ ಆ್ಯಂಡ್ ಟಿ ಜೊತೆ ಜಂಟಿಯಾಗಿ ಅಭಿವೃದ್ಧಿಪಡಿಸಿದ ಹೈಬ್ರಿಡ್ ತಂತ್ರಜ್ಞಾನದಲ್ಲಿ ಸಾಂಪ್ರದಾಯಿಕ ವಿಧಾನದ ಜೊತೆಗೆ, ಪ್ರಿ- ಎಂಜಿನಿಯರಿಂಗ್ ಮತ್ತು ಪ್ರಿ- ಕಾಸ್ಟ್ ವಿಧಾನ ಅಳವಡಿಸಿಕೊಳ್ಳಲಾಗಿದೆ. ತೊಲೆಗಳನ್ನು ಹಾಗೂ ಕಂಬಗಳ ಚೌಕಟ್ಟುಗಳನ್ನು ಉಕ್ಕಿನ ತಟ್ಟೆಗಳಿಂದ ನಿರ್ಮಿಸಲಾಗುತ್ತದೆ. ಕಂಬಗಳು ಉಕ್ಕಿನ ಟೊಳ್ಳಾದ ಕೊಳವೆಗಳಂತಿದ್ದು, ಅವುಗಳಿಗೆ ಕಾಂಕ್ರೀಟನ್ನು ಭರ್ತಿ ಮಾಡಲಾಗುತ್ತದೆ. ಮೊದಲೇ ಸಿದ್ಧಪಡಿಸಲಾದ ಸ್ಲ್ಯಾಬ್‌ಗಳನ್ನು ಸ್ಥಳಕ್ಕೆ ತಂದು ಜೋಡಿಸಲಾಗುತ್ತದೆ. ಇದೇ ವೇಳೆ ಕಾಂಕ್ರೀಟೀಕರಣವನ್ನೂ ನಡೆಸುವ ಮೂಲಕ ಒಣ ಜೋಡಣೆಗಳನ್ನು ತಪ್ಪಿಸಲಾಗುತ್ತದೆ. ಕಾಂಕ್ರೀಟ್‌ಗೆ ಉಕ್ಕು ಶಾಶ್ವತವಾದ ಚೌಕಟ್ಟನ್ನು ಒದಗಿಸುತ್ತದೆ. ಇದು ಸಮಯ ಹಾಗೂ ಶ್ರಮವನ್ನು ಗಣನೀಯವಾಗಿ ಕಡಿಮೆಗೊಳಿಸುತ್ತದೆ.

> ಹೈಬ್ರಿಡ್ ತಂತ್ರಜ್ಞಾನ ಬಳಸಿ 65 ದಿನಗಳಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಅವಧಿಯಲ್ಲಿ ಏಳು ಮಹಡಿ ಕಟ್ಟಡ ಕಟ್ಟಿರುವುದು ಚಮತ್ಕಾರಕ್ಕಿಂತಲೂ ಕಡಿಮೆ ಇಲ್ಲ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ಈ ಅಪೂರ್ವ ಕಟ್ಟಡ ಯೋಜನೆಯು ನವಭಾರತದ ನವಶಕ್ತಿಯ ಮೂರ್ತ ರೂಪ. ದೇಶ ಮಾತ್ರವಲ್ಲ ಇಡೀ ಜಗತ್ತಿನ ಗಮನ ಸೆಳೆದ ಈ ತಂತ್ರಜ್ಞಾನ ಆತ್ಮನಿರ್ಭರ ಭಾರತದ ಶಕ್ತಿಯ ಪ್ರತಿಬಿಂಬ.
>
> **ರಾಜನಾಥ ಸಿಂಗ್,** ರಕ್ಷಣಾ ಸಚಿವ

ನಗರದಲ್ಲಿ ಇಂದು

ಮಣಿ ಷಡಕ್ಷರಿ ಅವರ ಸ್ಮರಣಾರ್ಥ ಭಗವಾನ್ ರಮಣ ಮಹರ್ಷಿಗಳ ಕುರಿತು ಉಪನ್ಯಾಸ: ಉದ್ಘಾಟನೆ- ಶಾರದಾ ನಟರಾಜನ್, ಮುಖ್ಯ ಅತಿಥಿ- ಎಸ್. ಷಡಕ್ಷರಿ, ಆಯೋಜನೆ- ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್ ಮತ್ತು ರಮಣಶ್ರೀ ಪ್ರತಿಷ್ಠಾನ, ಸ್ಥಳ- ರಮಣ ಮಹರ್ಷಿ ದೇವಸ್ಥಾನ, ಮೇಕ್ರಿ ವೃತ್ತ, ಸಂಜೆ 4.30

ಶತಾವಧಾನಿ ಆರ್. ಗಣೇಶ್ ಅವರ 'ಮಣ್ಣಿನ ಕನಸು' ಪುಸ್ತಕ ಬಿಡುಗಡೆ: ಎಸ್.ಆರ್. ರಾಮಸ್ವಾಮಿ, ಪುಸ್ತಕದ ಬಗ್ಗೆ ಮಾತನಾಡುವವರು- ಬಿ.ಎನ್. ಶಶಿಕಿರಣ್, ಎಚ್.ಎ. ವಾಸುಕಿ, ಆಯೋಜನೆ-ಸಾಹಿತ್ಯ ಪ್ರಕಾಶನ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಸ್ಥಳ- ಡಿವಿಜಿ ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಸವನಗುಡಿ, ಸಂಜೆ 6



ಶತಾವಧಾನಿ ಆರ್. ಗಣೇಶ್

156ನೇ ಹುಣ್ಣಿಮೆ ಹಾಡು: ಸಂಗೀತ ಸಂಜೆ- ಕಂಬದ ರಂಗಯ್ಯ, ರಶ್ಮಿ, ಧನಲಕ್ಷ್ಮಿ, ಆಯೋಜನೆ- ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ- ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

'ವಾರ್ಡ್ ನಿರ್ವಹಣೆಗೆ ತಲಾ ₹ 3 ಕೋಟಿ ಮೀಸಲಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 2022-23ನೇ ಸಾಲಿನ ಬಜೆಟ್‌ನಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸಚಿವರು, ಸಂಸದರು ಹಾಗೂ ಶಾಸಕರ ಜೊತೆ ಸಮಾಲೋಚನೆ ನಡೆಸಿದರು.

ರಾಕೇಶ್ ಸಿಂಗ್, 'ಜನರಿಗೆ ಮೂಲ ಸೌಕರ್ಯ ಒದಗಿಸುವುದು ಪಾಲಿಕೆಯ ಜವಾಬ್ದಾರಿ ಬಿಬಿಎಂಪಿಯ ಆರ್ಥಿಕ ಪರಿಸ್ಥಿತಿಯನ್ನು ಆಧರಿಸಿ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಸುಸ್ಥಿರ ಕ್ರಮಗಳನ್ನು ಕೈಗೊಳ್ಳಬೇಕಿದೆ. ಪಾಲಿಕೆಯ ವರಮಾನ ಆಧರಿಸಿ ಕಾರ್ಯಕ್ರಮ ರೂಪಿಸಬೇಕಿದೆ' ಎಂದರು.

ಗೌರವ್ ಗುಪ್ತ, 'ಆಸ್ತಿ ತೆರಿಗೆ ಸಂಗ್ರಹದ ಗುರಿ ಸಾಧಿಸಲು ಆದ್ಯತೆ ನೀಡಲಾಗಿದೆ. ನಗರದಲ್ಲಿ ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸುವ ಕೆಲಸಕ್ಕೆ ವೇಗ ನೀಡಲಾಗಿದೆ. ಅವುಗಳ ಸಮರ್ಪಕ ನಿರ್ವಹಣೆಗೂ ಕ್ರಮಕೈಗೊಳ್ಳಲಾಗಿದೆ' ಎಂದರು.

ಪ್ರತಿ ವಾರ್ಡ್‌ನ ವಾರ್ಷಿಕ ನಿರ್ವಹಣೆಗೆ ತಲಾ ₹ 2 ಕೋಟಿಯಿಂದ ₹ 3 ಕೋಟಿ ಅನುದಾನವನ್ನು ಕಡ್ಡಾಯವಾಗಿ ಮೀಸಲಿಟ್ಟಲ್ಲಿ ತಳಮಟ್ಟದಲ್ಲೇ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಜನಪ್ರತಿನಿಧಿಗಳು ಪಕ್ಷಭೇದ ಮರೆತು ಒತ್ತಾಯಿಸಿದರು. 'ಬಿ ಖಾತಾಗಳನ್ನು ಎ ಖಾತಾವನ್ನಾಗಿ ಪರಿವರ್ತಿಸುವ ಮೂಲಕ ಹಾಗೂ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದ ₹5 ಲಕ್ಷ ಮೌಲ್ಯದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಮೂಲಕ ವರಮಾನ ಹೆಚ್ಚಿಸಿಕೊಳ್ಳಬಹುದು. ಭೋಗ್ಯಕ್ಕೆ ನೀಡಿರುವ ಬಿಬಿಎಂಪಿ ಆಸ್ತಿಗಳಿಂದ ಬಾಕಿ ಮೊತ್ತ ಸಂಗ್ರಹಿಸಬೇಕು. ಅನಧಿಕೃತ ಕಟ್ಟಡಗಳನ್ನು ಗುರುತಿಸಿ ಅವುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ತರುವುದು ಕೂಡ ವರಮಾನ ಹೆಚ್ಚಳಕ್ಕೆ ನೆರವಾಗಲಿದೆ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ಸಂಗ್ರಹಿಸುವ ತೆರಿಗೆಯು ವಸ್ತುಸ್ಥಿತಿಗೆ ತಾಳೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು' ಎಂದು ಕೆಲವು ಶಾಸಕರು ಸಲಹೆ ನೀಡಿದರು.

'ಕಲ್ಯಾಣ ಕಾರ್ಯಕ್ರಮಗಳ ಅಡಿ ಒಂಟಿ ಮನೆಗಳಿಗೆ, ಬಡ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ವಿತರಿಸಲು ಅನುದಾನ ಮೀಸಲಿಡಬೇಕು' ಎಂದೂ ಹೇಳಿದರು.

ಕಿದ್ವಾಯಿ: ರೋಬೋಟಿಕ್ ಶಸ್ತ್ರಚಿಕಿತ್ಸೆಗೆ ಆದ್ಯತೆ

ಬೆಂಗಳೂರು: ರೋಬೋಟಿಕ್ ಶಸ್ತ್ರಚಿಕಿತ್ಸೆಗೆ ಹೆಚ್ಚಿನ ಆದ್ಯತೆ ನೀಡಲು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು 35ಕ್ಕೂ ಅಧಿಕ ನಿವಾಸಿ ಶಸ್ತ್ರಚಿಕಿತ್ಸಕರಿಗೆ ರೋಬೋಟಿಕ್ ಶಸ್ತ್ರಚಿಕಿತ್ಸೆ ಬಗ್ಗೆ ತರಬೇತಿ ಹಮ್ಮಿಕೊಂಡಿದೆ.

ಸಂಸ್ಥೆಯು ಈ ತರಬೇತಿಗೆ ಇಂಟ್ಯೂಟಿವ್ ಇಂಡಿಯಾ ಸಂಸ್ಥೆಯೊಂದಿಗೆ ಕೈಜೋಡಿಸಿದೆ.ರೋಬೊಟಿಕ್ ಶಿಕ್ಷಣ ನೀಡುವ 'ಐ-ರೋಪ್' ಕಾರ್ಯಕ್ರಮಕ್ಕೆ ಶುಕ್ರವಾರ ಮಧ್ಯಾಹ್ನ 3.30ಕ್ಕೆ ಚಾಲನೆ ದೊರೆಯಲಿದೆ.

'ರೋಬೊಟಿಕ್ ತಂತ್ರಜ್ಞಾನದ ಬಗ್ಗೆ ಪದವಿ ಹಂತದಲ್ಲೇ ತಿಳಿದುಕೊಳ್ಳಬೇಕಾದ ಅಗತ್ಯ ಇದೆ. ಸಂಸ್ಥೆಯಲ್ಲಿನ ನಿವಾಸಿ ಶಸ್ತ್ರಚಿಕಿತ್ಸಕರಿಗೆ ತರಬೇತಿ ಒದಗಿಸಲಾಗುತ್ತದೆ. ಈಗಾಗಲೇ ಸಂಸ್ಥೆಯಲ್ಲಿ ರೋಬೊಟಿಕ್ ತಂತ್ರಜ್ಞಾನದಡಿ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿದ್ದು, ಉತ್ತಮ ಫಲಿತಾಂಶ ದೊರಕಿದೆ' ಎಂದು ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದ್ದಾರೆ.

ಇಂಟ್ಯೂಟಿವ್ ಇಂಡಿಯಾದ ಪ್ರಧಾನ ವ್ಯವಸ್ಥಾಪಕ ಮನ್‌ದೀಪ್ ಸಿಂಗ್ ಮಾತನಾಡಿದರು.

ಮಿಟ್ಟಗಾನಹಳ್ಳಿ ಕ್ವಾರಿ ಪ್ರದೇಶದಲ್ಲಿ ಘನತ್ಯಾಜ್ಯ ಸುರಿದ ಪ್ರಕರಣ

ಗೌರವ್ ಗುಪ್ತ ಕ್ಷಮೆಯಾಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಾಲಯದ ಆದೇಶ ಉಲ್ಲಂಘಿಸಿ ಮಿಟ್ಟಗಾನಹಳ್ಳಿ ಕ್ವಾರಿ ಪ್ರದೇಶದಲ್ಲಿ ಘನತ್ಯಾಜ್ಯ ಸುರಿಯಲಾಗುತ್ತಿದೆ' ಎಂಬ ಆಕ್ಷೇಪಣೆಗೆ ಸಂಬಂಧಿಸಿದಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಬೇಷರತ್ ಕ್ಷಮೆ ಯಾಚಿಸಿದ ಪರಿಣಾಮ ಅವರ ವಿರುದ್ಧ ನ್ಯಾಯಾಂಗ ನಿಂದನೆ ಅಡಿ ಕ್ರಮ ಕೈಗೊಳ್ಳುವ ನಿರ್ಧಾರವನ್ನು ಹೈಕೋರ್ಟ್ ಕೈಬಿಟ್ಟಿದೆ.

'ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಬಿಬಿಎಂಪಿ ವಿಫಲವಾಗಿದೆ' ಎಂದು ಆರೋಪಿಸಿ 2012ರಲ್ಲಿ ಸಲ್ಲಿಸಲಾಗಿದ್ದ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಮುಖ್ಯಾಂಶಗಳು

- ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿವರಣೆ
- ಕೋರ್ಟ್ ಆದೇಶ ಪರಿಪಾಲನೆಗೆ ಕ್ರಿಯಾ ಯೋಜನೆ ರೂಪಿಸಿ

'ನ್ಯಾಯಾಲಯದ ಆದೇಶ ಉಲ್ಲಂಘಿಸಿರುವ ಕಾರಣ ನ್ಯಾಯಾಂಗ ನಿಂದನೆ ಆರೋಪದಡಿ ಕ್ರಮ ಜರುಗಿಸಲಾಗುವುದು. ಕ್ರಮ ಕೈಗೊಳ್ಳುವ ಮುನ್ನ ಅವರು ತಮ್ಮ ವರ್ತನೆ ಬಗ್ಗೆ ವಿವರಣೆ ನೀಡಿ ವೈಯಕ್ತಿಕ ಪ್ರಮಾಣಪತ್ರ ಸಲ್ಲಿಸಲು ಹತ್ತು ದಿನ ಕಾಲಾವಕಾಶ ನೀಡಲಾಗುವುದು. ಪ್ರಮಾಣಪತ್ರ ಪರಿಶೀಲಿಸಿದ ಬಳಿಕ, ಅವರ ಮೇಲೆ ಕುರುಣೆ ತೋರಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುವುದಾಗಿ ನ್ಯಾಯಪೀಠ ತಿಳಿಸಿತ್ತು. ಈ ಹಿನ್ನೆಲೆಯಲ್ಲಿ ಗುರುವಾರ ಅರ್ಜಿ ವಿಚಾರಣೆ ಆರಂಭವಾಗುತ್ತಿದ್ದಂತೆಯೇ ಗೌರವ್ ಗುಪ್ತ ಪರ ವಕೀಲರು ಪ್ರಮಾಣ ಪತ್ರ ಸಲ್ಲಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಪ್ರತಿವಾದಿಗಳು ಕೋರ್ಟ್ ಆದೇಶವನ್ನು ಜಾರಿಗೆ ತರುವ ಕಾರ್ಯ ಮುಂದುವರಿಸಬೇಕು. ಆದೇಶ ಪರಿಪಾಲನೆಗೆ ಅಗತ್ಯವಿರುವ ಕ್ರಿಯಾ ಯೋಜನೆ ರೂಪಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು' ಎಂದು ನಿರ್ದೇಶಿಸಿದ ನ್ಯಾಯಪೀಠ ಮೂರು ವಾರಗಳ ಕಾಲ ಅರ್ಜಿಯ ವಿಚಾರಣೆಯನ್ನು ಮುಂದೂಡಿದೆ.

ಪ್ರಮಾಣ ಪತ್ರದಲ್ಲಿ ಏನಿತ್ತು?

'ನ್ಯಾಯಾಲಯದ ಬಗ್ಗೆ ನಾನು ಅತ್ಯಂತ ಗೌರವ ಭಾವನೆ ಹೊಂದಿದ್ದೇನೆ. ಯಾವುದೇ, ರೀತಿಯಲ್ಲೂ ಕೋರ್ಟ್ ಆದೇಶ ಉಲ್ಲಂಘಿಸುವ ಉದ್ದೇಶ ನನಗಿಲ್ಲ. ಆದರೆ, ಕೋರ್ಟ್ ಆದೇಶ ಉಲ್ಲಂಘನೆ ಆಗಿರುವುದಕ್ಕೆ ಬೇಷರತ್ ಕ್ಷಮೆ ಯಾಚಿಸುತ್ತೇನೆ. ಮಿಟ್ಟಗಾನಹಳ್ಳಿ ಕ್ವಾರಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅನುಮತಿ ನೀಡಿದೆ. ಪ್ರಕರಣದಲ್ಲಿ ನ್ಯಾಯಾಲಯದ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು. ಭವಿಷ್ಯದಲ್ಲಿ ಎಚ್ಚರಿಕೆಯಿಂದ ಇರುತ್ತೇನೆ' ಎಂದು ಗೌರವ್ ಗುಪ್ತ ಪ್ರಮಾಣ ಪತ್ರದಲ್ಲಿ ವಿವರಿಸಿದ್ದರು.

ಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿಯ ತಡಶೀಘಟ್ಟದ ಲಕ್ಷ್ಮಿನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಗುರುವಾರ ನಡೆಯಿತು.

ರಥ ಹಾಗೂ ದೇವಾಲಯವನ್ನು ವಸ್ತ್ರ ಮತ್ತು ಹೂಗಳಿಂದ ಅಲಂಕರಿಸಲಾಗಿತ್ತು. ಒಕ್ಕಲು ಮನೆತನದವರು ಮತ್ತು ಭಕ್ತರು ಹತ್ತಾರು ಅರವಟ್ಟಿಗೆಗಳನ್ನು ತೆರೆದು ರಥೋತ್ಸವಕ್ಕೆ ಬಂದಿದ್ದ ಭಕ್ತರಿಗೆ ನೀರು, ಮಜ್ಜಿಗೆ, ಪಾನಕ, ಹೆಸರುಬೇಳೆ, ಮೊಸರನ್ನ, ಪುಳಿಯೋಗರೆ ವಿತರಣೆ ಮಾಡಿದರು.

ರಥೋತ್ಸವಕ್ಕೂ ಮುನ್ನದಿನವಾದ ಬುಧವಾರ ಗರುಡೋತ್ಸವ, ಗಜೇಂದ್ರ ಮೋಕ್ಷ, ಕಾಶಿಯಾತ್ರೋತ್ಸವ ನಡೆಯಿತು. ಬ್ರಹ್ಮರಥೋತ್ಸವದ ನಂತರ ಸಂಜೆ ಧೂಳೋತ್ಸವ, ರಾತ್ರಿ ಹೂವಿನ ಪಲ್ಲಕ್ಕಿ ಉತ್ಸವ ಕೂಡ ಜರುಗಿತು. ಮಾ.23ರವರೆಗೆ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿದ್ದು, ಬ್ರಹ್ಮರಥೋತ್ಸವಕ್ಕೆ ಅಂದು ತೆರೆ ಬೀಳಲಿದೆ.



ತಡಶೀಘಟ್ಟದ ಲಕ್ಷ್ಮಿನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಗುರುವಾರ ನಡೆಯಿತು

ಲಂಚಕ್ಕೆ ಬೇಡಿಕೆ: ಚನ್ನಣ್ಣನವರ್ ಪಾತ್ರ ಇಲ್ಲ– ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕ್ರಷರ್ ಮಾಲೀಕರಿಂದ ಲಂಚಕ್ಕೆ ಬೇಡಿಕೆ ಇಟ್ಟು, ಮುಂಗಡ ಪಡೆದ ಪ್ರಕರಣದಲ್ಲಿ ನಿಕಟಪೂರ್ವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಚನ್ನಣ್ಣನವರ ಪಾತ್ರ ಕಂಡುಬಂದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅತ್ತಿಬೆಲೆಯ ಆರ್. ಮಂಜುನಾಥ್ ಎಂಬವರು ನೀಡಿದ್ದ ದೂರು ಆಧರಿಸಿ ಐಜಿಪಿ ಅವರಿಂದ ತನಿಖೆ ನಡೆಸಲಾಗಿದೆ' ಎಂದರು.

'ವಿಜಯಪುರ ಸರ್ಕಲ್ ಇನ್‌ಸ್ಪೆಕ್ಟರ್ ಟಿ.ಶ್ರೀನಿವಾಸ್, ಎಎಸ್‌ಐಗಳಾದ ಎನ್. ಶುಭಾ, ಕೆ.ಜಿ. ಅನಿತ ಎಂಬವರ ವಿರುದ್ಧ ದೂರು ಕೇಳಿಬಂದಿತ್ತು. ಈ ಅಧಿಕಾರಿಗಳ ದೂರವಾಣಿ ಕರೆ ಮಾಹಿತಿ ಪಡೆಯಲಾಗಿದೆ. ಕ್ರಷರ್ ಮಾಲೀಕರಿಗೆ ಸಹಾಯ ಮಾಡುವ ಮಾತುಕತೆ ನಡೆಸಿ, ನಂಬಿಸಿ ₹ 5 ಲಕ್ಷ ಪಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಕಾರಣಕ್ಕೆ ಟಿ. ಶ್ರೀನಿವಾಸ್ ಅವರನ್ನು ಅಮಾನತು ಮಾಡಲಾಗಿದೆ. ಎಎಸ್‌ಐಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಜರುಗಿಸಲಾಗಿದೆ. ವಿಚಾರಣೆಯಲ್ಲಿ ಐಪಿಎಸ್ ಅಧಿಕಾರಿ ರವಿ ಚನ್ನಣ್ಣನವರ್ ಪಾತ್ರ ಕಂಡುಬಂದಿಲ್ಲ' ಎಂದರು.

ಆದರೆ, ಇದನ್ನು ಒಪ್ಪದ ರವಿಕುಮಾರ್, 'ನನ್ನ ಬಳಿ ಪುರಾವೆಗಳಿವೆ' ಎಂದರು. ಆಗ ಅದನ್ನು ತನಿಖೆ ಮಾಡಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು.

'ನ್ಯಾಯಾಲಯ ಆದೇಶ ಉಲ್ಲಂಘಿಸಿದ ಕುಲಪತಿ'

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಕೆ.ಆರ್. ವೇಣುಗೋಪಾಲ್ ಅವರ ನೇಮಕಾತಿಯನ್ನು ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ರದ್ದುಪಡಿಸಿದ್ದರೂ ಗುರುವಾರ ಎಂದಿನಂತೆ ಕಾರ್ಯನಿರ್ವಹಿಸಿದ್ದಾರೆ ಎಂದು ಸಿಂಡಿಕೇಟ್ ಸದಸ್ಯರು ಆರೋಪಿಸಿದರು.

'ನ್ಯಾಯಾಲಯದ ಆದೇಶ ಉಲ್ಲಂಘಿಸಿರುವ ವೇಣುಗೋಪಾಲ್ ಅವರ ವಿರುದ್ಧ ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರು ಕ್ರಮಕೈಗೊಳ್ಳಬೇಕು' ಎಂದು ಸಿಂಡಿಕೇಟ್ ಸದಸ್ಯ ಡಾ.ಎಚ್. ಸುಧಾಕರ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ಜೈಲಿನಿಂದ ಸುಪಾರಿ: ಸಂಚು ರೂಪಿಸಿದ್ದವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಕೊಲೆ ಹಾಗೂ ದರೋಡೆಗೆ ಸಂಚು ರೂಪಿಸಿದ್ದ ಆರೋಪದಡಿ ನಾಲ್ವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ವಿ.ವಿ.ಪುರ ಠಾಣೆ ವ್ಯಾಪ್ತಿಯ ಶಿವಗಂಗ ಮಠದ ರಸ್ತೆಯಲ್ಲಿ ಸೇರಿದ್ದ ಆರೋಪಿಗಳು, ದರೋಡೆಗೆ ಸಂಚು ರೂಪಿಸಿದ್ದರು. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಆರೋಪಿಗಳಿಂದ ಲಾಂಗ್, ಮಚ್ಚು ಜಪ್ತಿ ಮಾಡಲಾಗಿದೆ. ನಾಲ್ವರನ್ನು ವಿಚಾರಣೆ ನಡೆಸಿದಾಗ, ರೌಡಿಯೊಬ್ಬರ ಕೊಲೆಗೆ ಸಂಚು ರೂಪಿಸಿದ್ದ ಮಾಹಿತಿಯೂ ಲಭ್ಯವಾಗಿದೆ.'

'ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಜಿಲಾನಿ ಎಂಬಾತ ಸದ್ಯ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾನೆ. ಬಂಧಿತ ಆರೋಪಿಗಳ ಜೊತೆ ಒಡನಾಟವಿಟ್ಟುಕೊಂಡಿದ್ದ ಆತ, ತನ್ನ ಎದುರಾಳಿ ರೌಡಿ ರಾಹುಲ್‌ನನ್ನು ಕೊಲೆ ಮಾಡಲು ಸುಪಾರಿ ನೀಡಿದ್ದ. ದರೋಡೆ ಜೊತೆಯಲ್ಲೇ ರಾಹುಲ್‌ನನ್ನು ಹತ್ಯೆ ಮಾಡುವುದು ಆರೋಪಿಗಳ ಉದ್ದೇಶವಾಗಿತ್ತು' ಎಂದೂ ತಿಳಿಸಿದರು.

ಆರೋಪ ಮುಕ್ತ ಆಮಿಷ: ಹಣ ನೀಡಿದ್ದ ಎಂಜಿನಿಯರ್

ಎಸಿಬಿ ಹೆಸರಲ್ಲಿ ₹11.50 ಲಕ್ಷ ವಸೂಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸುವ ತನಿಖೆಯಲ್ಲಿ ಅನುಕೂಲ ಮಾಡಿಕೊಟ್ಟು ಆರೋಪಮುಕ್ತಗೊಳಿಸುವ ಆಮಿಷವೊಡ್ಡಿ ಸರ್ಕಾರಿ ಅಧಿಕಾರಿಗಳಿಂದ ಹಣ ವಸೂಲಿ ಮಾಡಿದ್ದ ನಾಲ್ವರು ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎಸಿಬಿ ಹೆಸರಿನಲ್ಲಿ ಹಣ ವಸೂಲಿ ಮಾಡಿದ್ದ ಸಂಬಂಧ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬಿಡಿಎ ಸಹಾಯಕ ಎಂಜಿನಿಯರ್ ಅರವಿಂದ್ ಅವರಿಂದ ₹ 10 ಲಕ್ಷ ಪಡೆದಿದ್ದ ಆರೋಪಿಗಳಾದ ಪ್ರವೀಣ್, ಚೇತನ್ ಹಾಗೂ ಮನೋಜ್‌ಕುಮಾರ್ ಎಂಬುವರನ್ನು ಬಂಧಿಸಲಾಗಿದೆ. ಇನ್ನೊಂದು ಪ್ರಕರಣದಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಕೇಂದ್ರ ಕಚೇರಿಯ ಎಫ್‌ಡಿಎ ಅವರಿಂದ ₹ 1.50 ಲಕ್ಷ ಪಡೆದಿದ್ದ ಧರ್ಮೇಂದ್ರ ಎಂಬಾತನನ್ನೂ ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅರವಿಂದ್ ಕಚೇರಿ ಮೇಲೆ ನಡೆದಿದ್ದ ದಾಳಿ: 'ಎಚ್‌ಎಸ್‌ಆರ್ ಲೇಔಟ್‌ನ ಬಿಡಿಎ ಕಚೇರಿ ಸಹಾಯಕ ಎಂಜಿನಿಯರ್ ಆಗಿದ್ದ ಅರವಿಂದ್, ಕಾಡುಬೀಸನಹಳ್ಳಿಯ ಜಮೀನೊಂದರ ವಿಚಾರವಾಗಿ ಮಾಲೀಕರಿಗೆ ಲಂಚಕ್ಕೆ ಬೇಡಿಕೆ ಇರಿಸಿದ್ದ ಆರೋಪ ಕೇಳಿಬಂದಿತ್ತು. 2021ರ ನವೆಂಬರ್ 19ರಂದು ಕಚೇರಿ ಮೇಲೆ ದಾಳಿ ಮಾಡಿದ್ದ ಎಸಿಬಿ ಅಧಿಕಾರಿಗಳು, ಪ್ರಕರಣ ದಾಖಲಿಸಿಕೊಂಡಿದ್ದರು. ಅರವಿಂದ್ ಹೆಸರು ಸಹ ಆರೋಪ ಪಟ್ಟಿಯಲ್ಲಿತ್ತು' ಎಂದು ಅಧಿಕಾರಿ ತಿಳಿಸಿದರು.

'ಲಂಚ ಪ್ರಕರಣದಲ್ಲಿ ತಮ್ಮ ಪಾತ್ರವಿಲ್ಲವೆಂದು ಹೇಳಿದ್ದ ಅರವಿಂದ್, ಬಿಡಿಎ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದಿದ್ದರು. ಪ್ರಕರಣದಿಂದ ಆರೋಪಮುಕ್ತಗೊಳಿಸಲು ಸಹಾಯ ಮಾಡುವಂತೆ ವಿನಂತಿಸಿದ್ದರು. ಆದರೆ, ಎಸಿಬಿ ಅಧಿಕಾರಿಗಳು ಹಲವು ದಾಖಲೆಗಳನ್ನು ಜಪ್ತಿ ಮಾಡಿದ್ದರು. ಅರವಿಂದ್ ಆರೋಪಿ ಎಂಬುದು ತನಿಖೆಯಿಂದ ಗೊತ್ತಾಗಿತ್ತು' ಎಂದರು.

ಬಿಡಿಎ ಸಿಬ್ಬಂದಿ ಸೋಗಿನಲ್ಲಿ ಪರಿಚಯ: 'ಪ್ರಕರಣದಿಂದ ಆರೋಪಮುಕ್ತವಾಗಲು ಅರವಿಂದ್ ಪ್ರಯತ್ನಿಸುತ್ತಿದ್ದರು. ಅದನ್ನು ತಿಳಿದುಕೊಂಡಿದ್ದ ಆರೋಪಿಗಳು, ಬಿಡಿಎ ಕೇಂದ್ರ ಕಚೇರಿ ಸಿಬ್ಬಂದಿ ಸೋಗಿನಲ್ಲಿ ಪರಿಚಯಿಸಿಕೊಂಡಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಅರವಿಂದ್ ಜೊತೆ ಹಲವು ಬಾರಿ ಮಾತುಕತೆ ನಡೆಸಿದ್ದ ಆರೋಪಿಗಳು, 'ಎಸಿಬಿ ಅಧಿಕಾರಿಗಳು ನಮಗೆ ಆತ್ಮೀಯರು. ಅವರ ಮೂಲಕ ಬಿಡಿಎ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳ ಹಲವರನ್ನು ಆರೋಪಮುಕ್ತ ಮಾಡಿಸಿದ್ದೇವೆ. ಹಣ ಕೊಟ್ಟರೆ ನಿಮ್ಮನ್ನು ಆರೋಪಮುಕ್ತಗೊಳಿಸುತ್ತೇವೆ' ಎಂಬುದಾಗಿ ಹೇಳಿದ್ದರು. ಅದನ್ನು ನಂಬಿದ್ದ ಅರವಿಂದ್, ಹೋಟೆಲೊಂದರಲ್ಲಿ ಆರೋಪಿಗಳನ್ನು ಭೇಟಿಯಾಗಿ ₹ 10 ಲಕ್ಷ ನೀಡಿದ್ದರು. ಹಣ ಪಡೆದ ನಂತರ ಆರೋಪಿಗಳು ನಾಪತ್ತೆಯಾಗಿದ್ದರು' ಎಂದರು. 'ಬಂಧಿತ ಚೇತನ್, ಬಿಡಿಎ ಕಚೇರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ. ಪ್ರವೀಣ್ ಹಾಗೂ ಮನೋಜ್, ರಿಯಲ್ ಎಸ್ಟೇಟ್ ಏಜೆಂಟರು. ಇನ್ನೊಬ್ಬ ಆರೋಪಿ ವಿಜಯ್‌ಕುಮಾರ್ ತಲೆಮರೆಸಿಕೊಂಡಿದ್ದಾನೆ' ಎಂದೂ ತಿಳಿಸಿದರು.

ಬಾಡಿಗೆ ಕಾರು ಏಜೆಂಟ್: 'ಬಂಧಿತ ಧರ್ಮೇಂದ್ರ, ಕಾರು ಬಾಡಿಗೆ ನೀಡುವ ಏಜೆನ್ಸಿ ನಡೆಸುತ್ತಿದ್ದ. ಕೆಐಎಡಿಬಿ ಅಧಿಕಾರಿಗಳಿಗೂ ಕಾರು ಬಾಡಿಗೆ ನೀಡಿದ್ದ. ಆಗಾಗ ಕಚೇರಿಗೆ ಹೋಗುತ್ತಿದ್ದ ಆತ, ಎಫ್‌ಡಿಎ ಸ್ನೇಹ ಬೆಳೆಸಿದ್ದ. ಎಫ್‌ಡಿಎ ಮೇಲಿನ ದಾಳಿ ಬಗ್ಗೆ ತಿಳಿದಿದ್ದ. ಎಸಿಬಿ ಅಧಿಕಾರಿಗಳು ಪರಿಚಯವೆಂದು ಹೇಳಿ ಹಣ ವಸೂಲಿ ಮಾಡಿದ್ದ' ಎಂದು ಪೊಲೀಸರು ಹೇಳಿದರು.

ಮತ್ತೊಂದು ಪ್ರಕರಣ

ಎಸಿಬಿ ದಾಳಿ ನಡೆಯಲಿದೆ ಎಂದು ನಿರ್ಮಿತಿ ಕೇಂದ್ರದ ಅಧಿಕಾರಿಯೊಬ್ಬರನ್ನು ಬೆದರಿಸಿ ಅವರಿಂದ ಹಣ ವಸೂಲಿ ಮಾಡಿರುವ ಆರೋಪದ ಮೇಲೆ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಚಿನ್ನದ ಪದಕ ಕದ್ದೊಯ್ದ ಕಳ್ಳರು

ಬೆಂಗಳೂರು: ನೀರಾವರಿ ಇಲಾಖೆಯ ನಿವೃತ್ತ ಅಧಿಕಾರಿ ಟಿ.ಎಲ್. ಚಂದ್ರಶೇಖರ್ ಮನೆಯಲ್ಲಿ ಕಳ್ಳತನ ನಡೆದಿದ್ದು, ಕೇಂದ್ರ ಸರ್ಕಾರ ನೀಡಿದ್ದ 'ಶಿಲ್ಪಗುರು' ಪದಕ ಸೇರಿದಂತೆ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣವನ್ನು ಕಳ್ಳರು ಕದ್ದೊಯ್ದಿದ್ದಾರೆ.

'ಚುಂಚನಘಟ್ಟ ಮುಖ್ಯರಸ್ತೆಯ ಸುಪ್ರಜಾ ನಗರದಲ್ಲಿ ವಾಸವಿರುವ ಚಂದ್ರಶೇಖರ್ ಅವರು ಕಳ್ಳತನ ಬಗ್ಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಕೋಣನಕುಂಟೆ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

ಪ್ರತಿಕೂಲ ಸಾಕ್ಷ್ಯ ಹೇಳಿದ್ದ ದೂರುದಾರನ ವಿರುದ್ಧವೂ ಮೊಕದ್ದಮೆ

ಲಂಚ ಪ್ರಕರಣ: ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ದೂರನ್ನು ಮುಕ್ತಾಯಗೊಳಿಸಲು ವ್ಯಕ್ತಿಯೊಬ್ಬರಿಂದ ₹ 50,000 ಲಂಚ ಪಡೆದಿದ್ದ ಆರೋಪದಲ್ಲಿ ಬೆಂಗಳೂರು ಮಹಾನಗರ ಕಾರ್ಯಪಡೆ (ಬಿಎಂಟಿಎಫ್) ಹಿಂದಿನ ಸಬ್ ಇನ್‌ಸ್ಪೆಕ್ಟರ್ ಶಿವಕುಮಾರ್ ವಿ. ಮತ್ತು ಗುತ್ತಿಗೆ ನೌಕರರಾಗಿದ್ದ ಚೇತನ್‌ಗೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ತಲಾ ₹ 25,000 ದಂಡ ವಿಧಿಸಿದೆ.

ಶಿವಕುಮಾರ್ ಈಗ ನಗರದ ರೈಲ್ವೆ ಪೊಲೀಸ್ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಹುದ್ದೆಯಲ್ಲಿದ್ದಾರೆ. ಈ ಪ್ರಕರಣದ ದೂರುದಾರ ಉತ್ತರಹಳ್ಳಿ ಸಮೀಪದ ಅರೆಹಳ್ಳಿ ನಿವಾಸಿ ರಾಹುಲ್ ಎಸ್. ವಿಚಾರಣೆಯ ಅಂತಿಮ ಹಂತದಲ್ಲಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರು. ಸಾಂದರ್ಭಿಕ ಸಾಕ್ಷ್ಯಗಳ ಆಧಾರದಲ್ಲಿ ಇಬ್ಬರೂ ಆರೋಪಿಗಳು ಅಪರಾಧಿಗಳು ಎಂದು ತೀರ್ಮಾನಿಸಿರುವ ನ್ಯಾಯಾಲಯ, ದೂರುದಾರನ ವಿರುದ್ಧವೂ ಮೊಕದ್ದಮೆ ದಾಖಲಿಸಲು ಆದೇಶಿಸಿದೆ.

ರಾಹುಲ್ 2018ರಲ್ಲಿ ಅರೆಹಳ್ಳಿಯಲ್ಲಿ ನಿವೇಶನವೊಂದಕ್ಕೆ ಬೇಲಿ ನಿರ್ಮಿಸುತ್ತಿದ್ದರು. ಈ ಸಂಬಂಧ ಬಿಎಂಟಿಎಫ್‌ಗೆ ಅವರ ವಿರುದ್ಧ ದೂರು ಬಂದಿತ್ತು. ಅದನ್ನು ಮುಕ್ತಾಯಗೊಳಿಸಲು ಶಿವಕುಮಾರ್ ₹ 80,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಬಳಿಕ ಚೌಕಾಸಿ ನಡೆಸಿದ್ದು, ₹ 70,000 ನೀಡಿದರೆ ದೂರು ಮುಕ್ತಾಯಗೊಳಿಸುವುದಾಗಿ ಒಪ್ಪಿಕೊಂಡಿದ್ದರು.

₹ 20,000 ಲಂಚವನ್ನು ಮೊದಲ ಹಂತದಲ್ಲಿ ಚೇತನ್‌ಗೆ ತಲುಪಿಸಲಾಗಿತ್ತು. 2018ರ ನವೆಂಬರ್ 7ರಂದು ₹ 50,000 ಪಡೆಯುತ್ತಿದ್ದಾಗ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಇಬ್ಬರನ್ನೂ ಬಂಧಿಸಿದ್ದರು. ಪ್ರಕರಣದ ತನಿಖೆ ಪೂರ್ಣಗೊಳಿಸಿ 2021ರ ಮಾರ್ಚ್‌ನಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿತ್ತು.

'ನೆನಪೇ ಇಲ್ಲ' ಎಂದಿದ್ದ ದೂರುದಾರ: ಪ್ರಕರಣದ ವಿಚಾರಣೆಯ ಕೊನೆಯ ಹಂತದಲ್ಲಿ ದೂರುದಾರ ರಾಹುಲ್, 'ಎಸಿಬಿಗೆ ದೂರು ನೀಡಿರುವ ಕುರಿತು ನನಗೆ ನೆನಪೇ ಇಲ್ಲ. ಯಾರ ವಿರುದ್ಧ ದೂರು ಕೊಟ್ಟಿದ್ದೇನೆ ಎಂಬುದೂ ಗೊತ್ತಿಲ್ಲ' ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರು.

ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಬುಧವಾರ ಅಂತಿಮ ಆದೇಶ ಪ್ರಕಟಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್, 'ಶಿವಕುಮಾರ್ ಮತ್ತು ಚೇತನ್ ವಿರುದ್ಧದ ಆರೋಪಗಳು ಸಾಬೀತಾಗಿವೆ' ಎಂದು ಪ್ರಕಟಿಸಿದರು. ಸಾಂದರ್ಭಿಕ ಸಾಕ್ಷ್ಯಗಳ ಆಧಾರದಲ್ಲೇ ನ್ಯಾಯಾಧೀಶರು ಆರೋಪಿಗಳು ದೋಷಿಗಳು ಎಂದು ಸಾರಿದರು. ಇಬ್ಬರಿಗೂ ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ತಲಾ ₹ 25,000 ದಂಡ ವಿಧಿಸಿ ಆದೇಶಿಸಿದರು.

ಈ ಪ್ರಕರಣದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಸಿ.ಕೆ. ಸರೋಜಾ ಪ್ರಾಸಿಕ್ಯೂಷನ್ ಪರವಾಗಿ ವಾದ ಮಂಡಿಸಿದ್ದರು.

ಎಸಿಬಿ ದಾಳಿ: ನಾಲ್ಕು ಅಧಿಕಾರಿಗಳಿಗಷ್ಟೇ ಶಿಕ್ಷೆ

ಬೆಂಗಳೂರು: 'ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸಿದ ದಾಳಿಯಿಂದ ಅಕ್ರಮ ಆಸ್ತಿ ಪತ್ತೆಯಾದರೂ ತಪ್ಪಿತಸ್ಥ ಅಧಿಕಾರಿಗಳನ್ನು ರಾಜ್ಯ ಸರ್ಕಾರ ರಕ್ಷಿಸುತ್ತಿದೆ' ಎಂದು ಆಮ್ ಆದ್ಮಿ ಪಕ್ಷದ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, 'ಸರ್ಕಾರವು ಭ್ರಷ್ಟ ಅಧಿಕಾರಿಗಳಿಗೆ ಬೆನ್ನೆಲುಬಾಗಿ ನಿಂತಿದೆ. ಲೋಕಾಯುಕ್ತಕ್ಕೆ ಪರ್ಯಾಯವಾಗಿ ಎಸಿಬಿ ಅಸ್ತಿತ್ವಕ್ಕೆ ಬಂದು ಆರು ವರ್ಷಗಳಾಗಿವೆ. ಈವರೆಗೆ ಕೇವಲ ನಾಲ್ಕು ಮಂದಿಗೆ ಮಾತ್ರ ಶಿಕ್ಷೆಯಾಗಿದೆ. ಅಘೋಷಿತ ಆಸ್ತಿ ಪ್ರಕರಣಗಳಿಗೆ ಸಂಬಂಧಿಸಿದಂತೆ 989ಕ್ಕೂ ಅಧಿಕ ಅಧಿಕಾರಿಗಳು ಮತ್ತು ನೌಕರರ ಮನೆಗಳ ಮೇಲೆ ದಾಳಿ ನಡೆಸಲಾಗಿದೆ. ಆದರೆ, ದಾಳಿಗೊಳಗಾದ ಅಧಿಕಾರಿಗಳು ಏನೂ ಆಗಿಲ್ಲ ಎನ್ನುವಂತೆ ಕೆಲವೇ ದಿನಗಳಲ್ಲಿ ಮತ್ತೆ ಕಚೇರಿ, ಹುದ್ದೆಗೆ ಹಾಜರಾಗುತ್ತಿದ್ದಾರೆ' ಎಂದರು.

ಪಕ್ಷದ ರಾಜ್ಯ ಘಟಕದ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ 'ಆರು ವರ್ಷಗಳಲ್ಲಿ ಎಸಿಬಿಯಲ್ಲಿ 1,600ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ 615 ಅಧಿಕಾರಿಗಳ ಮೇಲೆ ಮಾತ್ರ ಚಾರ್ಜ್‌ಶೀಟ್ ದಾಖಲಾಗಿದೆ. 368 ಆರೋಪಿ ಅಧಿಕಾರಿಗಳ ವಿಚಾರಣೆಗೆ ಸಕ್ಷಮ ಪ್ರಾಧಿಕಾರದ ಅನುಮತಿ ಸಿಕ್ಕಿಲ್ಲ. ದಾಳಿಯಲ್ಲಿ ಈವರೆಗೆ 80 ಕೆ.ಜಿ.ಗೂ ಅಧಿಕ ಚಿನ್ನಾಭರಣ, ₹ 50 ಕೋಟಿಗೂ ಅಧಿಕ ನಗದು, ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿಗೆ ಸಂಬಂಧಿಸಿದ ದಾಖಲೆ ಜಪ್ತಿ ಮಾಡಲಾಗಿದೆ. 1,519 ಅಧಿಕಾರಿಗಳ ಬಂಧನವಾಗಿದ್ದು, 1,219 ಅಧಿಕಾರಿಗಳ ಅಮಾನತಿಗೆ ಎಸಿಬಿ ಶಿಫಾರಸು ಮಾಡಿದೆ. ಆದರೂ ನಾಲ್ಕು ಅಧಿಕಾರಿಗಳಿಗೆ ಶಿಕ್ಷೆಯಾಗಿರುವುದು ವ್ಯವಸ್ಥೆಯ ವಿಪರ್ಯಾಸ' ಎಂದು ಹೇಳಿದರು.



ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಡೆಸಿದ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆಯಲ್ಲಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರನ್ನು ಬ್ಯಾಂಕ್ ಆಫ್ ಬರೋಡ ಬೆಂಗಳೂರು ವಲಯ ಕಚೇರಿ ವತಿಯಿಂದ ಸನ್ಮಾನಿಸಲಾಯಿತು. ವಲಯ ವ್ಯವಸ್ಥಾಪಕ ಸುಧಾಕರ ಡಿ. ನಾಯಕ, ಉಪ ವಲಯ ವ್ಯವಸ್ಥಾಪಕ ಬಿ. ಶಿವರಾಮ್ ಹಾಗೂ ಸಿಬ್ಬಂದಿ ಇದ್ದರು.

ಮೇಲುಕೋಟೆ: ಮಹಾರಥೋತ್ಸವ

ಮೇಲುಕೋಟೆ (ಮಂಡ್ಯ): ವೈರಮುಡಿ ಬ್ರಹ್ಮೋತ್ಸವದ ಅಂಗವಾಗಿ ಇಲ್ಲಿನ ಚೆಲುವನಾರಾಯಣ ಸ್ವಾಮಿಗೆ ಗುರುವಾರ ಬ್ರಹ್ಮರಥೋತ್ಸವ ಸಂಭ್ರಮದಿಂದ ನೆರವೇರಿತು. ಸುಮಾರು ಐವತ್ತು ಸಾವಿರ ಭಕ್ತರು ತೇರಿಗೆ ಹಣ್ಣು, ದವನ ಎಸೆದರು.

ಸಹೋದರನ ನಿಶ್ಚಿತಾರ್ಥಕ್ಕೆ ಹೊರಟಿದ್ದ ಮಹಿಳೆ ಸಾವು

ಬೆಂಗಳೂರು: ನೈಸ್ ರಸ್ತೆಯ ಕನಕಪುರ ಟೋಲ್ ಗೇಟ್ ಬಳಿ ಗುರುವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಸಂಧ್ಯಾ (21) ಎಂಬುವರು ಮೃತಪಟ್ಟಿದ್ದಾರೆ.

'ತಾತಗುಣಿ ಎಸ್ಟೇಟ್ ನಿವಾಸಿ ಸಂಧ್ಯಾ, ಪತಿ ಪೆರುಮಾಳ್, ಒಂದೂವರೆ ವರ್ಷದ ಗಂಡು ಮಗುವಿನ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಅವಘಡ ಸಂಭವಿಸಿದೆ. ಪೆರುಮಾಳ್ ಹಾಗೂ ಮಗು ಗಾಯಗೊಂಡಿದ್ದಾರೆ' ಎಂದು ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಸಂಧ್ಯಾ ಅವರು ಸಹೋದರನ ನಿಶ್ಚಿತಾರ್ಥಕ್ಕಾಗಿ ಪತಿ ಹಾಗೂ ಮಗುವಿನ ಜೊತೆ ತಮಿಳುನಾಡಿಗೆ ಹೊರಟಿದ್ದರು. ಪತಿ ಬೈಕ್ ಚಲಾಯಿಸುತ್ತಿದ್ದರು.

ವೇಗವಾಗಿ ಬಂದ ಟಿಪ್ಪರ್ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಸಂಧ್ಯಾ ಪಕ್ಕದಲ್ಲೇ ಮಗು ಬಿದ್ದಿತ್ತು. ಪೆರುಮಾಳು ಅವರು ಮಗುವನ್ನು ಎಳೆದುಕೊಂಡು ರಸ್ತೆ ಪಕ್ಕಕ್ಕೆ ಉರುಳಿದ್ದರು. ಪತ್ನಿಯನ್ನು ಎಳೆದುಕೊಳ್ಳಬೇಕು ಎನ್ನುಷ್ಟರಲ್ಲೇ ಲಾರಿ ಉಜ್ಜಿಕೊಂಡು ಹೋಗಿತ್ತು. ಟಿಪ್ಪರ್ ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಸೂರ್ಯಕಲಾ



ಮಾಗಡಿ: ವ್ಯಂಗ್ಯಚಿತ್ರಕಾರ ಬಿ.ಜಿ.ಗುಜ್ಜಾರಪ್ಪ ಅವರ ಪತ್ನಿ ಸೂರ್ಯಕಲಾ (67) ಗುರುವಾರ ಬೆಳಿಗ್ಗೆ ಬೆಂಗಳೂರಿನ ಯಲಹಂಕ ಅಟ್ಟೂರು ಲೇಔಟ್‌ನ ಸ್ವಗೃಹದಲ್ಲಿ ನಿಧನರಾದರು. ಮೃತರು ಇಸ್ರೋ ವಿಜ್ಞಾನ ಕೇಂದ್ರದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಇಬ್ಬರು ಪುತ್ರಿಯರು ಇದ್ದಾರೆ. ಯಲಹಂಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ರಸ್ತೆ ಅಗೆದು ಬಿಟ್ಟು ಹೋದ ಜಲಮಂಡಳಿ: ಮರು ನಿರ್ಮಾಣವಾಗದೆ ಜನರಿಗೆ ತೊಂದರೆ

ದೂಳಿನಲ್ಲಿ ಮುಳುಗಿರುವ ಜಕ್ಕೂರು ನಿವಾಸಿಗಳು

• ವಿಜಯಕುಮಾರ್ ಎಸ್.ಕೆ.

ಹೊರ ವಲಯ ಒಳ ಬೇಗುದಿ

ಬೆಂಗಳೂರು: ಇದ್ದ ರಸ್ತೆ ಅಗೆದು ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಸಿ ಬಿಟ್ಟು ಹೋದ ಜಲಮಂಡಳಿ, ಜಲ್ಲಿ ಹೊದಿಸಿ ಸುಮ್ಮನಾದ ಬಿಬಿಎಂಪಿ, ದೂಳಿನ ಅಬ್ಬರದಲ್ಲಿ ನಲುಗಿ ಹೋಗಿರುವ ನಿವಾಸಿಗಳು... ಇದು ಜಕ್ಕೂರು ಮುಖ್ಯ ರಸ್ತೆಯ ಸ್ಥಿತಿ.

ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯಲ್ಲಿನ ಜಕ್ಕೂರಿನಲ್ಲಿ ಕಾವೇರಿ 5ನೇ ಹಂತದ ಯೋಜನೆಗೆ ಪೈಪ್‌ಲೈನ್ ಅಳವಡಿಕೆ ಕಾರ್ಯವನ್ನು ಜಲಮಂಡಳಿ ನಿರ್ವಹಿಸಿದೆ. ರಸ್ತೆ ಅಗೆದು ದೊಡ್ಡ ಪೈಪ್‌ಗಳನ್ನು ನೆಲದೊಳಗೆ ಹುದುಗಿಸಿ ಮಣ್ಣು ಮುಚ್ಚಲಾಗಿದೆ. ಅದರ ಮೇಲೆ ಬಿಬಿಎಂಪಿ ಜಲ್ಲಿ ಸುರಿದಿದೆ.

ಜಕ್ಕೂರು ವಿಮಾನ ತರಬೇತಿ ಕೇಂದ್ರದ ಕಾಂಪೌಂಡ್ ಪಕ್ಕದಲ್ಲೇ ಹಾದು ಹೋಗುವ ಜಕ್ಕೂರು ಮುಖ್ಯ ರಸ್ತೆಯ ಉದ್ದಕ್ಕೂ ಇದೇ ಸ್ಥಿತಿ ಇದೆ. ಅಂಬೇಡ್ಕರ್ ಭವನದ ಬಳಿಯ ಇಡೀ ವೃತ್ತದಲ್ಲಿ ವಾಹನ ಸಂಚಾರ ಮಾಡುವುದಿರಲಿ, ನಿಲ್ಲಲು ಸಾಧ್ಯವಾಗಷ್ಟು ಸಮಸ್ಯೆ ಉಂಟಾಗಿದೆ. ರಸ್ತೆಯಲ್ಲಿ ಒಂದು ವಾಹನ ಹಾದು ಹೋದರೆ ಇಡೀ ವೃತ್ತ ದೂಳಿನಲ್ಲಿ ಮುಳುಗುತ್ತದೆ.

ಪ್ರಮುಖ ವೃತ್ತ ಆಗಿರುವುದರಿಂದ ಆಟೋರಿಕ್ಷಾ ನಿಲ್ದಾಣ, ಸರಕು ಸಾಗಣೆಯ ಸಣ್ಣ ವಾಹನಗಳ ನಿಲ್ದಾಣವೂ ಇದೆ. ರಸ್ತೆ ಬದಿಯಲ್ಲಿ ಒಂದೆರಡು ನಿಮಿಷ ನಿಂತರೆ ಸಾಕು ಮೈತುಂಬ ಬಿಳಿ ಜಲ್ಲಿಪುಡಿ ಆವರಿಸಿಕೊಳ್ಳುತ್ತದೆ. ವ್ಯಾಪಾರಿಗಳು, ಆಟೋರಿಕ್ಷಾ ಮತ್ತು ಸರಕು ಸಾಗಣೆ ವಾಹನಗಳ ಚಾಲಕರು ಪ್ರತಿನಿತ್ಯ ಇದೇ ದೂಳಿನಲ್ಲಿ ಜೀವನ ನಡೆಸುವುದು ಅನಿವಾರ್ಯವಾಗಿದೆ.

'110 ಹಳ್ಳಿ ಯೋಜನೆಯ ಕಾಮಗಾರಿ ನಡೆಯುತ್ತಿರುವ ಹಳ್ಳಿಗಳಿಗೆ ಕಾವೇರಿ ಪೈಪ್‌ಲೈನ್ ಮಾರ್ಗ ಕೊಂಡೊಯ್ಯಲು ರಸ್ತೆಯನ್ನು ಜಲ ಮಂಡಳಿಯಿಂದ ಅಗೆಯಲಾಗಿತ್ತು. ಬಿಬಿಎಂಪಿಯಿಂದ ಜಲ್ಲಿ ಹೊದಿಕೆ ಹೊದಿಸಿ ಎರಡು ತಿಂಗಳಾಗಿದ್ದು, ಕಾಮಗಾರಿ ಮುಂದುವರಿಸಿಲ್ಲ' ಎಂದು ಸ್ಥಳೀಯರು ದೂರುತ್ತಾರೆ.

'ಜಲ್ಲಿಪುಡಿಯ ದೂಳು ಕುಡಿದು ಆಸ್ತಮಾ ಆವರಿಸಿಕೊಳ್ಳುವ ಭಯ ಶುರುವಾಗಿದೆ. ವಾಹನಗಳು ಹೋಗುವಾಗ ಚಕ್ರಕ್ಕೆ ಸಿಕ್ಕಿ ಹಾರುವ ಜಲ್ಲಿ ಕಲ್ಲುಗಳು ರಸ್ತೆ ಬದಿ ನಿಲ್ಲುವ ಜನರಿಗೆ ಮತ್ತು ವಾಹನಗಳ ಗಾಜಿಗೆ ಹೊಡೆದು ಹಾನಿಯುಂಟಾಗುತ್ತಿದೆ. ಮೊದಲಿಗೆ ಒಂದಷ್ಟು ದಿನ ನೀರು ಹಾಕಿ ದೂಳು ಕಡಿಮೆ ಮಾಡಲಾಗುತ್ತಿತ್ತು. ಈಗ ಅದನ್ನೂ ಮಾಡುತ್ತಿಲ್ಲ. ಸಮಸ್ಯೆ ಹೇಳಿಕೊಳ್ಳಲು ಪಾಲಿಕೆ ಸದಸ್ಯರಿಲ್ಲ, ಯಾರಿಗೆ ಸಮಸ್ಯೆ ಹೇಳಿಕೊಳ್ಳಬೇಕು ಎಂಬುದೇ ಗೊತ್ತಾಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ.

'ಕಾಮಗಾರಿ ನಿರ್ವಹಿಸಲು ರಸ್ತೆ ಅಗೆದಷ್ಟು ವೇಗದಲ್ಲಿ ಸರಿಪಡಿಸಿ ಡಾಂಬರು ಹಾಕಬೇಕು ಎಂಬ ಪರಿಜ್ಞಾನ ಅಧಿಕಾರಿಗಳಿಗೆ ಇರಬೇಕು. ಜಲಮಂಡಳಿ ಅಥವಾ ಬಿಬಿಎಂಪಿ ಅಧಿಕಾರಿಗಳಿಗೆ ಜನರ ಸಮಸ್ಯೆ ಅರ್ಥವಾಗುವುದೇ ಇಲ್ಲ. ಒಬ್ಬರ ಮೇಲೊಬ್ಬರು ಬೊಟ್ಟು ಮಾಡಿಕೊಂಡು ಕಾಲ ತಳ್ಳುತ್ತಾರೆ. ಬಿಬಿಎಂಪಿ ಇರಬಹುದು, ಜಲಮಂಡಳಿ ಇರಬಹುದು, ಸಂಸ್ಥೆ ಯಾವುದು ಎಂಬುದು ನಮಗೆ ಮುಖ್ಯವಲ್ಲ. ಸಮಸ್ಯೆಗೆ ಪರಿಹಾರ ಸಿಗುವುದು ಮುಖ್ಯ' ಎಂದು ಆಕ್ರೋಶ ವ್ಯಕ್ತಪಡಿಸಿದರು.



ಆಟೋರಿಕ್ಷಾ ನಿಲ್ದಾಣ ಇದೇ ವೃತ್ತದಲ್ಲಿ ಇರುವುದರಿಂದ ರಿಕ್ಷಾಗಳನ್ನು ಇಲ್ಲೇ ನಿಲ್ಲಿಸಿಕೊಳ್ಳಬೇಕಿದೆ. ಇಡೀ ದಿನ ದೂಳು ಕುಡಿಯುತ್ತಿದ್ದೇವೆ. ಕೂಡಲೇ ಸಮಸ್ಯೆ ಸರಿಪಡಿಸಲು ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು

–ಬಾಬು, ರಿಕ್ಷಾ ಚಾಲಕರ ಸಂಘದ ಅಧ್ಯಕ್ಷ



ರಸ್ತೆಗೆ ಜಲ್ಲಿ ಹಾಕಿ ಎರಡು ತಿಂಗಳಾಗಿದ್ದು, ದೂಳಿನಲ್ಲೇ ಜೀವನ ನಡೆಸುತ್ತಿದ್ದೇವೆ. ಪ್ರತಿನಿತ್ಯ ಇಲ್ಲೇ ಕೂರಬೇಕಿರುವುದರಿಂದ ಆಸ್ತಮಾ ರೀತಿಯ ಆರೋಗ್ಯ ಸಮಸ್ಯೆಗಳು ಎದುರಾಗುವ ಆತಂಕ ಶುರುವಾಗಿದೆ

–ರಾಜೇಶ್, ಆಟೋರಿಕ್ಷಾ ಚಾಲಕ



ಕಾಮಗಾರಿ ಆರಂಭಿಸುವಾಗ ಇರುವ ವೇಗ, ಪೂರ್ಣಗೊಳಿಸುವ ತನಕ ಅಧಿಕಾರಿಗಳಿಗೆ ಇರುವುದಿಲ್ಲ. ಸಮಸ್ಯೆ ಹೇಳಿಕೊಳ್ಳಲು ಸ್ಥಳೀಯ ಜನಪ್ರತಿನಿಧಿಗಳೂ ಇಲ್ಲ. ಕೂಡಲೇ ರಸ್ತೆಗೆ ಡಾಂಬರ್ ಹಾಕಬೇಕು

–ಮಾನಪ್ಪ, ಚಾಲಕ



ಜಕ್ಕೂರಿನ ಅಂಬೇಡ್ಕರ್ ಭವನ ವೃತ್ತದಲ್ಲಿ ದೂಳು ಆವರಿಸಿರುವುದು –ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

ಶೀಘ್ರವೇ ಡಾಂಬರ್ ಹಾಕಲು ಸಿದ್ಧತೆ

'ಜಕ್ಕೂರು ಮುಖ್ಯ ರಸ್ತೆಯಲ್ಲಿ ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿಯನ್ನು ಜಲ ಮಂಡಳಿ ಪೂರ್ಣಗೊಳಿಸಿದ್ದು, ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಭಾನುವಾರದಿಂದಲೇ ಆರಂಭಿಸಲಾಗುವುದು' ಎಂದು ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವರುಣ್ ತಿಳಿಸಿದರು.

'ಕೆಂಪೇಗೌಡ ವೃತ್ತದಲ್ಲಿ ಕಲ್ವರ್ಟ್ ನಿರ್ಮಿಸುತ್ತಿದ್ದರಿಂದ ಸ್ವಲ್ಪ ವಿಳಂಬವಾಗಿದೆ. ಈಗ ತೊಡಕುಗಳೆಲ್ಲಾ ನಿವಾರಣೆಯಾಗಿದ್ದು, ಡಾಂಬರು ಹಾಕಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇನ್ನು 20 ದಿನಗಳಲ್ಲಿ ಎಲ್ಲ ಕಾಮಗಾರಿಯೂ ಪೂರ್ಣಗೊಳ್ಳಲಿದೆ' ಎಂದು ಹೇಳಿದರು.



ಜಲ್ಲಿ ಹೊದಿಕೆ ಹೊದಿಸಿರುವ ರಸ್ತೆಯಲ್ಲಿ ಸಂಚರಿಸುತ್ತಿರುವ ವಾಹನಗಳು

ಸುದ್ದಿ 2 ನಿಮಿಷ

ಕೈಗಾ: ಮುಂದಿನ ವರ್ಷ 2 ಘಟಕಗಳ ನಿರ್ಮಾಣ

ನವದೆಹಲಿ: ಕೈಗಾ ಪರಮಾಣು ಸ್ಥಾವರದಲ್ಲಿ ತಲಾ 700 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಎರಡು ಹೊಸ ಘಟಕಗಳ ನಿರ್ಮಾಣ ಕಾರ್ಯ ಮುಂದಿನ ವರ್ಷ ಪ್ರಾರಂಭವಾಗುವ ಸಾಧ್ಯತೆಯಿದೆ.

₹ 1.05 ಲಕ್ಷ ಕೋಟಿ ವೆಚ್ಚದಲ್ಲಿ ದೇಶದ ವಿವಿಧ ಪರಮಾಣು ಸ್ಥಾವರಗಳಲ್ಲಿ 700 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಒಟ್ಟು ಹತ್ತು ಘಟಕಗಳ ಸ್ಥಾಪನೆಗೆ ಕೇಂದ್ರದ ಸಚಿವ ಸಂಪುಟವು 2017ರಲ್ಲಿ ಹಸಿರು ನಿಶಾನೆ ತೋರಿದೆ. ಆ ಪೈಕಿ, ಕೈಗಾದ 5 ಮತ್ತು 6ನೇ ಘಟಕಗಳ ನಿರ್ಮಾಣ ಕಾರ್ಯ 2023ರಲ್ಲಿ ಆರಂಭವಾಗಲಿದೆ.

ಹರಿಯಾಣದ ಗೋರಖಪುರ ಪರಮಾಣು ಸ್ಥಾವರದಲ್ಲಿ ಎರಡು ಘಟಕಗಳ ನಿರ್ಮಾಣ ಕಾರ್ಯ ಮೊದಲು ಆರಂಭವಾಗಲಿದೆ. ನಂತರ ಕೈಗಾ ಘಟಕಗಳ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ. ರಾಜಸ್ಥಾನದ ಮಾಹಿ ಬಾನ್ಸ್‌ವಾಡಾ ಸ್ಥಾವರದಲ್ಲಿ 4 ಹಾಗೂ ಮಧ್ಯಪ್ರದೇಶದ ಚುಟಕಾ ಸ್ಥಾವರದಲ್ಲಿ 2 ಘಟಕಗಳ ನಿರ್ಮಾಣ ಕಾರ್ಯ 2024ರಲ್ಲಿ ಆರಂಭವಾಗಲಿದೆ.

ಎರಡು ಘಟಕಗಳ ಸ್ಥಾಪನೆಗೆ ಕೈಗಾ ಸ್ಥಾವರದಲ್ಲಿ ನಿವೇಶನ ಲಭ್ಯವಿದ್ದು, ಪರಿಸರ ಮತ್ತು ಅರಣ್ಯ ಸಚಿವಾಲಯಗಳ ಅನುಮತಿ ಈಗಾಗಲೇ ದೊರೆತಿದೆ ಎಂದು ಅಣುಶಕ್ತಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧ ಭೇದಿಸಲು ನೆರವಾಗಿದ್ದ 'ರೇವಾ' ಸಾವು



ಬೆಂಗಳೂರು: ಅಪರಾಧ ಪ್ರಕರಣ ಭೇದಿಸಲು ಪೊಲೀಸರಿಗೆ ನೆರವಾಗಿದ್ದ 'ರೇವಾ' ನಾಯಿ ಅನಾರೋಗ್ಯದಿಂದ ಗುರುವಾರ ಮೃತಪಟ್ಟಿದ್ದು, ಅಂತ್ಯಕ್ರಿಯೆಯನ್ನು ಸಕಲ ಗೌರವದೊಂದಿಗೆ ನೆರವೇರಿಸಲಾಯಿತು.

2011ರಲ್ಲಿ ಜನಿಸಿದ್ದ ಡಾಬರ್‌ಮನ್ ತಳಿಯ ನಾಯಿ, 10 ವರ್ಷಗಳಿಂದ ರಾಜ್ಯ ಶ್ವಾನ ವಿಭಾಗದಲ್ಲಿತ್ತು. ಕೊಲೆ, ದರೋಡೆ ಸೇರಿದಂತೆ ವಿವಿಧ ಅಪರಾಧ ಪ್ರಕರಣ ಭೇದಿಸಲು ಪೊಲೀಸರಿಗೆ ನೆರವಾಗುತ್ತಿತ್ತು.

ಸ್ಫೋಟಕಗಳ ಪತ್ತೆಯಲ್ಲೂ ಚುರುಕಾಗಿದ್ದ ರೇವಾ, ಹಲವು ಪ್ರಕರಣಗಳಲ್ಲಿ ಪ್ರಶಂಸೆಗೆ ಪಾತ್ರವಾಗಿತ್ತು. ಪಂಜಾಬ್, ತಮಿಳುನಾಡು, ಕರ್ನಾಟಕದ ಮೈಸೂರಿನಲ್ಲಿ ಆಯೋಜಿಸಿದ್ದ ಅಖಿಲ ಭಾರತ ಪೊಲೀಸ್ ಶ್ವಾನ ಕರ್ತವ್ಯ ಕೂಟಗಳಲ್ಲೂ 'ರೇವಾ' ಭಾಗಿಯಾಗಿತ್ತು. ಉತ್ತಮ ಪ್ರದರ್ಶನ ತೋರಿತ್ತು.

ಆಡುಗೋಡಿಯಲ್ಲಿರುವ ನಗರ ಸಶಸ್ತ್ರ ಮೀಸಲು ಪೊಲೀಸ್ ಪಡೆಯಲ್ಲಿ ನಾಯಿ ಮೃತದೇಹ ಇರಿಸಲಾಗಿತ್ತು. ಅಧಿಕಾರಿಗಳು ಹಾಗೂ ಸಿಬ್ಬಂದಿಯು ಪುಷ್ಪ ನಮನ ಸಲ್ಲಿಸಿದರು. ನಂತರ, ಸರ್ಕಾರಿ ಗೌರವದೊಂದಿಗೆ ನಾಯಿ ಅಂತ್ಯಕ್ರಿಯೆ ನಡೆಸಲಾಯಿತು. ಕರ್ತವ್ಯದ ವೇಳೆ ನಾಯಿ ಜೊತೆ ಕಾಲ ಕಳೆದಿದ್ದ ಸಿಬ್ಬಂದಿ, ಅಂತ್ಯಕ್ರಿಯೆ ವೇಳೆ ಕಣ್ಣೀರಿಟ್ಟರು. ಹಿರಿಯ ಅಧಿಕಾರಿಗಳೂ ನಾಯಿ ನೆನೆದು ಮರುಗಿದರು.

ಬಿಡಿಎ ಸಂಕೀರ್ಣ: ಶೀಘ್ರ ತೀರ್ಮಾನ– ಬೊಮ್ಮಾಯಿ

ಬೆಂಗಳೂರು: 'ಇಂದಿರಾ ನಗರದಲ್ಲಿರುವ ಬಿಡಿಎ ವಾಣಿಜ್ಯ ಸಂಕೀರ್ಣದ ಪುನರ್ ನಿರ್ಮಾಣ ಕಾಮಗಾರಿಯನ್ನು ಈಗಾಗಲೇ ಗುತ್ತಿಗೆ ನೀಡಿದ ಕಂಪನಿಯಿಂದ ಮುಂದುವರೆಸಬೇಕೆ ಅಥವಾ ಹೊಸಬರಿಗೆ ನೀಡಬೇಕೆ ಎಂಬ ಬಗ್ಗೆ ಶೀಘ್ರ ತೀರ್ಮಾನಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಇಂದಿರಾನಗರ ಬಿಡಿಎ ಸಂಕೀರ್ಣದಲ್ಲಿ 133 ಮಳಿಗೆಗಳಿವೆ. 68 ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿದೆ. 65 ಮಳಿಗೆಗಳು ಖಾಲಿ ಇವೆ. ₹ 75.91 ಲಕ್ಷ ವಾರ್ಷಿಕ ಬಾಡಿಗೆ ಬರುತ್ತಿದೆ' ಎಂದರು.

'ಈ ಸಂಕೀರ್ಣವನ್ನು ಪುನರ್ ನಿರ್ಮಾಣ ಮಾಡಲು 2016ರಲ್ಲಿ ಎಂಬಿಸ್ಸಿ ಲ್ಯಾಂಡ್ ಡೆವಲಪರ್ಸ್ ಕಂಪನಿಗೆ ಗುತ್ತಿಗೆ ನೀಡಲಾಗಿತ್ತು. 2019ರವರೆಗೂ ಸಣ್ಣಪುಟ್ಟ ಕೆಲಸಗಳಾಗಿವೆ. ಆ ಬಳಿಕ ಸ್ಥಗಿತವಾಗಿದೆ. ಖಾಲಿ ಕಟ್ಟಡ ಇನ್ನೂ ನೆಲಸಮ ಆಗಿಲ್ಲ. ಹೀಗಾಗಿ, ಹಳೆ ಕಂಪನಿಗೆ ಗುತ್ತಿಗೆ ಮುಂದುವರೆಸಬೇಕೇ ಅಥವಾ ಹೊಸ ಕಂಪನಿಗೆ ನೀಡಬೇಕೆ ಎಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ. ಅಧಿಕಾರಿಗಳ ಜತೆ ಚರ್ಚಿಸಿ ಶೀರ್ಘವೇ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.



ಶಿವಾಜಿನಗರದ ಮಾರುಕಟ್ಟೆ ಪ್ರದೇಶದಲ್ಲಿ ಬಂದ್ ಮಾಡಲಾಗಿದ್ದ ಅಂಗಡಿ – ಪ್ರಜಾವಾಣಿ ಚಿತ್ರ

ಅಂಗಡಿ ಬಂದ್ ಮಾಡಿದ ಮುಸ್ಲಿಂ ವರ್ತಕರು

ಬೆಂಗಳೂರು: 'ಹಿಜಾಬ್ ವಿಚಾರವಾಗಿ ಹೈಕೋರ್ಟ್ ನೀಡಿರುವ ತೀರ್ಪು ಒಪ್ಪಲಾಗದು' ಎಂದು ಪ್ರತಿಪಾದಿಸಿರುವ ಮುಸ್ಲಿಂ ಸಮುದಾಯದವರು, ನಗರದಲ್ಲಿ ಅಂಗಡಿಗಳನ್ನು ಮುಚ್ಚಿ ಗುರುವಾರ ಬಂದ್ ನಡೆಸಿದರು.

ಮುಸ್ಲಿಂ ಸಮುದಾಯದ ವ್ಯಾಪಾರಿಗಳು ಹೆಚ್ಚಿರುವ ಪ್ರದೇಶಗಳಲ್ಲಿ ಅಂಗಡಿ, ಹೋಟೆಲ್ ಹಾಗೂ ವ್ಯಾವಹಾರಿಕ ಕಚೇರಿಗಳನ್ನು ಬಂದ್ ಮಾಡಲಾಗಿತ್ತು. ದಿನಬಳಕೆ ವಸ್ತುಗಳ ಮಾರಾಟಕ್ಕೆ ಯಾವುದೇ ತೊಂದರೆ ಆಗಲಿಲ್ಲ. ಮುಸ್ಲಿಂ ವ್ಯಾಪಾರಿಗಳನ್ನು ಬಿಟ್ಟು ಉಳಿದೆಲ್ಲ ಸಮುದಾಯವರ ಅಂಗಡಿ, ಹೋಟೆಲ್‌ಗಳು ತೆರೆದಿದ್ದವು.

ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ), ದೇವರ ಜೀವನಹಳ್ಳಿ (ಡಿ.ಜೆ. ಹಳ್ಳಿ), ಟ್ಯಾನರಿ ರಸ್ತೆ, ಶಿವಾಜಿನಗರ, ಪಾದರಾಯನಪುರ, ಚಾಮರಾಜಪೇಟೆ, ಕೆ.ಆರ್.ಮಾರುಕಟ್ಟೆ, ಯಶವಂತಪುರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಅಂಗಡಿಗಳು ಹಾಗೂ ಹೋಟೆಲ್‌ಗಳು ಬೆಳಿಗ್ಗೆಯಿಂದಲೇ ಬಂದ್ ಆಗಿದ್ದವು.

ಬಟ್ಟೆ, ಪೀಠೋಪಕರಣ, ಎಲೆಕ್ಟ್ರಿಕಲ್ ಉತ್ಪನ್ನ, ಪಾದರಕ್ಷೆ, ವಾಹನಗಳ ಬಿಡಿ ಭಾಗ, ಕಂಪ್ಯೂಟರ್ ಬಿಡಿಭಾಗ ಮಾರಾಟ ಹಾಗೂ ಹೋಟೆಲ್, ತಳ್ಳುಗಾಡಿ ವ್ಯಾಪಾರ ಎಲ್ಲವೂ ಸ್ಥಗಿತವಾಗಿತ್ತು.

ಬಿಗಿ ಭದ್ರತೆ: ನಗರದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದು, ಗುಂಪು ಸೇರುವುದನ್ನು ನಿರ್ಬಂಧಿಸಲಾಗಿದೆ. ಬಂದ್ ಆಚರಿಸಿದ್ದ ಮುಸ್ಲಿಂ ಸಮುದಾಯದ ಬಹುತೇಕರು, ಮನೆಯಲ್ಲೇ ದಿನ ಕಳೆದರು. ಮುಂಜಾಗ್ರತಾ ಕ್ರಮವಾಗಿ ನಗರದ ಎಲ್ಲ ಪ್ರದೇಶಗಳಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು.

ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿದ್ದ ಪೊಲೀಸರು, ಅಲ್ಲಲ್ಲ ಹೆಚ್ಚಿನ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಿದ್ದರು. ಕೆಲವೆಡೆ ಸುತ್ತಾಡಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, 'ನಗರದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಗುಂಪು ಸೇರುವುದು ಹಾಗೂ ಪ್ರತಿಭಟನೆ, ರ್‍ಯಾಲಿ, ಮೆರವಣಿಗೆ, ಪ್ರತಿಕೃತಿ ದಹನಕ್ಕೆ ಅವಕಾಶವಿಲ್ಲ' ಎಂದು ಮೈಕ್‌ನಲ್ಲಿ ಕೂಗಿ ಹೇಳಿದರು.

'ಹಿಜಾಬ್: ಪರೀಕ್ಷೆಗೆ ಅವಕಾಶ ನೀಡಿ'

ಬೆಂಗಳೂರು: 'ಹಿಜಾಬ್ ವಿಚಾರವಾಗಿ ಶಿಕ್ಷಣ ಸಂಸ್ಥೆಗಳು ಕೋಮುವಾದಿಗಳ ಕುತಂತ್ರಕ್ಕೆ ಒಳಗಾಗದೆ, ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪರೀಕ್ಷೆಗಳಲ್ಲಿ ಭಾಗಿಯಾಗಲು ಅವಕಾಶ ನೀಡಬೇಕು' ಎಂದು ಜನತಾ ಪಾರ್ಟಿ ಕರ್ನಾಟಕದ ರಾಜ್ಯ ಘಟಕದ ಅಧ್ಯಕ್ಷೆ ಬಿ.ಟಿ. ಲಲಿತಾ ನಾಯಕ್ ಆಗ್ರಹಿಸಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಜಾಬ್ ಬಗ್ಗೆ ಬಹುಪಾಲು ಜನರಿಗೆ ತಿಳಿದಿಲ್ಲ. ಅವರವರ ಸಂಸ್ಕೃತಿಗೆ ತಕ್ಕಂತೆ ಉಡುಪು ಧರಿಸುತ್ತಾರೆ ಎಂಬ ಉದಾರ ಭಾವನೆ ಎಲ್ಲರದ್ದಾಗಿತ್ತು. ಈ ನಡುವೆ ಕೋಮುವಾದಿಗಳು ವಿನಾಕಾರಣ ಹಿಜಾಬ್ ವಿಚಾರವನ್ನು ಬೀದಿಗೆ ತಂದು, ನಾಡಿನ ಜನತೆಯ ನೆಮ್ಮದಿಗೆ ಭಂಗ ತಂದರು' ಎಂದು ಹೇಳಿದರು.

'ಧರ್ಮವನ್ನು ಸಂಕುಚಿತಗೊಳಿಸಿ, ಅದನ್ನು ಅಮಲನ್ನಾಗಿಸುವ ಮೂಲಕ ಸಮಾಜವನ್ನು ಮತಾಂಧತೆ ತೆರೆಗೆ ಕೊಂಡೊಯ್ಯಲಾಗುತ್ತಿದೆ. ಇಂತಹ ದುಷ್ಟ ಶಕ್ತಿಗಳಿಂದ ಶಿಕ್ಷಣ ಸಂಸ್ಥೆಗಳು ದೂರ ಇರಬೇಕು' ಎಂದರು.

'ವಿಕ್ಟೋರಿಯಾ ಆಸ್ಪತ್ರೆ ಸಾಕ್ಷಾತ್ ನರಕ'

ಸರ್ಕಾರದ ವಿರುದ್ಧವೇ ಅಸಮಾಧಾನ ವ್ಯಕ್ತಪಡಿಸಿದ ಬಿಜೆಪಿಯ ಲೆಹರ್ ಸಿಂಗ್

ಪ್ರಜಾವಾಣಿ ವಾರ್ತೆ



ವಿಧಾನ ಮಂಡಲದಲ್ಲಿ

ಬೆಂಗಳೂರು: 'ನಗರದ ವಿಕ್ಟೋರಿಯಾ ಆಸ್ಪತ್ರೆ ಸಾಕ್ಷಾತ್ ನರಕವಾಗಿದೆ. ಇಲ್ಲಿ ಬಡವರೇ ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ, ಸುಧಾರಣೆ ಮಾತ್ರ ಕಾಣುತ್ತಿಲ್ಲ' ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಲೆಹರ್ ಸಿಂಗ್ ಸಿರೋಯಾ ಕಳವಳ ವ್ಯಕ್ತಪಡಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ನಮ್ಮ ಅಧಿಕಾರಿಗಳ ಮನೆಯಲ್ಲಿ ಈಜುಕೊಳಗಳು ನಿರ್ಮಾಣವಾಗುತ್ತಿವೆ. ಆದರೆ, ಈ ಆಸ್ಪತ್ರೆಯಲ್ಲಿ ಮೂಲಸೌಕರ್ಯಗಳೇ ಇಲ್ಲ. ಸದ್ಯ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಸಾಕಾಗುವುದಿಲ್ಲ. ಸದನದ ನಾಲ್ಕೈದು ಸದಸ್ಯರು ಈ ಆಸ್ಪತ್ರೆಗೆ ಭೇಟಿ ನೀಡಿದರೆ ವಾಸ್ತವ ಸಮಸ್ಯೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಲಿದೆ' ಎಂದು ಹೇಳಿದರು.

'ಇಡೀ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ. ಇಲ್ಲಿ ಉತ್ತರದಾಯಿತ್ವವೇ ಇಲ್ಲದಂತಾಗಿದೆ. ಅಧಿಕಾರಿಗಳು – ಗುತ್ತಿಗೆದಾರರು ತಿನ್ನುತ್ತಾರೆ. ಜನ ಮಾತ್ರ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಹಣ ನೀಡಿದರೆ ಮಾತ್ರ ಪೊಲೀಸ್ ಅಧಿಕಾರಿಗಳ ವರ್ಗಾವಣೆ ನಡೆಯುತ್ತಿದೆ. ಹೀಗಾಗಿ, ಪೊಲೀಸ್ ಇಲಾಖೆ ಶೋಚನೀಯ ಸ್ಥಿತಿಯಲ್ಲಿದೆ. ಹಣ, ಜಾತಿ ಮತ್ತು ಸ್ವಜನಪಕ್ಷಪಾತದ ಆಧಾರದ ಮೇಲೆಯೇ ಪೊಲೀಸ್ ಇಲಾಖೆಯಲ್ಲಿ ನೇಮಕಾತಿಗಳು ನಡೆಯುತ್ತಿವೆ' ಎಂದು ದೂರಿದರು.

'ಈಜಿಪುರ ಮೇಲ್ಸೇತುವೆ ಕಾಮಗಾರಿ ನಾಲ್ಕು ವರ್ಷಗಳಿಂದ ನಡೆಯುತ್ತಿದ್ದರೂ ಇನ್ನೂ ಮುಗಿದಿಲ್ಲ. ಅದು ಯಥಾಸ್ಥಿತಿಯಲ್ಲಿದೆ. ಅದೇ ರೀತಿ ಶಿವಾನಂದ ವೃತ್ತದಲ್ಲಿ ಮೇಲ್ಸೇತುವೆ ಇನ್ನೂ ಸಂಚಾರಕ್ಕೆ ಮುಕ್ತವಾಗಿಲ್ಲ. ಹೆಬ್ಬಾಳ ಮೇಲ್ಸೇತುವೆಯಲ್ಲಿ ಸಂಚಾರ ಅವ್ಯವಸ್ಥೆಯಿಂದ ಕೂಡಿದೆ. ಈ ಬಗ್ಗೆ ಈಗಲಾದರೂ ಗಮನ ಹರಿಸಬೇಕು' ಎಂದು ಒತ್ತಾಯಿಸಿದರು.



ಲೆಹರ್ ಸಿಂಗ್

'ಮೂರು ಪಕ್ಷಗಳ ನಾಯಕತ್ವ ಬದಲಾಗದಿದ್ದರೆ ಎಎಪಿ ಅಧಿಕಾರಕ್ಕೆ'

'ರಾಜ್ಯದಲ್ಲಿ ಪ್ರಮುಖವಾಗಿರುವ ಮೂರೂ ಪಕ್ಷಗಳ ನಾಯಕತ್ವ ಬದಲಾವಣೆಯಾಗದಿದ್ದರೆ ಅವು ದೂಳಿಪಟವಾಗುತ್ತವೆ. ದೆಹಲಿ ರೀತಿಯಲ್ಲಿ ಆಮ್ ಆದ್ಮಿ ಪಕ್ಷವು ಎಲ್ಲರನ್ನೂ ದೂಳಿಪಟ ಮಾಡುತ್ತದೆ' ಎಂದು ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಲೆಹರ್ ಸಿಂಗ್ ಎಚ್ಚರಿಕೆ ನೀಡಿದರು.

'ನಾನು 12 ವರ್ಷಗಳಿಂದ ಸದನದಲ್ಲಿದ್ದೇನೆ. ಪಕ್ಷ ನನಗೆ ಎರಡು ಅವಧಿಗೆ ಅವಕಾಶ ನೀಡಿದೆ. ಮತ್ತೆ ನಾನು ಅವಕಾಶ ಕೇಳುವುದಿಲ್ಲ. ಹೊಸಬರಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಹಾಗಾಗಿ, ಇದೇ ನನ್ನ ಕಡೆಯ ಭಾಷಣ' ಎಂದು ಹೇಳಿದರು.

'ಇವತ್ತು ಜಾತಿ ಆಧಾರದಲ್ಲಿ ನಿಗಮ-ಮಂಡಳಿಗೆ ನೇಮಕ ಮಾಡಲಾಗುತ್ತಿದೆ. ಅದೇ ರೀತಿ ಜಾತಿ ಆಧಾರದ ಮೇಲೆಯೇ ಬಜೆಟ್ ರೂಪಿಸಲಾಗುತ್ತಿದೆ. ಇಂತಹ ವ್ಯವಸ್ಥೆ ಬದಲಾಗಬೇಕು' ಎಂದು ಸಲಹೆ ನೀಡಿದರು.

ಸಭಾಪತಿ ವಿರುದ್ಧ ಪ್ರಕರಣ; ಪೊಲೀಸರ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ ವಿಷಯ ವಿಧಾನ-ಪರಿಷತ್‌ನಲ್ಲಿ ಗುರುವಾರ ಮತ್ತೊಮ್ಮೆ ಚರ್ಚೆಗೆ ಗ್ರಾಸವಾಯಿತು. ಹಿರಿಯ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬ ಒತ್ತಾಯವೂ ಕೇಳಿಬಂತು.

ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, 'ಸಭಾಪತಿ ಸಾಂವಿಧಾನಿಕ ಹುದ್ದೆ. ಆ ಸ್ಥಾನದಲ್ಲಿರುವ ಹೊರಟ್ಟಿ ಅವರ ವಿರುದ್ಧ ಇಲ್ಲಿ ನಿಯಮಾವಳಿಗಳನ್ನು ಉಲ್ಲಂಘಿಸಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜಾತಿ ಪಂಗಡ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಸಭಾಪತಿಗೆ ಅಗೌರವವಾಗಿದೆ. ಶಿಷ್ಟಾಚಾರ ಪಾಲನೆಯಾಗಿಲ್ಲ. ಸರ್ಕಾರ ಸಬ್ ಇನ್‌ಸ್ಪೆಕ್ಟರ್ ಒಬ್ಬರನ್ನು ಅಮಾನತುಪಡಿಸಿ ಕೈತೊಳೆದುಕೊಳ್ಳುತ್ತಿದೆ. ಈ ಪ್ರಕರಣಕ್ಕೆ ಕಾರಣರಾದ ಡಿವೈಎಸ್‌ಪಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಆಗ ಮುಖ್ಯಮಂತ್ರಿ, 'ರಾಜ್ಯಪಾಲರ ಬಳಿಕ ಸಭಾಪತಿ ಹುದ್ದೆ ಹೆಚ್ಚು ಗೌರವಯುತ ಸ್ಥಾನ ಎಂಬುದು ಶಿಷ್ಟಾಚಾರದಲ್ಲಿ ದಾಖಲಾಗಿದೆ. ಸಾಂವಿಧಾನಿಕ ಹುದ್ದೆಯಲ್ಲಿ ಇರುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾದರೆ ಶಿಷ್ಟಾಚಾರ ಪಾಲಿಸಬೇಕು. ವಿಷಯ ತಿಳಿದ ಬಳಿಕ ನಾನು ಸಭಾಪತಿ ಜೊತೆ ಮಾತನಾಡಿದ್ದೇನೆ. ಅವರು ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ಈಗಾಗಲೇ ಸಬ್ ಇನ್‌ಸ್ಪೆಕ್ಟರ್ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಪ್ರಕರಣದ ವಿಚಾರಣಾಧಿಕಾರಿ ಡಿವೈಎಸ್‌ಪಿ ವಿರುದ್ಧ ಕ್ರಮಕ್ಕೆ ಪರಿಶೀಲಿಸಲಾಗುತ್ತಿದೆ' ಎಂದರು.

'ಈ ಪ್ರಕರಣದಲ್ಲಿ ಕೆಳಹಂತದ ಅಧಿಕಾರಿಯನ್ನಷ್ಟೇ ಬಲಿಪಶು ಮಾಡಲಾಗಿದೆ. ಹಿರಿಯ ಅಧಿಕಾರಿಯನ್ನು ರಕ್ಷಿಸಲಾಗುತ್ತಿದೆ. ಸಭಾಪತಿಗೆ ಅವಮಾನ ಆದಾಗಲೂ ಸರ್ಕಾರ ಈ ರೀತಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ' ಎಂದು ಕಾಂಗ್ರೆಸ್ಸಿನ ಸಲೀಂ ಅಹಮ್ಮದ್, ಯು.ಬಿ. ವೆಂಕಟೇಶ್ ಆಕ್ಷೇಪ ವ್ಯಕ್ತಪಡಿಸಿದರು.

'ಪರಿಶಿಷ್ಟ ಸಮುದಾಯದ ಪಿಎಸ್‌ಐಯನ್ನು ಹರಕೆಯ ಕುರಿ ಮಾಡಲಾಗಿದೆ' ಎಂದು ವಿರೋಧ ಪಕ್ಷದ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಕ್ಷೇಪಿಸಿದರು. ಎಸ್‌ಪಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಆಗ್ರಹಿಸಿದರು.

'ಹಿಜಾಬ್: ಸರ್ಕಾರ ತಾಯಿ ಹೃದಯ ತೋರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಜಾಬ್ ಅಥವಾ ಬೇರೆ ಯಾವುದೇ ವಿಷಯಕ್ಕಿಂತ ಹೆಣ್ಣು ಮಕ್ಕಳ ಶಿಕ್ಷಣ ಮುಖ್ಯ. ಇನ್ನಾದರೂ ಸರ್ಕಾರ ತಾಯಿ ಹೃದಯದಿಂದ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಉದಾತ್ತವಾಗಿ ಹೆಜ್ಜೆ ಇಡಬೇಕು. ಮಕ್ಕಳ ಹಾಲಿನಂತಹ ಮನಸ್ಸನ್ನು ಒಡೆಯಬಾರದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಮಕ್ಕಳ ಮನಸ್ಸಿನಲ್ಲಿ ದ್ವೇಷದ ದಳ್ಳುರಿಯನ್ನು ಯಾರೂ ಬಿತ್ತಬಾರದು, ಅಂತಹ ಭಾವನೆಗಳನ್ನು ಯಾರೂ ಪ್ರೋತ್ಸಾಹಿಸಬಾರದು. ಮುಸ್ಲಿಂ ಮಕ್ಕಳಿಗೆ ಆ ದುಪಟ್ಟಾವನ್ನು ತಲೆಯ ಸೆರಗಿನ ರೀತಿ ಧರಿಸಲು ಅವಕಾಶ ಕೊಟ್ಟರೆ ಸಮಸ್ಯೆ ಮುಗಿಯುತ್ತದೆ. ಆಗ ಸಮವಸ್ತ್ರ ಬಿಟ್ಟು ಬೇರೆ ವಸ್ತ್ರ ಧರಿಸುವ ಅವಶ್ಯಕತೆ ಇರುವುದಿಲ್ಲ. ಸರ್ಕಾರ ಈ ಬಗ್ಗೆ ಆದೇಶ ಹೊರಡಿಸಿದರೆ ಸಮಸ್ಯೆ ಸುಲಭವಾಗಿ ಬಗೆಹರಿಯಲಿದೆ ಎಂದು ಅವರು ಹೇಳಿದರು.

ಹಿಜಾಬ್ ವಿಷಯದಲ್ಲಿ ಹೈಕೋರ್ಟ್ ನೀಡಿರುವ ತೀರ್ಪಿನ ಪಾಲನೆ ಎಲ್ಲರ ಕರ್ತವ್ಯ. ಒಬ್ಬ ಹೆಣ್ಣು ಮಗು ಕಲಿತರೆ ಆ ಕುಟುಂಬಕ್ಕೆ ಬೆಳಕು ಬಂದಂತೆ. ಹೀಗಾಗಿ ಎಲ್ಲ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಜವಾಬ್ದಾರಿಯಿಂದ ವರ್ತಿಸಬೇಕು ಎಂದರು.

ರಾಜಕೀಯ ಕಾರಣಕ್ಕೆ ಮುಂಚೂಣಿಗೆ ಬಂದ ಈ ಎಲ್ಲ ಅನಪೇಕ್ಷಿತ ವಿವಾದಗಳಲ್ಲಿ ಮಕ್ಕಳೇ ಬಲಿಪಶುಗಳು. ಈ ವಿವಾದಗಳನ್ನು ಇನ್ನೂ ಜೀವಂತ ಇಡಲು ಕೆಲವರು ಪ್ರಯತ್ನ ಮಾಡುತ್ತಿದ್ದಾರೆ. ಅದು ಸರಿಯಲ್ಲ ಎಂದರು.

ಹಿಜಾಬ್ ಹಿಂದೆ ಕಾಣದ ಕೈಗಳು ಇವೆ ಎಂದು ಹೈಕೋರ್ಟ್ ಹೇಳಿದೆ. ಸರ್ಕಾರ ಆ ಕೈಗಳನ್ನು ಪತ್ತೆ ಹಚ್ಚಿ ಹೆಸರುಗಳನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು.



ನಾಡಗೀತೆಯಲ್ಲಿ ಹಿಂದು ಕ್ರೈಸ್ತ ಮುಸಲ್ಮಾನ, ಪಾರಸಿಕ ಜೈನರುದ್ಯಾನ ಎಂದು ಕುವೆಂಪು ಬರೆದಿದ್ದಾರೆ. ಕರ್ನಾಟಕವನ್ನು ಸರ್ವ ಜನಾಂಗದ ತೋಟ ನಿರ್ಮಾಣ ಮಾಡಬೇಕಿದೆ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ನ್ಯಾಯಾಂಗ ನಿಂದನೆ: ಕ್ರಮಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಜಾಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ವಿಸ್ತೃತ ನ್ಯಾಯಪೀಠದ ತೀರ್ಪನ್ನು ಅಸಾಂವಿಧಾನಿಕ ಎಂದು ಜರೆದಿರುವ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಅಧ್ಯಕ್ಷ ಅತ್ತಾವುಲ್ಲಾ ಪುಂಜಾಲಕಟ್ಟೆ ವಿರುದ್ಧ ಸ್ವಯಂಪ್ರೇರಿತ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಬೇಕು' ಎಂದು ನಗರದ ಸಾಮಾಜಿಕ ಕಾರ್ಯಕರ್ತ ಹರೀಶ್ ಭಾರದ್ವಾಜ್ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ಗೆ ಲಿಖಿತ ಮನವಿ ಸಲ್ಲಿಸಿದ್ದಾರೆ.

'ತೀರ್ಪು ಸಂವಿಧಾನಬಾಹಿರ ಎಂದು ಅತ್ತಾವುಲ್ಲಾ ಪುಂಜಾಲಕಟ್ಟೆ ಅವರು, ಮಾಧ್ಯಮಗಳ ಮುಂದೆ ಟೀಕೆಸಿದ್ದಾರೆ' ಎಂದಿದ್ದಾರೆ ಹರೀಶ್. 'ಪ್ರಕರಣದ ಅರ್ಜಿದಾರರಲ್ಲಿ ಒಬ್ಬರಾದ ಅಲಿಯಾ ಅಸಾದಿ, ಹೈಕೋರ್ಟ್ ನಮ್ಮ ವಿರುದ್ಧ ತೀರ್ಪು ನೀಡುವಂತೆ ಸರ್ಕಾರ ತನ್ನ ಪ್ರಭಾವ ಬೀರಿದೆ ಎಂದಿದ್ದಾರೆ. ಇಂತಹ ಹೇಳಿಕೆಗಳು ಕಾನೂನಿನ ಮೇಲೆ ನಡೆಸಲಾಗುತ್ತಿರುವ ಆಕ್ರಮಣ' ಎಂದಿದ್ದಾರೆ.

'ಹುಕ್ಕಾ ಬಾರ್; ನಿಷೇಧಿತ ವಸ್ತು ಬಳಸಿದರೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ತಿಂಗಳು ನಗರದ 3-4 ಹುಕ್ಕಾ ಬಾರ್‌ಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಅಲ್ಲಿನ ಧೂಮಪಾನ ವಲಯದಲ್ಲಿ ಬಳಸುತ್ತಿರುವ ಸರಕುಗಳನ್ನು ವಶಪಡಿಸಿಕೊಂಡಿದ್ದಾರೆ. ಅದನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ನಿಷೇಧಿತ ವಸ್ತು ಬಳಸಿರುವುದು ಪತ್ತೆಯಾದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಪಿ.ಆರ್. ರಮೇಶ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಶಾಲಾ-ಕಾಲೇಜು ವಿದ್ಯಾರ್ಥಿಗಳು, ಯುವಜನರು, ಹೆಣ್ಣುಮಕ್ಕಳು ಕೂಡ ಈ ಸ್ಥಳಗಳಿಗೆ ಭೇಟಿ ನೀಡುತ್ತಿರುವುದು ಗಮನಕ್ಕೆ ಬಂದಿದೆ. ಪೊಲೀಸರು ಈ ಬಗ್ಗೆ ನಿಗಾ ಇಟ್ಟಿದ್ದಾರೆ' ಎಂದು ಹೇಳಿದರು.

ಪಿ.ಆರ್. ರಮೇಶ್, 'ಬೆಂಗಳೂರಿನಲ್ಲಿರುವ ಹುಕ್ಕಾ ಬಾರ್‌ಗಳಲ್ಲಿ ಹರ್ಬಲ್ ಕಚ್ಚಾ ವಸ್ತುಗಳನ್ನು ಮಾತ್ರ ಪೂರೈಸಬೇಕು ಎಂಬ ನಿಯಮವಿದೆ. ಆದರೆ, ಗಾಂಜಾ ಸೇರಿದಂತೆ ನಿಷೇಧಿತ ವಸ್ತುಗಳ ಬಳಕೆಯಾಗುತ್ತಿದೆ. ಬಿಬಿಎಂಪಿಯವರು ಉದ್ದಿಮೆ ಪರವಾನಗಿ ನೀಡುತ್ತಿದ್ದಾರೆ. ಹುಕ್ಕಾ ಬಾರ್‌ಗಳಿಗೂ ತಮಗೂ ಸಂಬಂಧ ಇಲ್ಲ ಎಂಬಂತೆ ಪೊಲೀಸರು ವರ್ತಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಡ್ಯಾನ್ಸ್ ಬಾರ್‌ಗಳು ಇಲ್ಲ ಎಂದು ಸಚಿವರು ಉತ್ತರ ನೀಡಿದ್ದಾರೆ. ಸಂಜೆ ಮೇಲೆ ನನ್ನ ಜತೆ ಬಂದರೆ ಡಾನ್ಸ್ ಬಾರ್‌ಗೆ ಕರೆದುಕೊಂಡು ಹೋಗುತ್ತೇನೆ' ಎಂದು ಹೇಳಿದರು.

ಆಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ಎಲ್ಲಿಗೆ ಕರೆದುಕೊಂಡು ಹೋಗುತ್ತೀರಾ' ಎಂದು ಪ್ರಶ್ನಿಸಿದರು. 'ರಮೇಶ್ ಒಳ್ಳೆಯವರು ಎಂದು ನಾನು ವಿರೋಧ ಪಕ್ಷದ ನಾಯಕರ ಜತೆ ಹೇಳಿದ್ದೆ. ನೀವು ನೋಡಿದರೆ ಡ್ಯಾನ್ಸ್ ಬಾರ್, ಹುಕ್ಕಾ ಬಾರ್ ಎಂದು ಮಾತನಾಡುತ್ತೀರಾ. ನೀವು ಅಲ್ಲಿಗೆಲ್ಲ ಏಕೆ ಹೋಗಿದ್ದೀರಿ? ನಮ್ಮ ಗೃಹ ಸಚಿವರಿಗೆ ಬೆಂಗಳೂರು ಗೊತ್ತಿಲ್ಲ. ಅವರನ್ನು ಎಲ್ಲೆಲ್ಲಿಗೋ ಕರೆದುಕೊಂಡು ಹೋಗಬೇಡಿ. ಅವರ ಮನೆಯವರೂ ಒಂದಿಷ್ಟು ನಂಬಿಕೆ ಇಟ್ಟುಕೊಂಡಿದ್ದಾರೆ. ಅದಕ್ಕೆ ಹಾನಿ ಮಾಡಬೇಡಿ' ಎಂದು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ನಗುತ್ತಾ ಹೇಳಿದರು. ಆಗ ಇಡೀ ಸದನದಲ್ಲಿ ನಗೆ ಉಕ್ಕಿತು.

ಆಗ ರಮೇಶ್, 'ನನಗೆ ಇಸ್ಪೀಟ್ ಆಡಲು ಬರುವುದಿಲ್ಲ. ನಾನು ಎಲ್ಲಿಗೂ ಹೋಗುವುದಿಲ್ಲ. ಆದರೆ, ಹುಕ್ಕಾ ಬಾರ್‌ಗಳಿಂದ ವಿದ್ಯಾರ್ಥಿ ಸಮುದಾಯ ಹಾಳಾಗುತ್ತಿದೆ' ಎಂದರು.

ಬಂದೀಖಾನೆಗಳ ತಿದ್ದುಪಡಿ ಮಸೂದೆ ಮಂಡನೆ

ಬೆಂಗಳೂರು: ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ಜೈಲಿನೊಳಗೆ ಒಯ್ಯುವುದನ್ನು ನಿರ್ಬಂಧಿಸಲು, ಪೆರೋಲ್ ನಿಯಮ ಉಲ್ಲಂಘನೆ ತಡೆಯಲು ಕರ್ನಾಟಕ ಬಂದೀಖಾನೆಗಳ (ತಿದ್ದುಪಡಿ) ಮಸೂದೆಯನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಮಂಡಿಸಿದರು. ನಿಯಮ ಉಲ್ಲಂಘಿಸಿದರೆ ಮೂರರಿಂದ ಐದು ವರ್ಷದವರೆಗೆ ಜೈಲುಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಹೇಳಲಾಗಿದೆ

'ಸಂಚಾರ ನಿಯಮ ಉಲ್ಲಂಘನೆ: 3 ವರ್ಷದಲ್ಲಿ ₹ 660 ಕೋಟಿ ಸಂಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ ಪ್ರಕರಣಗಳಲ್ಲಿ ₹ 660.97 ಕೋಟಿ ದಂಡ ಸಂಗ್ರಹಿಸಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ಸಿನ ದಿನೇಶ್ ಗೂಳಿಗೌಡ ಅವರ ಪ್ರಶ್ನೆಗೆ ಉತ್ತರಿಸಿರುವ ಅವರು, 'ವಸೂಲು ಮಾಡಿದ ದಂಡದ ಮೊತ್ತವನ್ನು ಸಂಚಾರ ಸುಧಾರಣೆಗಾಗಿ ಸುಧಾರಿತ ತಂತ್ರಜ್ಞಾನ ಅಳವಡಿಸಲು ಬಳಸಲಾಗುತ್ತದೆ. ಮುಖ್ಯವಾಗಿ, ಸಂಚಾರ ಸೂಚನಾ ಫಲಕ, ಸಿ.ಸಿ ಟಿವಿ ಕ್ಯಾಮೆರಾ, ಹೆದ್ದಾರಿ ಗಸ್ತು ವಾಹನ, ಇಂಟರ್‌ಸೆಪ್ಟರ್ ವಾಹನ ಖರೀದಿ, ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಪ್ರಕರಣ ದಾಖಲಿಸಲು ಬಳಸುವ ಪಿಡಿಎ ಸಾಧನ ಮುಂತಾದ ಪರಿಕರಗಳನ್ನು ಖರೀದಿಸಲು ಬಳಕೆ ಮಾಡಲಾಗುತ್ತದೆ' ಎಂದಿದ್ದಾರೆ.



ದಿನೇಶ್

'ಸಂಚಾರ ಸುಧಾರಣೆಗಾಗಿ 2018-19ರಿಂದ 2020–21ರವರೆಗಿನ ಮೂರು ವರ್ಷಗಳಲ್ಲಿ ₹ 67.75 ಕೋಟಿ ಬಿಡುಗಡೆ ಮಾಡಲಾಗಿದೆ. ಆ ಪೈಕಿ, ₹ 47.09 ಕೋಟಿ ವೆಚ್ಚ ಮಾಡಲಾಗಿದೆ. 2020–21ರ ಅನುದಾನದಲ್ಲಿ ಬಾಕಿ ಉಳಿದ ₹ 19.73 ಕೋಟಿಯನ್ನು ಬೆಂಗಳೂರು ನಗರ ಪೊಲೀಸ್ ಕಮಿಷನರ್, ಕೆಆರ್‌ಡಿಸಿಎಲ್ ಸಂಸ್ಥೆಯಲ್ಲಿ ಠೇವಣಿಯಾಗಿಟ್ಟು, ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದಾರೆ' ಎಂದಿದ್ದಾರೆ.

ಔರಾದಕರ್ ವರದಿಗೆ ಕ್ರಮ: 'ರಾಘವೇಂದ್ರ ಔರಾದಕರ್ ವರದಿಯ ಶಿಫಾರಸುಗಳನ್ನು ಸರ್ಕಾರ ಭಾಗಶಃ ಅಂಗೀಕರಿಸಿ, ಜಾರಿ ಮಾಡಿದೆ. ಇದರಿಂದ 84,773 ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅನುಕೂಲವಾಗಿದೆ' ಎಂದೂ ಜ್ಞಾನೇಂದ್ರ ತಿಳಿಸಿದ್ದಾರೆ.

ಬಿಎಸ್‌ಪಿ ವಿಭಾಗೀಯ ಸಮಾವೇಶ ಇಂದು

ಬೆಂಗಳೂರು: ಬಹುಜನ ಸಮಾಜ ಪಕ್ಷದ ನಾಯಕ ಕಾನ್ಷಿರಾಮ್ ಅವರ 89ನೇ ಜಯಂತಿ ಅಂಗವಾಗಿ ಸಂವಿಧಾನ ರಕ್ಷಣೆ ಮತ್ತು ಬಹುಜನರ ಹಕ್ಕುಗಳ ಸುರಕ್ಷತೆಗಾಗಿ ವಿಭಾಗೀಯ ಮಟ್ಟದ ಸಮಾವೇಶವನ್ನು ಬಿಎಸ್‌ಪಿ ನಗರದಲ್ಲಿ ಶುಕ್ರವಾರ ಆಯೋಜಿಸಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಳಿಗ್ಗೆ 11ಕ್ಕೆ ಸಮಾವೇಶ ನಡೆಯಲಿದ್ದು, ಪಕ್ಷದ ರಾಜ್ಯ ಸಂಯೋಜಕರಾದ ಮಾರಸಂದ್ರ ಮುನಿಯಪ್ಪ, ಎಂ.ಗೋಪಿನಾಥ್, ಸುರೇಂದ್ರ ಸಿಂಗ್ ಕಲೋರಿಯಾ, ದಿನೇಶ್ ಗೌತಮ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ ಇತರರು ಭಾಗವಹಿಸುವರು.

'ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ಪಾಟೀಲ ಮತ್ತು ಹುಮನಾಬಾದ್ ತಹಶೀಲ್ದಾರ್ ಪ್ರದೀಪ್ ಕುಮಾರ್ ಹಿರೇಮಠ ವಿರುದ್ಧ ಕ್ರಮ ಕೈಗೊಳ್ಳಬೇಕು. ಎಸ್‌ಸಿ/ಎಸ್‌ಟಿ ಮೀಸಲಾತಿ ಪ್ರಮಾಣ ಹೆಚ್ಚಳ ಸಂಬಂಧ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಆಯೋಗದ ವರದಿ ಜಾರಿಗೊಳಿಸಬೇಕು. ಎಸ್‌ಸಿ/ಎಸ್‌ಟಿ ನೌಕರರ ಮುಂಬಡ್ತಿ ಮೀಸಲಾತಿ ರಕ್ಷಣೆ ಮಾಡಬೇಕು. ಎಲ್ಲ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ, ಖಾಸಗಿ ಕ್ಷೇತ್ರದಲ್ಲಿ ಒಬಿಸಿ ಮತ್ತು ಎಸ್‌ಸಿ/ಎಸ್‌ಟಿ ಸಮುದಾಯದವರಿಗೆ ಮೀಸಲಾತಿ, ಸೇರಿ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲಾಗುತ್ತದೆ' ಎಂದು ಬಿಎಸ್‌ಪಿ ತಿಳಿಸಿದೆ.

ರಾಜ್ಯದ ವಿವಿಧೆಡೆ ಮುಸ್ಲಿಂ ಸಮುದಾಯದ ವರ್ತಕರಿಂದ ಉತ್ತಮ ಪ್ರತಿಕ್ರಿಯೆ

ವ್ಯಾಪಾರ– ವಹಿವಾಟು ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪನ್ನು ವಿರೋಧಿಸಿ, ವಿವಿಧ ಮುಸ್ಲಿಂ ಸಂಘಟನೆಗಳು ಗುರುವಾರ ಕರೆ ನೀಡಿದ್ದ ಬಂದ್ ಅನ್ನು ರಾಜ್ಯದ ವಿವಿಧೆಡೆ ಮುಸ್ಲಿಂ ವರ್ತಕರು ಬೆಂಬಲಿಸಿದರು.

ಮುಸ್ಲಿಂ ವ್ಯಾಪಾರಿಗಳು ತಮ್ಮ ಅಂಗಡಿ, ಮಳಿಗೆ ಹಾಗೂ ಹೋಟೆಲ್‌ಗಳ ವ್ಯಾಪಾರ– ವಹಿವಾಟು ಸ್ಥಗಿತಗೊಳಿಸಿ, ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದರು. ವಾಹನ ಸಂಚಾರ ಎಂದಿನಂತೆಯೇ ಸಾಮಾನ್ಯವಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಮಂಗಳೂರಿನ ಸೆಂಟ್ರಲ್ ಮಾರ್ಕೆಟ್, ಸ್ಟೇಟ್ ಬ್ಯಾಂಕ್, ಎಪಿಎಂಸಿ ಮಾರುಕಟ್ಟೆ, ಮೀನುಗಾರಿಕಾ ಬಂದರುಗಳು ಜನರಿಲ್ಲದೆ ಬಿಕೋ ಎನ್ನುತ್ತಿದ್ದವು. ಮಂಗಳೂರಿನಲ್ಲಿ ಮೀನು ಮತ್ತು ತರಕಾರಿ ವ್ಯಾಪಾರದಲ್ಲಿ ಮುಸ್ಲಿಮರೇ ಹೆಚ್ಚಾಗಿ ತೊಡಗಿದ್ದು, ಅವರು ವ್ಯಾಪಾರ ಸ್ಥಗಿತಗೊಳಿಸಿದ್ದರು.

ಹುಬ್ಬಳ್ಳಿಯ ಕೆಲ ಅಂಗಡಿ, ಮಳಿಗೆಗಳ ಬಾಗಿಲಿನ ಮೇಲೆ 'ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ, ಹೈಕೋರ್ಟ್‌ನ ಅಸಂವಿಧಾನಿಕ ತೀರ್ಪು ವಿರೋಧಿಸಿ ಕರ್ನಾಟಕ ಬಂದ್' ಎಂಬ ಪೋಸ್ಟರ್‌ಗಳನ್ನು ಅಂಟಿಸಲಾಗಿತ್ತು.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಮುಸ್ಲಿಂ ವರ್ತಕರು ಸತತ ಮೂರನೇ ದಿನವೂ ತಮ್ಮ ಅಂಗಡಿಗಳನ್ನು ತೆರೆಯಲಿಲ್ಲ. ಮುಸ್ಲಿಂ ಸಂಸ್ಥೆಯ ಶಾಲಾ, ಕಾಲೇಜುಗಳು ಕೂಡ ಬಂದ್ ಆಗಿದ್ದವು.

ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿಯೂ ಮುಸ್ಲಿಂ ವರ್ತಕರು ತಮ್ಮ ಅಂಗಡಿ, ಮಳಿಗೆಗಳನ್ನು ಮುಚ್ಚಿದ್ದರು. ಹಾವೇರಿ ಜಿಲ್ಲೆಯ ರಾಣೆಬೆನ್ನೂರು ನಗರದಲ್ಲಿ ಮುಸ್ಲಿಂ ಮಾಲೀಕತ್ವದ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು.

ಬೆಂಗಳೂರಿನ ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ), ದೇವರ ಜೀವನಹಳ್ಳಿ (ಡಿ.ಜೆ. ಹಳ್ಳಿ), ಟ್ಯಾನರಿ ರಸ್ತೆ, ಶಿವಾಜಿನಗರ, ಪಾದರಾಯನಪುರ, ಚಾಮರಾಜಪೇಟೆ, ಕೆ.ಆರ್.ಮಾರುಕಟ್ಟೆ, ಯಶವಂತಪುರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಅಂಗಡಿಗಳು ಹಾಗೂ ಹೋಟೆಲ್‌ಗಳು ಬೆಳಿಗ್ಗೆಯಿಂದಲೇ ಬಂದ್ ಆಗಿದ್ದವು.

ಮೈಸೂರಿನ ಸರ್ಕಾರಿ ಕಚೇರಿಗಳಲ್ಲಿ ಮುಸ್ಲಿಂ ಸಮುದಾಯದವರ ಹಾಜರಾತಿಯೂ ವಿರಳವಾಗಿತ್ತು.

ಹರಾಜಿಗೆ ಹಿಂದೇಟು ಹಾಕಿದ ರೀಲರ್‌ಗಳು: ಚನ್ನಪಟ್ಟಣದ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ರೀಲರ್‌ಗಳು ಬೆಳಿಗ್ಗೆ ಗೂಡು ಹರಾಜು ಪ್ರಕ್ರಿಯೆಯಿಂದ ಹೊರಗೆ ಉಳಿದಿದ್ದರು. ಇದರಿಂದ ರೊಚ್ಚಿಗೆದ್ದ ರೈತರು ಪ್ರತಿಭಟನೆ ನಡೆಸಿದರು. ಕ್ಷೇತ್ರದ ಶಾಸಕ ಎಚ್‌.ಡಿ. ಕುಮಾರಸ್ವಾಮಿ ಮಾರುಕಟ್ಟೆ ಅಧಿಕಾರಿಗಳು ಮತ್ತು ಖರೀದಿದಾರರ ಜೊತೆ ಮಾತುಕತೆ ನಡೆಸಿ ಹರಾಜು ನಡೆಯುವಂತೆ ನೋಡಿಕೊಂಡರು. ರಾಮನಗರ ರೇಷ್ಮೆಗೂಡು ಮಾರುಕಟ್ಟೆಯಲ್ಲಿಯೂ ಹರಾಜು ಪ್ರಕ್ರಿಯೆ ಕೊಂಚ ತಡವಾಗಿ ಆರಂಭ ಆಯಿತು.



ಬೆಳಗಾವಿಯ ಖಡೇಬಜಾರ್‌ನಲ್ಲಿ ಮುಸ್ಲಿಮರು ತಮ್ಮ ಅಂಗಡಿಗಳನ್ನು ಬಂದ್ ಮಾಡಿದ್ದರಿಂದ ಮುಖ್ಯರಸ್ತೆಯು ಗುರುವಾರ ಬಿಕೋ ಎನ್ನುತ್ತಿತ್ತು –ಪ್ರಜಾವಾಣಿ ಚಿತ್ರ

ಒಳ ಜಗಳವೇ ಕಾಂಗ್ರೆಸ್ ಸೋಲಿಗೆ ಕಾರಣ: ಖರ್ಗೆ

ಕಲಬುರಗಿ: 'ಒಳ್ಳೆಯದಾದರೆ ನಂದು, ಕೆಟ್ಟದ್ದಾದರೆ ನಿಂದು' ಎನ್ನುವ ಕೆಲ ನಾಯಕರು ಕಾಂಗ್ರೆಸ್‌ನಲ್ಲಿದ್ದಾರೆ. ಪಕ್ಷದ ಬಗ್ಗೆ ಅಭಿಮಾನ ಇರುವ ಯಾರೂ ಈ ರೀತಿ ಮಾತನಾಡುವುದಿಲ್ಲ. ಕೆಲವರಿಗೆ ಅಧಿಕಾರ ಬೇಕು. ಆದರೆ, ಅದನ್ನು ಪಡೆಯುವಷ್ಟು ಶಾಸಕರನ್ನು ಗೆಲ್ಲಿಸುವುದಿಲ್ಲ' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ, ನಾಯಕ ರಾಹುಲ್ ಗಾಂಧಿ ಅವರನ್ನು ಮೊನ್ನೆಯವರೆಗೂ ಹೊಗಳುತ್ತಿದ್ದವರೇ ಇಂದು ತೆಗಳುತ್ತಿದ್ದಾರೆ' ಎಂದು 'ಜಿ 23' ನಾಯಕರ ಹೆಸರು ಉಲ್ಲೇಖಿಸದೇ ಟೀಕಿಸಿದರು.

ಜಿಲ್ಲಾ ಆಸ್ಪತ್ರೆಯಲ್ಲಿ ಮಗು ಹೆತ್ತ ಸಿಇಒ

ಬಳ್ಳಾರಿ: ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆಗಿದ್ದ ಐಎಎಸ್ ಅಧಿಕಾರಿ ಕೆ.ಆರ್.ನಂದಿನಿ ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಬುಧವಾರ ರಾತ್ರಿ ಹೆಣ್ಣುಮಗುವಿಗೆ ಜನ್ಮ ನೀಡಿದರು.

ನಂದಿನಿ ಅವರಿಗೆ ಸಹಜ ಹೆರಿಗೆ ಆಗಿದ್ದು, ತಾಯಿ ಮತ್ತು ಮಗು ಆರೋಗ್ಯವಾಗಿದ್ದಾರೆ. ಪ್ರಸೂತಿ ತಜ್ಞ ಡಾ. ವೀರೇಂದ್ರ ಕುಮಾರ್ ನೇತೃತ್ವದ ಹಿರಿಯ ಮತ್ತು ಕಿರಿಯ ವೈದ್ಯರ ದೊಡ್ಡ ತಂಡವೇ ಐಎಎಸ್ ಅಧಿಕಾರಿಯ ಆರೈಕೆ ಮಾಡಿದೆ.

ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡ ಮೊದಲ ಐಎಎಸ್ ಅಧಿಕಾರಿ ನಂದಿನಿ.

ವಿದ್ಯಾರ್ಥಿನಿಯರ ಪ್ರತಿಭಟನೆ: ತಹಶೀಲ್ದಾರರಿಂದ ಮನವೊಲಿಕೆಯ ಕಸರತ್ತು

ಹಿಜಾಬ್: ಪರೀಕ್ಷೆಗೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ವಿಜಯಪುರ (ಬೆಂಗಳೂರು ಗ್ರಾಮಾಂತರ): ಹಿಜಾಬ್ ಧರಿಸಿ ಕಾಲೇಜಿಗೆ ಬಂದ ವಿದ್ಯಾರ್ಥಿನಿಯರಿಗೆ ಗುರುವಾರ ಪ್ರವೇಶ ನಿರಾಕರಿಸಲಾಯಿತು. ಸಿಬ್ಬಂದಿಯ ಈ ನಿರ್ಧಾರ ಖಂಡಿಸಿ ವಿದ್ಯಾರ್ಥಿನಿಯರು ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗ ಪ್ರತಿಭಟನೆ ನಡೆಸಿದರು. ಪಿಯು ಪ್ರಥಮ ವರ್ಷದ 16 ವಿದ್ಯಾರ್ಥಿನಿಯರು ಮನೆಗೆ ಮರಳಿ ಹೋದರು.

ಸ್ಥಳಕ್ಕೆ ಬಂದ ತಹಶೀಲ್ದಾರ್ ಶಿವರಾಜ್, 'ಹೈಕೋರ್ಟ್ ಆದೇಶ ಉಲ್ಲಂಘಿಸಿದರೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ. ಹಿಜಾಬ್ ತೆರೆದಿಟ್ಟು ತರಗತಿಗೆ ಹೋಗಿ' ಎಂದು ಮನವೊಲಿಸಿದರು.

ಮನವೊಲಿಕೆಗೆ ಮಣಿದ 21 ದ್ವಿತೀಯ ಪಿಯು ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ಪರೀಕ್ಷೆ ಬರೆಯಲು ಸಮ್ಮತಿಸಿದರು. ಹಿಜಾಬ್ ತೆಗೆಯಲು ನಿರಾಕರಿಸಿದ ಪ್ರಥಮ ವರ್ಷದ 16 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯುವುದಿಲ್ಲ ಎಂದು ಮನೆಗಳಿಗೆ ಹೋದರು. ಕಾಲೇಜಿನ ಮಹಿಳಾ ಉಪನ್ಯಾಸಕಿಯರೂ ಕೂಡಾ ವಿದ್ಯಾರ್ಥಿನಿಯರನ್ನು ಮನವೊಲಿಸುವ ಪ್ರಯತ್ನ ಮಾಡಿದರು.

ಪರೀಕ್ಷೆಗೆ ಗೈರಾದ ವಿದ್ಯಾರ್ಥಿನಿಯರು

ಮಧುಗಿರಿ (ತುಮಕೂರು): ಹಿಜಾಬ್ ಧರಿಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಇಬ್ಬರು ವಿದ್ಯಾರ್ಥಿನಿಯರು ಪೂರ್ವಸಿದ್ಧತಾ ಪರೀಕ್ಷೆಯಿಂದ ಹೊರ ನಡೆದರು.

ಗುರುವಾರ ಬೆಳಿಗ್ಗೆ 10.30ಕ್ಕೆ ವಿಜ್ಞಾನ ವಿಭಾಗದ ಭೌತವಿಜ್ಞಾನ ಪರೀಕ್ಷೆಗೆ ಇಬ್ಬರು ವಿದ್ಯಾರ್ಥಿನಿಯರೂ ಹಿಜಾಬ್ ಧರಿಸಿಕೊಂಡು ಬಂದಿದ್ದರು. 'ಹಿಜಾಬ್ ಧರಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ಪ್ರಾಂಶುಪಾಲರಿಗೆ ಮನವಿ ಮಾಡಿದರು. ಇದಕ್ಕೆ ಅವಕಾಶ ದೊರೆಯದ ಕಾರಣ ಪರೀಕ್ಷೆಗೆ ಗೈರಾದರು.

ಅಭಿವೃದ್ಧಿ ಕಾಣದ ಶಾಂತವೇರಿ

ಒಂದನೇ ಪುಟದಿಂದ

ಸಮೀಪದ ಕೋಣಂದೂರು ಲಿಂಗಪ್ಪ, ಕಿಮ್ಮನೆ ರತ್ನಾಕರ್ ವಿಧಾನಸಭೆಯಲ್ಲಿ ತೀರ್ಥಹಳ್ಳಿಯನ್ನು ಪ್ರತಿನಿಧಿಸಿದ್ದರು. ಇಲ್ಲಿನವರೇ ಆದ ಆರಗ ಜ್ಞಾನೇಂದ್ರ ಗೃಹಸಚಿವರಾಗಿದ್ದಾರೆ.

ಗೋಪಾಲಗೌಡರ ಶತಮಾನೋತ್ಸವ ಆಚರಣೆಗೆ ರಾಜ್ಯ ಸರ್ಕಾರ ಕಾರ್ಯಕ್ರಮ ರೂಪಿಸಿದೆ. ಪ್ರತಿಷ್ಠಾನ, ಶತಮಾನೋತ್ಸವ ಸಮಿತಿಯ ಮೂಲಕ ಪುಸ್ತಕ ಬಿಡುಗಡೆ, ಮುಂತಾದ ಯೋಜನೆ ಹೊಂದಿದೆ.



ಸತ್ಯ, ಪ್ರಾಮಾಣಿಕತೆಯಿಂದ ಗೋಪಾಲ ಗೌಡರು ಇಟ್ಟ ಹೆಜ್ಜೆ ಗೇಣಿದಾರರ ಬದುಕು ಬದಲಿಸಿದೆ. ಅವರ ಸಮಾಜ ಪರವಾದ ಚಿಂತನೆ ಶಾಶ್ವತವಾದದ್ದು.
– ಎ.ಪಿ. ರಾಮಪ್ಪ, ಹಿರಿಯ ಸಮಾಜವಾದಿ, ಶಾಂತವೇರಿ ಗೋಪಾಲಗೌಡರ ಅಕ್ಕನ ಮಗ

ಕಲಬುರ್ಗಿ ಹತ್ಯೆ: ಆರೋಪಿಗಳ ಪತ್ತೆಹಚ್ಚಿದ ಪುತ್ರಿ

ಪ್ರಜಾವಾಣಿ ವಾರ್ತೆ

ಧಾರವಾಡ: ಹಿರಿಯ ಸಂಶೋಧಕ ಡಾ. ಎಂ.ಎಂ.ಕಲಬುರ್ಗಿ ಅವರ ಹತ್ಯೆ ನಡೆದ ಸ್ಥಳದಲ್ಲಿನ ಸಾಕ್ಷ್ಯಗಳನ್ನು 4ನೇ ಹೆಚ್ಚುವರಿ ನ್ಯಾಯಾಲಯದ ಮುಂದೆ ಗುರುವಾರ ಹಾಜರುಪಡಿಸಲಾಯಿತು. 2015ರ ಆ.30ರಂದು ನಡೆದ ಘಟನೆಯ ಪ್ರತ್ಯಕ್ಷದರ್ಶಿಗಳಾದ ಡಾ. ಕಲಬುರ್ಗಿ ಅವರ ಪುತ್ರಿ ರೂಪದರ್ಶಿ ಹಾಗೂ ಪತ್ನಿ ಉಮಾದೇವಿ ಕಲಬುರ್ಗಿ ಅವರ ಎದುರು ಸಾಕ್ಷ್ಯಗಳನ್ನು ಪ್ರದರ್ಶಿಸಲಾಯಿತು.

ಕೊಲೆ ನಡೆದ ಸಂದರ್ಭದಲ್ಲಿ ಡಾ. ಕಲಬುರ್ಗಿ ಅವರು ಹಾಕಿಕೊಂಡಿದ್ದ ಶರ್ಟ್, ಬನಿಯನ್, ಪ್ಯಾಂಟ್, ಕೊರಳಲ್ಲಿದ್ದ ಗುಂಡುಗಡಿಗೆಯನ್ನು ಪುತ್ರಿ ಹಾಗೂ ಪತ್ನಿ ದೃಢಪಡಿಸಿದರು. ಪ್ರಕರಣದ ಆರೋಪಿಗಳಾದ ಗಣೇಶ ಮಿಸ್ಕಿನ್, ಅಮೋಲ್ ಕಾಳೆ, ಅಮಿತ್ ಬದ್ದಿ, ವಾಸುದೇವ ಸೂರ್ಯವಂಶಿ, ಪ್ರವೀಣ ಚತುರ್ ನ್ಯಾಯಾಲಯದಲ್ಲಿ ಹಾಜರಿದ್ದರು.

ಆರೋಪಿಗಳನ್ನು ನ್ಯಾಯಾಲಯದಲ್ಲಿ ಗುರುತಿಸಿದ ರೂಪದರ್ಶಿ, ಘಟನೆ ವಿವರಿಸಿ ಕಣ್ಣೀರಿಟ್ಟರು. ಗುಂಡು ಹೊಡೆದ ಆರೋಪಿ ಗಣೇಶ ಮಿಸ್ಕಿನ್‌ನನ್ನು ಗುರುತಿಸುವ ವೇಳೆಯೂ ಕಣ್ಣೀರು ಹಾಕುತ್ತಾ, 'ಇವನೇ ಗುಂಡು ಹೊಡೆದಿದ್ದು' ಎಂದರು. ನಂತರ ಬೈಕ್‌ನಲ್ಲಿ ಕರೆದುಕೊಂಡು ಹೋದ ಪ್ರವೀಣ ಚತುರನನ್ನೂ ನ್ಯಾಯಾಧೀಶರ ಎದುರು ಅವರು ಗುರುತಿಸಿದರು.

ಈ ವೇಳೆ ಸಾಕ್ಷಿಗಳನ್ನು ಏಕಕಾಲಕ್ಕೆ ಪ್ರಶ್ನಿಸಲು ಅವಕಾಶ ನೀಡುವಂತೆ ಕೋರಿ ಅರ್ಜಿ ಸಲ್ಲಿಕೆಯಾಯಿತು. ದಿನದ ಅವಧಿ ಪೂರ್ಣಗೊಂಡಿದ್ದರಿಂದ ವಿಚಾರಣೆಯನ್ನು ಏ.5ಕ್ಕೆ ನ್ಯಾಯಾಧೀಶರು ಮುಂದೂಡಿದರು.

ನ್ಯಾಯಾಲಯದ ಆವರಣದಲ್ಲಿ ಆರೋಪಿಗಳು ಘೋಷಣೆ ಕೂಗಿ, 'ನಾವು ಅಮಾಯಕರು. ನಿರಪರಾಧಿ ಹಿಂದೂಗಳಿಗೆ ನ್ಯಾಯ ಸಿಗಬೇಕಿದೆ. ಗೌರಿ ಲಂಕೇಶ್ ವಿಚಾರಣೆ ಬೇಗ ಮುಗಿಸಿ. ಆಗ ಮಾತ್ರ ನಮ್ಮ ವಿಚಾರಣೆಯೂ ಬೇಗ ಆಗುತ್ತದೆ' ಎಂದು ಹೇಳಿ ಒಳಹೋದರು.

'ಗೈರಾದವರಿಗೆ ಮರು ಪರೀಕ್ಷೆ ಇಲ್ಲ'

ಒಂದನೇ ಪುಟದಿಂದ

'ವಿದ್ಯಾರ್ಥಿಗಳು ಹೈಕೋರ್ಟ್‌ನ ಮಧ್ಯಂತರ ಆದೇಶಕ್ಕಿಂತ ಮೊದಲು ಗೊಂದಲಗಳಿಂದಾಗಿ ಪರೀಕ್ಷೆ ಹಾಜರಾಗಲು ಸಾಧ್ಯವಾಗದಿದ್ದರೆ ಅವರಿಗೆ ಅವಕಾಶ ನೀಡಲಾಗುವುದು. ಅಜ್ಞಾನ ಅಥವಾ ಮುಗ್ಧತೆ ಕಾರಣಕ್ಕಾಗಿ ಪರೀಕ್ಷೆ ತಪ್ಪಿಸಿಕೊಂಡಿದ್ದಾರೆ ಎಂದು ಪರಿಗಣಿಸಬಹುದು. ಆದೇಶ ನೀಡಿದ ಬಳಿಕವೂ ಪಾಲಿಸದೇ ಇದ್ದವರು ನ್ಯಾಯಾಲಯದ ಆದೇಶ ಧಿಕ್ಕರಿಸಿದ್ದಾರೆ ಎಂದು ಭಾವಿಸಬೇಕಾಗುತ್ತದೆ' ಎಂದರು.

'ಇದನ್ನೇ ಬೆಳೆಸಿಕೊಂಡು ಹೋದರೆ ಕಷ್ಟ. ವಿವಿಧ ಕಾರಣಗಳನ್ನು ಮುಂದೊಡ್ಡಿ ಪರೀಕ್ಷೆಗಳಿಗೆ ಹಾಜರಾಗದೇ ಕೇಳಿ ಕೇಳಿದಾಗಲೆಲ್ಲ ಪರೀಕ್ಷೆ ನಡೆಸಲು ಆಗುತ್ತಾ? ಕೆಲವೇ ವಿದ್ಯಾರ್ಥಿಗಳ ಕಾರಣಕ್ಕೆ ಉಳಿದ ವಿದ್ಯಾರ್ಥಿಗಳ ಹಿತವನ್ನು ಕಡೆಗಣಿಸಲು ಆಗುತ್ತದೆಯೆ? ಈ ರೀತಿ ಮಾಡಿದರೆ ಪರೀಕ್ಷಾ ವ್ಯವಸ್ಥೆ ಉಳಿಯುತ್ತದೆಯೇ' ಎಂದು ಮಾಧುಸ್ವಾಮಿ ಪ್ರಶ್ನಿಸಿದರು.

> **ಹೈಕೋರ್ಟ್ ಆದೇಶ ಉಲ್ಲಂಘನೆ ಮತ್ತು ಪ್ರಶ್ನಿಸುವುದು ನ್ಯಾಯಾಂಗ ನಿಂದನೆ ಆಗುತ್ತದೆ. ಅದರ ಪರಿಣಾಮ ಎದುರಿಸಬೇಕಾಗುತ್ತದೆ. ಬಂದ್, ಪ್ರತಿಭಟನೆಗಳ ಒತ್ತಡಕ್ಕೆ ಮಣಿಯಲ್ಲ**
> **ಜೆ.ಸಿ. ಮಾಧುಸ್ವಾಮಿ,** ಕಾನೂನು ಸಚಿವ

'ಹೈಕೋರ್ಟ್ ತೀರ್ಪು ಜಾರಿಗೆ ಎಲ್ಲ ಪ್ರಕ್ರಿಯೆಗಳನ್ನೂ ಸರ್ಕಾರ ಅನುಸರಿಸಲಿದೆ. ತೀರ್ಪಿನ ಬಗ್ಗೆ ಸಮಾಧಾನ ಇಲ್ಲವಾದರೆ, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು. ಅಲ್ಲಿ ಇತ್ಯರ್ಥ ಆಗುವವರೆಗೆ ಹೈಕೋರ್ಟ್ ಆದೇಶ ಜಾರಿಯಲ್ಲಿರುತ್ತದೆ' ಎಂದರು.

> **ಪರೀಕ್ಷೆ ವಂಚಿತರಾದವರಿಗೆ ಮತ್ತೊಂದು ಅವಕಾಶ ಕೊಡಿ. ಇವರನ್ನು ಸ್ವಂತ ಮಕ್ಕಳೆಂದು ಭಾವಿಸಿ ಅವಕಾಶ ನೀಡಿ. ಹಾಗೆಂದ ಮಾತ್ರಕ್ಕೆ ಹೈಕೋರ್ಟ್ ಬಗ್ಗೆ ಅಗೌರವವಿಲ್ಲ**
> **ಯು.ಟಿ. ಖಾದರ್,** ವಿರೋಧ ಪಕ್ಷದ ಉಪನಾಯಕ

ವಿಷಯ ಪ್ರಸ್ತಾಪಿಸಿದ ರಘುಪತಿ ಭಟ್, 'ಹಿಜಾಬ್ ಗೊಂದಲದಿಂದಾಗಿ ಪರೀಕ್ಷೆ ಬರೆಯಲು ಸಾಧ್ಯವಾಗದ ವಿದ್ಯಾರ್ಥಿನಿಯರಿಗೆ ಹಿಜಾಬ್ ತೆಗೆದಿಟ್ಟು ಪರೀಕ್ಷೆ ಬರೆಯಲು ಅವಕಾಶ ನೀಡಬೇಕು. ಹಿಜಾಬ್ ಧರಿಸಲೇ ಬೇಕು ಎಂದು ಪಟ್ಟು ಹಿಡಿದು ಕಾಲೇಜು ವಾತಾವರಣ ಕೆಡಿಸಲು ಯತ್ನಿಸುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

ಬಿಜೆಪಿಯ ಜಗದೀಶ ಶೆಟ್ಟರ್, 'ತೀರ್ಪು ಪ್ರಶ್ನಿಸಿ ಬಂದ್ ನಡೆಸಿದರೆ ನ್ಯಾಯಾಲಯದ ಆದೇಶಕ್ಕೆ ಕಿಮ್ಮತ್ತು ಇಲ್ಲದಂತಾಗುತ್ತದೆ' ಎಂದರು.

ಬಿಜೆಪಿಯ ಸಿ.ಟಿ.ರವಿ, 'ತೀರ್ಪು ವಿರೋಧಿಸಿ ಬಂದ್ ಮಾಡುವ ಮೂಲಕ ಬೆದರಿಕೆ ಹಾಕುವುದು ಸರಿಯೇ? ಸಮವಸ್ತ್ರದ ವಿಚಾರದಲ್ಲಿ ವೋಟ್ ಬ್ಯಾಂಕ್ ರಾಜಕಾರಣದಂತಹ ಹೀನ ಕೆಲಸಕ್ಕೆ ಇಳಿದಿದ್ದೀರಿ' ಎಂದು ಕಾಂಗ್ರೆಸ್ ಸದಸ್ಯರನ್ನು ಉದ್ದೇಶಿಸಿ ಹೇಳಿದರು.

ಅಂಡಮಾನ್‌ನತ್ತ ಚಂಡಮಾರುತ: ಸನ್ನದ್ಧ ಸ್ಥಿತಿಯಲ್ಲಿ ಪಡೆಗಳು

ನವದೆಹಲಿ (ಪಿಟಿಐ): ಅಂಡಮಾನ್ ಮತ್ತು ನಿಕೋಬಾರ್ ದ್ವೀಪಕ್ಕೆ ಚಂಡಮಾರುತ ಅಪ್ಪಳಿಸಲಿರುವ ಹಿನ್ನೆಲೆಯಲ್ಲಿ, ಮೀನುಗಾರಿಕೆ, ಪ್ರವಾಸೋದ್ಯಮ ಹಾಗೂ ನೌಕಾಯಾನ ಚಟುವಟಿಕೆಗಳನ್ನು ತಕ್ಷಣದಿಂದಲೇ ಸ್ಥಗಿತಕ್ಕೆ ಕೇಂದ್ರ ಸರ್ಕಾರ ಗುರುವಾರ ಆದೇಶಿಸಿದೆ.

ಮಾರ್ಚ್21ರಂದು ಚಂಡಮಾರುತ ದ್ವೀಪದ ನೆಲಕ್ಕೆ ಅಪ್ಪಳಿಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ತುರ್ತು ಹಾಗೂ ರಕ್ಷಣಾ ಕಾರ್ಯಗಳ ಸಿದ್ಧತೆಗಳನ್ನು ಪರಿಶೀಲಿಸಲು ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ ಅಜಯ್ ಭಲ್ಲಾ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ನಡೆಯಿತು.

ರಕ್ಷಣಾ ಕಾರ್ಯಕ್ಕಾಗಿ ಸೇನೆ, ವಾಯುಪಡೆ ಹಾಗೂ ನೌಕಾಪಡೆಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿದೆ.

ಕಾಮನ ಸ್ವಾಗತಕ್ಕೆ ವಸಂತದ ಉತ್ಸವ

• ಎಸ್. ಸೂರ್ಯಪ್ರಕಾಶ ಪಂಡಿತ್

ಸಂಸ್ಕೃತದ ಪದ್ಯವೊಂದು, ಮನ್ಮಥನನ್ನು ವರ್ಣಿಸುವುದು, ಸೊಗಸಾಗಿದೆ; ಅದರ ತಾತ್ಪರ್ಯ ಹೀಗಿದೆ:

'ಮನ್ಮಥನ ಶಸ್ತ್ರ ಯಾವುದು? ಬಿಲ್ಲು. ಅದು ಎಂಥ ಬಿಲ್ಲು? ಹೂವಿನ ಬಿಲ್ಲು! ಈ ಬಿಲ್ಲಿನ ಹೆದೆ ಯಾವುದು ಗೊತ್ತೆ? ದುಂಬಿಗಳು! ಇನ್ನು ಇವನು ಹೂಡುವ ಬಾಣಗಳು? ಚಂಚಲೆಯರಾದ ಸುಂದರಿಯ ಕಣ್ಣೋಟವೇ ಬಾಣ. ಇವನು ಎಸಗುವ ಸರಸಸಂಗ್ರಾಮಕ್ಕೆ ನೆರವಾಗುವ ಸ್ನೇಹಿತನಾದರೂ ಎಂಥವನು? ಜಡನಾಗಿರುವ ಚಂದ್ರನೇ ಇವನ ಮಿತ್ರ. ಹೋಗಲಿ, ಈ ಮನ್ಮಥನಾದರೂ ಹೇಗಿದ್ದಾನೆ? ಇವನಿಗೆ ಶರೀರವೇ ಇಲ್ಲ! ಹೀಗಿದ್ದರೂ ಇಡಿಯ ಜಗತ್ತನ್ನೇ ಇವನು ವ್ಯಾಕುಲತೆಗೆ ಒಳಪಡಿಸುತ್ತಿದ್ದಾನೆ!'

ಮನ್ಮಥ ಎಂದರೆ ಕಾಮ. ಕಾಮ ಎಂದಾಕ್ಷಣ ನಮಗೆ ಒಂದೇ ಅರ್ಥದತ್ತ ಗಮನ ಹೋಗುವುದು ಸಹಜ; ಅದೇ – ಹೆಣ್ಣು ಗಂಡಿನ ಒಲವು, ಆಕರ್ಷಣೆ. ಈ ಪದ್ಯದಲ್ಲಿರುವ ವಿವರಗಳು ಕೂಡ ಇದೇ ಅಂಶದ ಸುತ್ತ ಹೆಣೆದಿರುವಂಥವೇ! ಆದರೆ ಕಾಮ ಎಂದರೆ ಅಷ್ಟೇ ಅಲ್ಲ; ಅದು ಪುರುಷಾರ್ಥಗಳಲ್ಲೊಂದು; ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ – ಈ ವಿವರಗಳಲ್ಲಿರುವ 'ಕಾಮ'ದಲ್ಲಿ, ನಾವೆಲ್ಲರೂ ಇಷ್ಟಪಡುವ ಎಲ್ಲ ಸಂಗತಿಗಳೂ ಸೇರಿಕೊಳ್ಳುತ್ತವೆ. ನಮ್ಮ ಎಲ್ಲ ಬಯಕೆಗಳ ಮೂಟೆಯೇ ಕಾಮ. ಅದು ಹೆಚ್ಚು ಸ್ಪಷ್ಟವಾಗಿಯೂ ವ್ಯಾಪಕವಾಗಿಯೂ ತೀವ್ರವಾಗಿಯೂ ಕಾಣಿಸಿಕೊಳ್ಳುವುದು ಗಂಡು-ಹೆಣ್ಣುಗಳ ಪರಸ್ಪರ ಆಕರ್ಷಣೆಯಲ್ಲಿ. ಹೀಗಾಗಿ ಸಾಮಾನ್ಯವಾಗಿ 'ಕಾಮ' ಎಂದರೆ ಸ್ತ್ರೀ-ಪುರುಷರ ಸೆಳೆತ ಎಂಬಂತೆ ಸಮೀಕರಿಸಲಾಗುತ್ತದೆಯಷ್ಟೆ.



'ಕಾಮದಹನ' ಎಂಬುದು ಕಾಮನ ಹುಣ್ಣಿಮೆಗೆ ಇರುವ ಇನ್ನೊಂದು ಹೆಸರಲ್ಲವೆ? ಹಾಗಾದರೆ 'ಕಾಮ' ಎಂಬುದು ತಪ್ಪೇ? ಅದನ್ನು ಸುಡಬೇಕೇ? ಹೀಗೆಲ್ಲ ಪ್ರಶ್ನೆಗಳೂ ಮೂಡಬಹುದು. ಪುರುಷಾರ್ಥಗಳಲ್ಲಿರುವ 'ಕಾಮ' ಎಲ್ಲರೂ ಬಯಸುವ, ಎಲ್ಲರಿಗೂ ಸಹಜವಾಗಿರುವ ಹಂಬಲಗಳ ರಾಶಿಯೇ ಹೌದು. ಆದರೆ ಈ ಬಯಕೆಗಳಿಗೆ ಒಂದು ಕಟ್ಟುಪಾಡು ಇರಬೇಕು; ಅವು ಧರ್ಮದ ಎಲ್ಲೆಯನ್ನು ಮೀರಬಾರದು. ಹೀಗೆ ಧರ್ಮದ ಪರಿಧಿಯನ್ನು ಮೀರಿದಾಗ ಆಗ 'ಕಾಮ' ನಮ್ಮ ಪಾಲಿಗೆ ಶತ್ರುವೇ ಆಗುತ್ತದೆ. ಅದನ್ನು ಆಗ ಸುಡದೇ ನಮಗೆ ಬೇರೆ ದಾರಿಯೇ ಇಲ್ಲವಾಗುತ್ತದೆ. ಇದೇ ಕಾಮದಹನ.

ಹೋಳಿ, ಕಾಮನ ಹಬ್ಬ, ಕಾಮ ದಹನ, ಕಾಮನ ಹುಣ್ಣಿಮೆ, ವಸಂತೋತ್ಸವ – ಹೀಗೆ ಹಲವು ಹೆಸರುಗಳಿಂದ ಕರೆಯಿಸಿಕೊಳ್ಳುವ ಹಬ್ಬದ ಹಲವು ಹಿನ್ನೆಲೆಗಳಲ್ಲಿ ಒಂದು 'ಕಾಮದಹನ'.

ಕಾಮದಹನಕ್ಕೂ ಶಿವನ ಮದುವೆಗೂ ಸಂಬಂಧವಿದೆ. ಲೋಕಕಲ್ಯಾಣಕ್ಕಾಗಿ ಶಿವನ ವಿವಾಹ ನಡೆಯಬೇಕಿದೆ. ಇತ್ತ ಪಾರ್ವತಿಯೂ ಶಿವನನ್ನು ಪತಿಯಾಗಿ ಪಡೆಯಬೇಕೆಂಬ ಹಂಬಲದಲ್ಲಿದ್ದಾಳೆ. ಆದರೆ ಶಿವನು ತಪಸ್ಸಿನಲ್ಲಿ ತೊಡಗಿದ್ದಾನೆ. ಆಗ ಶಿವನ ಮನಸ್ಸನ್ನು ಪಾರ್ವತಿಯ ಕಡೆಗೆ ತಿರುಗಿಸಲು ದೇವತೆಗಳು ಮನ್ಮಥನನ್ನು, ಎಂದರೆ ಕಾಮನನ್ನು ಶಿವನಲ್ಲಿಗೆ ಕಳುಹಿಸುತ್ತಾರೆ. ಆ ಕ್ಷಣ ಇಡೀ ಪ್ರಕೃತಿಯೇ ಶೃಂಗಾರದ ಅಧಿಷ್ಠಾನಕ್ಕೆ ಪೂರಕವಾಗುವಂತೆ ಸಿದ್ಧವಾಗುತ್ತದೆ; ಅಕಾಲದ ವಸಂತನ ಸಂಭ್ರಮ ಶಿವನ ತಪೋಭೂಮಿಯಲ್ಲಿ ನರ್ತನಗೊಳ್ಳುತ್ತದೆ. ತಪಸ್ಸಿನಲ್ಲಿದ್ದ ಶಿವನ ಕಡೆಗೆ ಇದೇ ಸಕಾಲ ಎಂದು ಭಾವಿಸಿ ಮನ್ಮಥನು ಬಾಣವನ್ನು ಪ್ರಯೋಗಿಸುತ್ತಾನೆ. ಕಾಮನ ಪುಷ್ಪಬಾಣದ ದಾಳಿ ಶಿವನ ಮೇಲಾಗುತ್ತದೆ. ಇದರ ಪರಿಣಾಮ: ಶಿವನ ಕ್ರೋಧಾಗ್ನಿಗೆ ಸಿಕ್ಕಿ ಮನ್ಮಥ ಸುಟ್ಟುಹೋಗುತ್ತಾನೆ. ಅಕಾಲದಲ್ಲಿ ಕಾಣಿಸಿಕೊಂಡ ಕಾಮನ ದಹನವು ಶಿವನಿಂದ ಕ್ಷಣಾರ್ಧದಲ್ಲಿ ನಡೆದುಹೋಗುತ್ತದೆ. ಆದರೆ ಕಾಮನೇ ಇಲ್ಲದಿದ್ದರೆ ಜಗತ್ತಿನ ಪಯಣ ಹೇಗಾದೀತು? ರತಿಯ ಪ್ರಾರ್ಥನೆಗೆ ಸ್ಪಂದಿಸಿದ ಶಿವನು ಕಾಮನನ್ನು ಮತ್ತೆ ಬದುಕಿಸುತ್ತಾನೆ. ಜಗತ್ತಿನಲ್ಲಿ ಮತ್ತೆ ಜೀವಸಂಚಾರವಾಗುತ್ತದೆ; ಕಾಮನಿಗೂ ಬದುಕಿಗೂ ಇರುವ ಸಂಬಂಧವನ್ನೂ, ಕಾಮದ ನೆಲೆ-ಬೆಲೆಗಳನ್ನೂ ಎತ್ತಿಹಿಡಿಯುವ ಪರ್ವವೇ ಕಾಮನ ಹುಣ್ಣಿಮೆ. ಅಕಾಲದ ಕಾಮವು ನಮಗೆ ಮಾರಕ; ಸಕಾಲದ ಕಾಮವು ಪೂರಕ ಎಂಬ ಸಂದೇಶ ಈ ಹಬ್ಬದಲ್ಲಿದೆ. ಈ ಹಬ್ಬವನ್ನು 'ವಸಂತೋತ್ಸವ' ಎಂದು ಕರೆಯುವುದೂ ಗಮನಾರ್ಹ. ಬಣ್ಣಗಳನ್ನು ಎರಚಿಕೊಂಡು ಯುವಕ-ಯುವತಿಯರು ಈ ಹಬ್ಬವನ್ನು ಸಂತೋಷದಿಂದ ಆಚರಿಸುವುದನ್ನು ಕಾಣುತ್ತೇವೆ. ಇದು ಕಾಮವನ್ನು ಸ್ವಾಗತಿಸುವ ಪರಿ. ಈ ಸಮಯದಲ್ಲಿ ಪ್ರಕೃತಿಯಲ್ಲಿಯೂ ಸಹಜವಾಗಿ ಹಬ್ಬದ ವಾತಾವರಣ ಮೂಡಿರುತ್ತದೆ; ಎಲ್ಲೆಲ್ಲೂ ಹಸುರು; ಬಣ್ಣಬಣ್ಣದ ಹೂಗಳು. ಶಿವನಿಂದ ವರ ಪಡೆದ ಶುದ್ಧನಾಗಿರುವ ಕಾಮ, ಅವನು ಸತ್ಯ ಶಿವ ಸುಂದರಗಳ ಸ್ವರೂಪವೂ ಆಗಿರುತ್ತಾನೆ. ಅಂಥವನನ್ನು ಎದುರುಗೊಳ್ಳುವ ಹರ್ಷದ ಹಬ್ಬವೇ ವಸಂತೋತ್ಸವ.

ಪೋಲೆಂಡ್‌ನ ಕರೋಲಿನಾ 'ವಿಶ್ವ ಸುಂದರಿ'


ಕರೋಲಿನಾ ಬೈಲಾವ್ಸ್ಕಾ

ಲಾಸ್ ಏಂಜಲೀಸ್ (ಪಿಟಿಐ): ಪೋಲೆಂಡ್‌ನ ಕರೋಲಿನಾ ಬೈಲಾವ್ಸ್ಕಾ ಅವರು 2021ನೇ ಸಾಲಿನ 'ವಿಶ್ವ ಸುಂದರಿ' ಗೌರವಕ್ಕೆ ಪಾತ್ರರಾಗಿದ್ದಾರೆ. ಬುಧವಾರ ರಾತ್ರಿ ನಡೆದ 70ನೇ ಆವೃತ್ತಿಯ ಸ್ಪರ್ಧೆಯಲ್ಲಿ 96 ದೇಶಗಳ ಸುಂದರಿಯರು ಪಾಲ್ಗೊಂಡಿದ್ದರು.

'ಮಿಸ್ ಯುಎಸ್‌ಎ' ಪುರಸ್ಕೃತೆ, ಭಾರತ ಮೂಲದ ಅಮೆರಿಕನ್ ಆಗಿರುವ ಶ್ರೀ ಸೈನಿ ಅವರು ಮೊದಲ ರನ್ನರ್ ಅಪ್ ಆದರೆ, ಪಶ್ಚಿಮ ಆಫ್ರಿಕಾದ ರಾಷ್ಟ್ರ ಕೋಟ್ ಡಿ'ಐವರಿ'ಸ್‌ನ (ಹಿಂದಿನ ಐವರಿ ಕೋಸ್ಟ್) ಒಲಿವಿಯಾ ಯೇಸ್ ದ್ವಿತೀಯ ರನ್ನರ್ ಆಪ್ ಆದರು.

ಸ್ಯಾನ್ ಜುವಾನ್‌ನ ಕೊಕಾಕೋಲಾ ಮ್ಯೂಸಿಕ್ ಸಭಾಂಗಣದಲ್ಲಿ ನಡೆದ ವರ್ಣರಂಜಿತ ಸ್ಪರ್ಧೆಯಲ್ಲಿ, 2020ನೇ ಸಾಲಿನ 'ವಿಶ್ವಸುಂದರಿ', ಜಮೈಕಾದ ಟೋನಿ ಆ್ಯನ್ ಸಿಂಗ್ ಅವರು ಕರೋಲಿನಾ ಅವರಿಗೆ ಕಿರೀಟ ತೊಡಿಸಿದರು.

ಈ ಮೂಲಕ ವಿಶ್ವಸುಂದರಿ ಗೌರವವು ಎರಡನೇ ಬಾರಿಗೆ ಪೋಲೆಂಡ್‌ನ ಯುವತಿಗೆ ದೊರೆತಂತಾಗಿದೆ. ಈ ಹಿಂದೆ ಪೋಲೆಂಡ್‌ನ ಅನೆಟಾ ಕ್ರೆಗ್ಲಿಕಾ ಅವರು 1989ರಲ್ಲಿ ಈ ಹಿರಿಮೆಗೆ ಪಾತ್ರರಾಗಿದ್ದರು.

ಭಾರತವನ್ನು ಪ್ರತಿನಿಧಿಸಿದ್ದ 'ಭಾರತ ಸುಂದರಿ' ಪುರಸ್ಕೃತೆ ಮಾನಸ ವಾರಾಣಸಿ ಅವರು 11ನೇ ಸ್ಥಾನ ಪಡೆದರು.

ವಿಶ್ವಸುಂದರಿ ಸ್ಪರ್ಧೆಯು ವಾಸ್ತವವಾಗಿ ಡಿಸೆಂಬರ್ 16, 2021ರಲ್ಲಿ ನಡೆಯಬೇಕಿತ್ತು. ಮಾನಸ ಸೇರಿದಂತೆ ಒಟ್ಟು 16 ಮಂದಿ ಸ್ಪರ್ಧಿಗಳಿಗೆ ಕೋವಿಡ್ ದೃಢಪಟ್ಟಿದ್ದ ಕಾರಣದಿಂದ ಮುಂದೂಡಲಾಗಿತ್ತು.

ಪೆಗಾಸಸ್ ಖರೀದಿ ಪ್ರಸ್ತಾವ ತಿರಸ್ಕರಿಸಿದ್ದೆ: ಮಮತಾ


ಮಮತಾ ಬ್ಯಾನರ್ಜಿ

ಕೋಲ್ಕತ್ತ: 'ಇಸ್ರೇಲ್‌ನ ಎನ್‌ಎಸ್‌ಒ ಸಂಸ್ಥೆಯು ತನ್ನ 'ಪೆಗಾಸಸ್' ಕುತಂತ್ರಾಂಶವನ್ನು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಮಾರಾಟ ಮಾಡಲು ನಾಲ್ಕೈದು ವರ್ಷಗಳ ಹಿಂದೆ ಯತ್ನಿಸಿತ್ತು. ₹25 ಕೋಟಿ ಮೊತ್ತದ ಈ ಪ್ರಸ್ತಾವವನ್ನು ನಾನು ತಿರಸ್ಕರಿಸಿದ್ದೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಗುರುವಾರ ಹೇಳಿದ್ದಾರೆ.

ಪೆಗಾಸಸ್ ಮೂಲಕ ಕೇಂದ್ರ ಸರ್ಕಾರವು ಗೂಢಚರ್ಯೆ ಮಾಡುತ್ತಿದೆ ಎಂದು ಅವರು ಈ ಹಿಂದೆ ಆರೋಪಿಸಿದ್ದರು.

ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಬುಧವಾರ ಈ ವಿಚಾರವನ್ನು ಬಹಿರಂಗಪಡಿಸಿದ್ದ ಅವರು, ಗುರುವಾರ ಸುದ್ದಿಗಾರರ ಜೊತೆ ಮಾತನಾಡುವಾಗಲೂ ಪುನರುಚ್ಚರಿಸಿದರು. 'ಅವರು ಕುತಂತ್ರಾಂಶವನ್ನು ಮಾರಾಟ ಮಾಡಲು ಎಲ್ಲ ಕಡೆ ಯತ್ನಿಸುತ್ತಿದ್ದಾರೆ. ಹಾಗೆಯೇ ರಾಜ್ಯದ ಪೊಲೀಸ್ ಇಲಾಖೆಯನ್ನು ಸಂಪರ್ಕಿಸಿ ಮಾರಾಟ ಮಾಡಲು ಮುಂದಾಗಿದ್ದರು' ಎಂದಿದ್ದಾರೆ.

ಕುತಂತ್ರಾಂಶವನ್ನು ರಾಜಕೀಯವಾಗಿ ಬಳಸಿಕೊಳ್ಳಬಹುದು. ನ್ಯಾಯಾಧೀಶರ, ಸಾಮಾಜಿಕ ಕಾರ್ಯಕರ್ತರ ಮೇಲೆ ಗೂಢಚರ್ಯೆ ನಡೆಸಲು ಬಳಸಬಹುದು ಎಂಬ ಕಾರಣಕ್ಕೆ ಖರೀದಿಸಲು ಒಪ್ಪಲಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಚಂದ್ರಬಾಬು ನಾಯ್ಡು ಅವರು ಮುಖ್ಯಮಂತ್ರಿಯಾಗಿದ್ದಾಗ ಪೆಗಾಸಸ್ ಅನ್ನು ಆಂಧ್ರ ಪ್ರದೇಶ ಸರ್ಕಾರ ಖರೀದಿಸಿತ್ತು ಎಂದು ಅವರು ಹೇಳಿದ್ದರು.

ದಕ್ಷಿಣ ಕೊರಿಯಾ: 6.21 ಲಕ್ಷ ಹೊಸ ಪ್ರಕರಣ



ಸೋಲ್ (ಎ.ಪಿ): ದಕ್ಷಿಣ ಕೊರಿಯಾದಲ್ಲಿ ಸತತ ಎರಡನೇ ದಿನ ಒಮೈಕ್ರಾನ್ ಸೋಂಕು ಪ್ರಕರಣಗಳು ತೀವ್ರಗತಿಯಲ್ಲಿ ಏರಿದೆ. ಗುರುವಾರ 6.21 ಲಕ್ಷ ಪ್ರಕರಣ ದೃಢಪಟ್ಟಿದ್ದು, ಆರೋಗ್ಯ ವ್ಯವಸ್ಥೆ ಏರುಪೇರಾಗುವ ಆತಂಕ ಎದುರಾಗಿದೆ.

ಕಳೆದ 24 ಗಂಟೆಗಳಲ್ಲಿ 429 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಆಸ್ಪತ್ರೆಗೆ ದಾಖಲಾಗುವವರು, ಸೋಂಕು ಪೀಡಿತರ ಸಂಖ್ಯೆ ಏರುಮುಖವಾಗಿದೆ. ಹೀಗಾಗಿ, ಬರುವ ವಾರಗಳಲ್ಲಿ ಸಾವಿನ ಸಂಖ್ಯೆ ಏರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಸುಮಾರು 4 ಲಕ್ಷ ಪ್ರಕರಣ ದೃಢಪಟ್ಟಿದ್ದವು. 24 ಗಂಟೆಗಳಲ್ಲಿ ಸುಮಾರು 2.21 ಲಕ್ಷ ಪ್ರಕರಣ ಹೆಚ್ಚಾಗಿದ್ದು, ಪ್ರಕರಣಗಳ ಸಂಖ್ಯೆ 82 ಲಕ್ಷಕ್ಕೆ ಏರಿದೆ. ಫೆಬ್ರುವರಿ ಬಳಿಕ 74 ಲಕ್ಷ ಜನರು ಸೋಂಕು ಪೀಡಿತರಾಗಿದ್ದಾರೆ.

'ಸರ್ಕಾರದ ನಿರೀಕ್ಷೆ ಮೀರಿ ಪ್ರಕರಣಗಳು ಗಣನೀಯವಾಗಿ ಏರಿವೆ. 'ಜನರಿಗೆ ಲಸಿಕೆ ನೀಡಿದ್ದು, ಶೇ 68ರಷ್ಟು ಜನರಿಗೆ ಬೂಸ್ಟರ್ ಡೋಸ್ ನೀಡಲಾಗಿದೆ. ಆ ನಂತರವು ಸೋಂಕುಗತಿ ಅಂದಾಜಿಸಲು ಆರೋಗ್ಯಇಲಾಖೆ ಅಧಿಕಾರಿಗಳು ವಿಫಲರಾದರು. ಕಳೆದ ಚುನಾವಣೆ ಸಂದರ್ಭದಲ್ಲಿ ನಡೆದ ಪ್ರಚಾರ ಕಾರ್ಯಕ್ರಮಗಳು ಸೋಂಕು ಏರಿಕೆಗೆ ಕಾರಣವಾಗಿದೆ' ಎಂಬ ಅಭಿಪ್ರಾಯಗಳಿವೆ.

ಹಾಂಗ್‌ಕಾಂಗ್: ಹಾಂಗ್‌ಕಾಂಗ್‌ನಲ್ಲಿ ಮತ್ತೆ 21,650 ಪ್ರಕರಣಗಳು ದೃಢಪಟ್ಟಿವೆ. ಬುಧವಾರ 29,272 ಮಂದಿಗೆ ಸೋಂಕು ತಗುಲಿತ್ತು. 24 ಗಂಟೆಗಳಲ್ಲಿ 202 ಮಂದಿ ಮೃತಪಟ್ಟಿದ್ದಾರೆ ಎಂದುಅಧಿಕಾರಿಗಳು ತಿಳಿಸಿದ್ದಾರೆ.

ಜರ್ಮನಿ: 2.94 ಲಕ್ಷ ಮಂದಿಗೆ ಸೋಂಕು

ಬರ್ಲಿನ್: ಜರ್ಮನಿಯಲ್ಲಿ 24 ಗಂಟೆಗಳಲ್ಲಿ 2,94,931 ಹೊಸ ಸೋಂಕು ಪ್ರಕರಣಗಳು ವರದಿಯಾಗಿವೆ. 278 ಜನರು ಮೃತಪಟ್ಟಿದ್ದು, ಮೃತರ ಒಟ್ಟು ಸಂಖ್ಯೆ 1.26,420ಕ್ಕೆ ಏರಿದೆ.

ಈ ಮಧ್ಯೆ, ವಯಸ್ಕರಿಗೆ ಕೋವಿಡ್ ಲಸಿಕೆಯನ್ನು ಕಡ್ಡಾಯಗೊಳಿಸಲು ಸರ್ಕಾರ ಚಿಂತನೆ ನಡೆದಿದೆ. 50ವರ್ಷ ಮೀರಿದವರಿಗಷ್ಟೇ ಕಡ್ಡಾಯ ಮಾಡಿ ಎಂಬ ವಾದವು ಇದೆ. ಈ ಬಗ್ಗೆ ನಿರ್ಧಾರ ಕೈಗೊಳ್ಳುವುದನ್ನು ವಿಳಂಬ ಮಾಡುತ್ತಿದೆ ಎಂಬ ಟೀಕೆಗಳು ಇವೆ.

ಈ ಮಧ್ಯೆ, ಸೋಂಕು ತಡೆಗೆ ರಾಷ್ಟ್ರವ್ಯಾಪಿ ನಿಯಮಗಳನ್ನು ಜಾರಿಗೊಳಿಸುವ ಬದಲಿಗೆ 16 ರಾಜ್ಯಗಳ ಸರ್ಕಾರಗಳು ಸ್ಥಳೀಯ ಪರಿಸ್ಥಿತಿಯನ್ನು ಆಧರಿಸಿ ನಿರ್ಬಂಧ ಕ್ರಮಗಳನ್ನು ನಿರ್ಧರಿಸಬೇಕು ಎಂದು ಸರ್ಕಾರ ಸೂಚನೆ ನೀಡಿದೆ.

ಪಿಡುಗಿನ ಸೂಚನೆ: ಡಬ್ಲ್ಯುಎಚ್‌ಒ

ಜಿನಿವಾ/ವಿಶ್ವಸಂಸ್ಥೆ (ಪಿಟಿಐ): ಕೆಲ ರಾಷ್ಟ್ರಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ. ಇದು ಬರುವ ದಿನಗಳಲ್ಲಿ ಕೋವಿಡ್ ಪಿಡುಗು ವ್ಯಾಪಿಸುವ ಸೂಚನೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮಹಾ ನಿರ್ದೇಶಕ ಟೆಡ್ರೋಸ್ ಅಧನೋಮ್ ಗೆಬ್ರಿಯೇಸಸ್ ಬುಧವಾರ ಎಚ್ಚರಿಸಿದ್ದಾರೆ. 'ಕೋವಿಡ್‌ಗೆ ಸಂಬಂಧಿಸಿ ಪ್ರತಿ ದೇಶದ ಪರಿಸ್ಥಿತಿ ಬೇರೆ ಇದ್ದು, ಅವುಗಳು ಎದುರಿಸುತ್ತಿರುವ ಸವಾಲುಗಳು ಸಹ ವಿಭಿನ್ನವಾಗಿವೆ. ಹೀಗಾಗಿ ಕೋವಿಡ್ ಪಿಡುಗು ಮುಕ್ತಾಯವಾಗಿದೆ ಎಂಬುದಾಗಿ ಭಾವಿಸಬಾರದು' ಎಂದು ಹೇಳಿದ್ದಾರೆ.



ತೋತಾಪುರಿ
ಅದಿತಿ ಪ್ರಭುದೇವ
ಜಗ್ಗೇಶ್

‘ಕಾಮಿಡಿಗಷ್ಟೇ ಸೀಮಿತವಲ್ಲ’

ಚಿತ್ರಮಂದಿರಗಳಲ್ಲಿ ಈ ವರ್ಷ ನವರಸದ ಭರ್ಜರಿ ಭೋಜನವಿರಲಿದೆ. ಜಗ್ಗೇಶ್ ಅವರ ಸಿನಿಮಾಗಳು ಸಾಲು ಸಾಲಾಗಿ ತೆರೆಗೆ ಬರಲು ಸಜ್ಜಾಗಿವೆ. ಇದರ ನಡುವೆ, ಪುನೀತ್ ರಾಜ್‌ಕುಮಾರ್ ಅವರನ್ನು ಕಳೆದುಕೊಂಡ ದುಃಖದಲ್ಲಿ ತಮ್ಮ ಜನ್ಮದಿನವನ್ನೂ ಆಚರಿಸದೆ ಮಂತ್ರಾಲಯದಲ್ಲಿ ಅಪ್ಪುವಿನ ನೆನಪಿನಲ್ಲಿ ಜಗ್ಗೇಶ್ ಧ್ಯಾನ ಮಾಡಿದ್ದಾರೆ. ‘ಸಿನಿಮಾ ಪುರವಣಿ’ ಜೊತೆ ಮಾತಿಗೆ ಸಿಕ್ಕಾಗ ತಮ್ಮ ಸಿನಿ ಪಯಣವನ್ನು ಅವರು ಬಿಚ್ಚಿಟ್ಟದ್ದು ಹೀಗೆ..

ಅಭಿಲಾಷ್ ಪಿ.ಎಸ್.

● 60ರ ಹೊಸ್ತಿಲು. 42 ವರ್ಷಗಳ ಸಿನಿ ಪಯಣವನ್ನು ಹಿಂತಿರುಗಿ ನೋಡಿದರೆ...

ಪ್ರತಿಯೊಬ್ಬ ಮನುಷ್ಯನೂ ಸಸಿಯಾಗಿ ಹುಟ್ಟಿ ಮರವಾಗಿ ಬೆಳೆಯಬೇಕು. ಆ ಮರಕ್ಕೆ ಮುದಿತನವೂ ಬರಬೇಕು. ನಾನು ತುಂಬಾ ಅದೃಷ್ಟವಂತ. ನನ್ನಂಥ ಅದೃಷ್ಟವಂತ ಕನ್ನಡ ಚಿತ್ರರಂಗದಲ್ಲಿ ಯಾರೂ ಇರಲು ಸಾಧ್ಯವಿಲ್ಲ. ಕಾರಣ ಏನೆಂದರೆ, ನಾನು ಈ ಕ್ಷೇತ್ರಕ್ಕೆ ಕಾಲಿಟ್ಟಾಗ ಯಾರ ಪರಿಚಯವೂ ನನಗೆ ಇರಲಿಲ್ಲ. ಯಾವುದೇ ಪರಿಚಯವೇ ಇಲ್ಲದ, ಸಾಧನೆ ಮಾಡದ ಕುಟುಂಬದಿಂದ ನಾನು ಇಲ್ಲಿಗೆ ಹೆಜ್ಜೆ ಇಟ್ಟಿದ್ದೆ. ಇಷ್ಟರ ಮಟ್ಟಿಗೆ ಜನರ ಹೃದಯದಲ್ಲಿ ಜಾಗ ಪಡೆಯುವುದಕ್ಕೆ ಬಹಳ ಅದೃಷ್ಟ ಮಾಡಿರಬೇಕು. 42ವರ್ಷವಾದರೂ ಜನರ ಅದೇ ಪ್ರೀತಿ, ಅದೇ ಬೇಡಿಕೆ ಉಳಿಸಿಕೊಂಡಿರುವುದಕ್ಕೆ ನಾನು ಕೃತಜ್ಞ.

ಜಗ್ಗೇಶ್, ಈ ಚಿತ್ರರಂಗದಲ್ಲಿ ಬೇರೂರಲು, ರೂಪ ಪಡೆಯಲು ಹಿರಿಯ ನಟರ ಸಹಾಯವೇ ಕಾರಣ. ವರನಟ ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್, ಶಂಕರ್‌ನಾಗ್, ಅಂಬರೀಷ್, ಪ್ರಭಾಕರ್ ಮುಂತಾದ ನಟರ ಜೊತೆ ಇದ್ದೆ, ನಟಿಸಿದ್ದೆ ಎನ್ನುವುದೇ ನನಗೆ ಹೆಮ್ಮೆ. ಇವರೆಲ್ಲರೂ ಆಶೀರ್ವಾದ, ಶಕ್ತಿ ನೀಡಿ, ‘ಬೆಳೆಯಿರಪ್ಪಾ’ ಎಂದು ಬೆಳೆಸಿದರು. ಈ ಅದೃಷ್ಟ ಕೂಡಾ ಯಾರಿಗೂ ಸಿಗಲು ಸಾಧ್ಯವಿಲ್ಲ.

● ‘ತೋತಾಪುರಿ’ ಈರೇಗೌಡ ಹೇಗಿದ್ದಾರೆ? ಚಿತ್ರದ ಬಗ್ಗೆ ನಿರೀಕ್ಷೆ ಹೇಗಿದೆ?

ಈ ಸಿನಿಮಾ ಬಂದ ಮೇಲೆ ಹೆಣ್ಣುಕುಲವು, ಇವತ್ತಿನ ಜಗ್ಗೇಶ್ ಏನಿದ್ದಾನೆ ಆತನನ್ನು ನೂರುಪಟ್ಟು ಹೆಚ್ಚು ಪ್ರೀತಿಸುತ್ತದೆ. ಏಕೆಂದರೆ ಅಷ್ಟು ಜವಾಬ್ದಾರಿಯುತವಾದ ಪಾತ್ರವದು.‘ಬಾಗ್ಲು ತೆಗಿ ಮೇರಿ ಜಾನ್’ ಹಾಡಿನಲ್ಲಿ ತಮಾಷೆಯಾಗಿ ಕಾಣಿಸಬಹುದು. ಆದರೆ ಚಿತ್ರದಲ್ಲಿ ತುಂಬಾ ಪ್ರಭಾವ ಬೀರುವ ಪಾತ್ರವದು. ಇದೊಂದು ಸಾಮಾನ್ಯ ವ್ಯಕ್ತಿಯೊಬ್ಬನ ಜೀವನ. ಪ್ರತಿಯೊಬ್ಬರೂ ತಮ್ಮನ್ನು ತಾವು ಅದಕ್ಕೆ ಹೋಲಿಸುತ್ತಾರೆ. ನಟನೊಬ್ಬ ವೈಭವೀಕರಿಸುವ ಪಾತ್ರ ಮಾಡಿದಾಗ ಜನರಿಂದ ದೂರ ಉಳಿದುಬಿಡುತ್ತಾನೆ. ಜನರ ಹತ್ತಿರವಿರುವ ಪಾತ್ರದಲ್ಲೇ ಅಭಿನಯಿಸಿದಾಗ ಜನರೂ ಹತ್ತಿರವಾಗುತ್ತಾರೆ. ಹೀಗಾಗಿ ಈರೇಗೌಡ ಸಾಮಾನ್ಯನಿಗೂ ಇಷ್ಟವಾಗುವ ಪಾತ್ರ.

ಈಗ ಬಿಡುಗಡೆಯಾಗಿರುವ ಹಾಡನ್ನಷ್ಟೇ ಗಮನಿಸಿ ಯಾವುದೇ ನಿರ್ಧಾರಕ್ಕೆ ಬರಬೇಡಿ. ಒಬ್ಬ ವ್ಯಕ್ತಿಯನ್ನು ಆತನ ಪಾತ್ರದಲ್ಲಿ ಅಥವಾ ದುಡ್ಡಲ್ಲಿ ಅಥವಾ ಹಾಕಿದ ಬಟ್ಟೆಯಲ್ಲಿ ಅಳೆದರೆ ಅದು ಮೂರ್ಖತನವಾಗುತ್ತದೆ. ಅವನ ಸಾಧನೆ, ಚಿಂತನೆಗಳಲ್ಲಿ ಅವನನ್ನು ಅಳೆಯಬೇಕು. ಇದನ್ನು ಅಳೆಯುವುದು ಕಷ್ಟ. ಆದರೆ ಅಳತೆಗೆ ಸಿಕ್ಕರೆ ಅದು ಬಹಳ ತೂಕವಿರುತ್ತದೆ. That is the beauty of life. ನಾನು ಚಿತ್ರರಂಗಕ್ಕೆ ಕಾಲಿಟ್ಟ ದಿನದಿಂದಲೂ, ಪ್ರತಿನಿತ್ಯ ನಿರೀಕ್ಷೆಯಲ್ಲೇ ಬದುಕುತ್ತಿದ್ದೇನೆ. ಸಕಾರಾತ್ಮಕವಾಗಿ ಕೆಲಸ ಮಾಡುತ್ತಿದ್ದೇನೆ. ಈ ಆಶಾಭಾವ ಇಲ್ಲದೇ ಇದ್ದರೆ, ನಮಗೇ ತಿಳಿಯದಂತೆ ನಾವು ಸೋಲುತ್ತೇವೆ.

● ‘ರಾಘವೇಂದ್ರ ಸ್ಟೋರ್ಸ್’ನಲ್ಲಿ ವಿಶೇಷವಾದ ಖಾದ್ಯವೇನಿದೆ?

ಆರು ವರ್ಷದ ಮಗುವಿನಿಂದ ಹಿಡಿದು 80 ವರ್ಷದ ಹಿರಿಯರವರೆಗೂ ಈ ಚಿತ್ರವನ್ನು ಚಿತ್ರಮಂದಿರದಲ್ಲಿ ನೋಡಲು ಇಷ್ಟಪಡುತ್ತಾರೆ. ನಿರ್ದೇಶಕ ಸಂತೋಷ್ ಆನಂದ್‌ರಾಮ್ ಅವರು ಬದುಕಿನ ಒಂದು ಚಕ್ರವನ್ನೇ ಸಿನಿಮಾ ಮಾಡಿದ್ದಾರೆ. ನನ್ನ ಬದುಕಿಗೆ ಈ ಚಿತ್ರ ನವಿಲುಗರಿಯಾಗಲಿದೆ. ಈ ಚಿತ್ರವನ್ನು ಮಾಡಿದ್ದೇನೆ ಎನ್ನುವ ಹೆಮ್ಮೆಯೂ ಇದೆ. ನವರಸದ ಖಾದ್ಯ ಇಲ್ಲಿದೆ. ಜಗ್ಗೇಶ್‌ನನ್ನು ನವರಸ ನಾಯಕ ಎನ್ನುತ್ತಾರೆ. ಇದನ್ನು ನಿರೂಪಿಸಲು ಈ ಒಂದು ಸಿನಿಮಾ ಸಾಕು. ಮರುಪ್ರಶ್ನೆಯೇ ಹುಟ್ಟುವುದಿಲ್ಲ ಎನ್ನುವ ಭರವಸೆ ನನಗೆ ಇದೆ. ಜಗ್ಗೇಶ್‌ಗೆ ಈ ಬಿರುದು ಸೂಕ್ತ ಎನ್ನಬೇಕು, ಜೊತೆಗೆ ನ್ಯಾಯ ಒದಗಿಸಿದ ಪಾತ್ರವದು.

● ಸಿನಿಮಾ ಆಯ್ಕೆ ವಿಚಾರದಲ್ಲೂ ಜಗ್ಗೇಶ್ ಬಹಳ ಕಠಿಣವಾದಂತಿದೆ..

ನೂರಕ್ಕೆ ನೂರು ಸತ್ಯ.‘ಉದರ ನಿಮಿತ್ತಂ ಬಹುಕೃತ ವೇಷಂ’ ಎನ್ನುವಂತೆ ಮುಂಚೆ ಕೆಲಸ ಸಿಕ್ಕಿದರೆ ಸಾಕಿತ್ತು. ಹೀಗಾಗಿ ಸಿನಿಮಾ ಮಾಡುತ್ತಿದ್ದೆ. ಈಗ ಈ ಕ್ಷೇತ್ರದಲ್ಲಿ ಬೆಳೆದು ದೊಡ್ಡವನಾದ ಮೇಲೆ, ಜವಾಬ್ದಾರಿಯುತವಾದ ಸಿನಿಮಾ ಆಯ್ಕೆ ಮಾಡಿಕೊಳ್ಳುವ ಅವಕಾಶ ನನಗೆ ಸಿಕ್ಕಿದೆ. ಪಾತ್ರದ ಮುಖಾಂತರ ನಗಿಸುತ್ತಾ ಯಾವ ಸಂದೇಶ ನೀಡಬಹುದು ಎನ್ನುವುದು ನನ್ನ ಈಗಿನ ಪ್ರಾಶಸ್ತ್ಯ. ಕಥೆಯ ವಿಷಯದಲ್ಲಿ ತೂಕವಿರಬೇಕು.

ಕೊರೊನಾ ಬಂದ ಮೇಲೆ ಸಿನಿಮಾಗೆ ಹೊಡೆತ ಬಿತ್ತು ಎನ್ನುತ್ತಾರೆ. ಆದರೆ ನನ್ನ ಪ್ರಕಾರ, ಕೊರೊನಾ ಬಂದ ಮೇಲೆ ಸಿನಿಮಾ ಮುಗಿಲೆತ್ತರಕ್ಕೆ ಬೆಳೆದು ನಿಂತಿದೆ. ಸಿನಿಮಾಗೆ ತುಂಬಾ ಬೇಡಿಕೆ ಇದೆ, ಆದರೆ ಕಂಟೆಂಟ್ ಮೇಲೆ ಇದು ಆಧಾರವಾಗಿದೆ. ಆ್ಯಕ್ಷನ್, ಕಮರ್ಷಿಯಲ್, ಲವ್ ಇದೆಲ್ಲದರಿಂದ ಜನರಿಗೆ ವಾಕರಿಕೆ ಬಂದು ಹೋಗಿದೆ. ಒಟಿಟಿ ವೇದಿಕೆ ಬಂದ ಮೇಲೆ ಸಾವಿರಾರು ಸಿನಿಮಾಗಳು ಜನರ ಕೈಯಲ್ಲೇ ಇವೆ. ಇವೆಲ್ಲ ಸಿನಿಮಾಗಳಿಗಿಂತ ಭಿನ್ನವಾದ ಕಥೆ, ವಿಷಯ ಹೊಂದಿದ ಸಿನಿಮಾ ಮಾಡುವುದು ಮುಖ್ಯ. ಕಥೆಯ ಆಯ್ಕೆ ಶ್ರೇಷ್ಠವಾಗಬೇಕು.

● ಹಾಸ್ಯಪ್ರಧಾನ ಗಂಭೀರ ವಿಷಯದ ಪಾತ್ರಗಳಲ್ಲೇ ಜಗ್ಗೇಶ್ ಕಾಣಿಸಿಕೊಳ್ಳುತ್ತಾರಾ?

ಹಿಂದಿನ ಸಿನಿಮಾಗಳಲ್ಲಿ ಜಗ್ಗೇಶ್‌ನನ್ನು ನೋಡಿದ ಬಳಿಕ, ‘ಪ್ರೀಮಿಯರ್ ಪದ್ಮಿನಿ’, ‘ಕಾಳಿದಾಸ ಕನ್ನಡ ಮೇಸ್ಟ್ರು’, ‘8ಎಂಎಂ’ ಸಿನಿಮಾದಲ್ಲಿನ ಜಗ್ಗೇಶ್‌ನನ್ನು ನೋಡಿ ಶಾಕ್ ಆದರು. ಗಂಭೀರವಾದ ಪಾತ್ರಗಳನ್ನೇ ಮಾಡುವ ಆಸೆ ಇದೆ. ಕಲಾವಿದನಿಗೆ ಇರುವ ಆಶೀರ್ವಾದ ಏನೆಂದರೆ, ಅವನು ಯಾವುದೇ ಪಾತ್ರ ಮಾಡುವುದಕ್ಕೂ ಯೋಗವಿದೆ. ನಾನು ಯುವಕನಾಗಿ, ಲವರ್ ಬಾಯ್ ಆಗಿಯೂ ಕಾಣಿಸಿಕೊಳ್ಳಬಹುದು, ಮಧ್ಯವಯಸ್ಕ ಅಥವಾ ಅಜ್ಜನ ಪಾತ್ರವನ್ನೂ ಮಾಡಬಹುದು. ಬಹಳ ನಟರಿಗೆ ಈ ಅವಕಾಶ ಸಿಗುವುದಿಲ್ಲ. ಜನರು, ಚಿತ್ರರಂಗದವರು ಇಂಥ ಪಾತ್ರಗಳಲ್ಲಿ ಈಗ ನನ್ನನ್ನು ಒಪ್ಪಿಕೊಳ್ಳುತ್ತಾರೆ. ಈ ಹಿಂದೆ ನಮಗೆ ಈ ಸ್ವಾತಂತ್ರ್ಯ ಕೊಟ್ಟಿರಲಿಲ್ಲ. ‘ನೀವು ಕಾಮಿಡಿಗೆ ಸೀಮಿತ. ಕಾಮಿಡಿಯೇ ಮಾಡಿ’ ಎನ್ನುತ್ತಿದ್ದರು. ಈಗ, ‘ನೀವು ಒಳ್ಳೆಯ ಪಾತ್ರಮಾಡಿ. ನಾವು ನೋಡುತ್ತೇವೆ’ ಎನ್ನುತ್ತಿದ್ದಾರೆ. ಕಲಾವಿದನಿಗೆ ವಯಸ್ಸಾಗುತ್ತಿದ್ದಂತೆಯೇ ಪ್ರೇಕ್ಷಕರಿಗೆ ಆತ ಮತ್ತಷ್ಟು ಹತ್ತಿರವಾಗುತ್ತಾನೆ. ಇದು ಸೌಭಾಗ್ಯ.

● ಈ ವರ್ಷ ಹಾಗಿದ್ದರೆ ಚಿತ್ರಮಂದಿರಗಳಲ್ಲಿ ನವರಸದ ಭರ್ಜರಿ ಭೋಜನವಿದೆ?

ಜೂನ್ ಒಳಗಡೆ ‘ತೋತಾಪುರಿ’ ಭಾಗ–1 ಬಿಡುಗಡೆಯಾಗಲಿದೆ. ಇದೇ ಚಿತ್ರದ ಭಾಗ ಎರಡು ಯಾವಾಗ ಬಿಡುಗಡೆ ಎನ್ನುವುದನ್ನು ನಿರ್ಮಾಪಕರು ನಿರ್ಧರಿಸುತ್ತಾರೆ. ಅದೇ ರೀತಿ ‘ರಾಘವೇಂದ್ರ ಸ್ಟೋರ್ಸ್’ ಮತ್ತು ‘ರಂಗನಾಯಕ’ವೂ ಬಿಡುಗಡೆಗೊಳುತ್ತದೆ. ನಾನು ಅಷ್ಟು ಸುಲಭವಾಗಿ ಸ್ಕ್ರಿಪ್ಟ್ ಒಪ್ಪಿಕೊಳ್ಳುವುದಿಲ್ಲ. ಇತ್ತೀಚೆಗೆ ಇನ್ನೆರಡು ಚಿತ್ರಗಳನ್ನು ಒಪ್ಪಿಕೊಂಡಿದ್ದೇನೆ. ಇದರಲ್ಲಿನ ಪಾತ್ರಗಳನ್ನು ಜನರು ಖಂಡಿತವಾಗಿಯೂ ಪ್ರೀತಿಸುತ್ತಾರೆ. ಮುಂದಿನ ದಿನಗಳಲ್ಲಿ ಇದರ ಮಾಹಿತಿ ನೀಡುತ್ತೇನೆ. ❖



ಮೇ 6ಕ್ಕೆ ‘ಅವತಾರ ಪುರುಷ’

ಚುಟು–ಚುಟು ಜೋಡಿ ನಟ ಶರಣ್ ಹಾಗೂ ನಟಿ ಆಶಿಕಾ ರಂಗನಾಥ್ ಅಭಿನಯದ, ‘ಸಿಂಪಲ್’ ಸುನಿ ನಿರ್ದೇಶನದ ‘ಅವತಾರ ಪುರುಷ’ ಸಿನಿಮಾ ಮೇ 6ರಂದು ಬಿಡುಗಡೆಯಾಗಲಿದೆ.

2021ರ ಡಿ.10ಕ್ಕೆ ಚಿತ್ರ ಬಿಡುಗಡೆಯಾಗಬೇಕಿತ್ತು. ಆದರೆ ಓಮೈಕ್ರಾನ್ ಭೀತಿ ಹಾಗೂ ಚಿತ್ರಮಂದಿರಗಳಿಗೆ ಪ್ರವೇಶಿಸಲು ಎರಡು ಡೋಸ್ ಲಸಿಕೆ ಕಡ್ಡಾಯ ಮಾಡಿ ಸರ್ಕಾರ ಆದೇಶ ಹೊರಡಿಸಿದ್ದ ಕಾರಣ ಚಿತ್ರತಂಡವು ಬಿಡುಗಡೆ ದಿನಾಂಕವನ್ನು ಕೊನೆಕ್ಷಣದಲ್ಲಿ ಮುಂದೂಡಿತ್ತು. ಪ್ಯಾನ್ ಇಂಡಿಯಾ ಸಿನಿಮಾ ಕಾಲದಲ್ಲಿ ಈ ಸಿನಿಮಾ ಕನ್ನಡದಲ್ಲಷ್ಟೇ ತೆರೆ ಕಾಣಲಿದೆ ಎಂದು ನಿರ್ಮಾಪಕ ಪುಷ್ಕರ್ ಮಲ್ಲಿಕಾರ್ಜುನಯ್ಯ ತಿಳಿಸಿದ್ದಾರೆ.

ವಾಮಾಚಾರ, ಮಾಟ ಮಂತ್ರದ ಸುತ್ತ ಈ ಚಿತ್ರದ ಕಥೆ ಹೆಣೆಯಲಾಗಿದ್ದು, ಶರಣ್ ಜೂನಿಯರ್ ಆರ್ಟಿಸ್ಟ್ ಪಾತ್ರದಲ್ಲಿ ಹತ್ತಕ್ಕೂ ಹೆಚ್ಚು ಗೆಟ್‌ಅಪ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಪುಷ್ಕರ ಮಲ್ಲಿಕಾರ್ಜುನಯ್ಯ ಅವರು ನಿರ್ಮಾಣ ಮಾಡಿರುವ ಈ ಚಿತ್ರವು ಎರಡು ಭಾಗಗಳಲ್ಲಿ ತೆರೆಕಾಣುತ್ತಿದ್ದು, ಮೊದಲನೇ ಭಾಗ ರಿಲೀಸ್ ಆದ 101ನೇ ದಿನಕ್ಕೆ ಎರಡನೇ ಭಾಗವನ್ನು ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. ❖

ಆರ್‌ಆರ್‌ಆರ್ ಸಂಭ್ರಮ



ಜೂನಿಯರ್ ಎನ್‌ಟಿಆರ್, ಆಲಿಯಾ ಭಟ್ ಹಾಗೂ ರಾಮ್‌ಚರಣ್ ತೇಜ

ಎಸ್.ಎಸ್. ರಾಜಮೌಳಿ ನಿರ್ದೇಶನದ ಬಿಗ್‌ಬಜೆಟ್ ಪ್ಯಾನ್ ಇಂಡಿಯಾ ಸಿನಿಮಾ ಆರ್‌ಆರ್‌ಆರ್ (ರೌದ್ರ–ರಣ–ರುಧಿರ) ಬಿಡುಗಡೆಪೂರ್ವ ಕಾರ್ಯಕ್ರಮವು ಮಾ.19ರಂದು ಸಂಜೆ 6ಕ್ಕೆ ಚಿಕ್ಕಬಳ್ಳಾಪುರದ ಅಗಲಗುರ್ಕಿಯಲ್ಲಿ ನಡೆಯಲಿದೆ.

ಚಿತ್ರತಂಡವು ಈ ಕಾರ್ಯಕ್ರಮವನ್ನು ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ಅರ್ಪಿಸಿದೆ. ಕಾರ್ಯಕ್ರಮದಲ್ಲಿ ಪುನೀತ್ ಕುರಿತ ವಿಶೇಷ ಪ್ರದರ್ಶನವನ್ನೂ ಆಯೋಜಿಸಲಾಗಿದೆ ಎಂದು ಕೆವಿಎನ್ ಪ್ರೊಡಕ್ಷನ್ಸ್ ತಿಳಿಸಿದೆ.

ಸಿನಿಮಾ, ಸ್ವಾತಂತ್ರ್ಯಪೂರ್ವದ 1920ರ ದಶಕದಲ್ಲಿ ನಡೆಯುವ ಕಥೆಯನ್ನು ಹೊಂದಿದ್ದು, ಮಾ. 25ರಂದು ತೆರೆಕಾಣುತ್ತಿದೆ. ಬಿಡುಗಡೆಪೂರ್ವ ಕಾರ್ಯಕ್ರಮದಲ್ಲಿ ನಟರಾದ ಜ್ಯೂನಿಯರ್ ಎನ್‌ಟಿಆರ್, ರಾಮ್‌ಚರಣ್ ತೇಜ, ಅಜಯ್ ದೇವ್‌ಗನ್, ಆಲಿಯಾ ಭಟ್ ಸೇರಿದಂತೆ ಚಿತ್ರದ ಎಲ್ಲ ಕಲಾವಿದರು, ಕನ್ನಡ ಮತ್ತು ತೆಲುಗು ಚಿತ್ರರಂಗದ ಪ್ರಮುಖ ತಾರೆಯರೂ ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕಾಗಿ 52 ಸಾವಿರ ಚದರಡಿಯ ಬೃಹತ್ ಎಲ್‌ಇಡಿ ಪರದೆ ಹಾಗೂ 42 ಬೃಹತ್ ಲೇಸರ್ ಲೈಟ್‌ಗಳನ್ನು ಅಳವಡಿಸಿರುವ ಬೃಹತ್ ವೇದಿಕೆ ತಯಾರಾಗಿದೆ. ❖

ಉಪ್ಪಿ ಮತ್ತೆ ಆ್ಯಕ್ಷನ್ ಕಟ್




ಚಂದನವನದಲ್ಲಿ ನಟನಾಗಿ ಮಿಂಚುವುದಕ್ಕೂ ಮುನ್ನ ನಿರ್ದೇಶಕರಾಗಿ, ತಮ್ಮದೇ ಶೈಲಿಯ ನಿರ್ದೇಶನದಿಂದ ಛಾಪು ಮೂಡಿಸಿದವರು ನಟ ಉಪೇಂದ್ರ. ‘ಓಂ’, ‘ಶ್’, ‘ಉಪೇಂದ್ರ’, ‘ಸೂಪರ್’ ಹೀಗೆ ಹಲವು ಹಿಟ್ ಚಿತ್ರಗಳನ್ನು ನಿರ್ದೇಶಿಸಿದ್ದ ಉಪೇಂದ್ರ ಅವರು ಇದೀಗ ಮತ್ತೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ತಮ್ಮ ನಿರ್ದೇಶನದ ಹೊಸ ಸಿನಿಮಾದ ಶೀರ್ಷಿಕೆ ಹಾಗೂ ಪೋಸ್ಟರ್ ಅನ್ನು ಇತ್ತೀಚೆಗೆ ಉಪ್ಪಿ ಬಿಡುಗಡೆಗೊಳಿಸಿದ್ದಾರೆ.

ಚಿತ್ರಕ್ಕೆ ವಿಭಿನ್ನವಾದ ಶೀರ್ಷಿಕೆ, ಅಡಿ ಬರಹ ನೀಡುವುದು ಉಪೇಂದ್ರ ಅವರ ಶೈಲಿ. ಅದರಂತೆ ತಮ್ಮ ಹೊಸ ಸಿನಿಮಾಗೂ ಕುದುರೆಯ ಲಾಳಾಕೃತಿಯಲ್ಲಿ ಇಂಗ್ಲಿಷ್‌ನ ‘ಯು’(U) ಶೀರ್ಷಿಕೆ ಇಟ್ಟು, ಬೆಂಕಿಯಲ್ಲಿ ಉದ್ದ ನಾಮ ಎಳೆದಿದ್ದಾರೆ. ಚಿತ್ರದ ಅಡಿ ಬರಹದ ಪ್ರತಿ ಶಬ್ದವನ್ನೂ ಏಳು ಭಾಷೆಯಲ್ಲಿ ಬರೆದಿದ್ದಾರೆ. ‘ಇವನು ಹೇಗೆ ಬರುತ್ತಾನೆ ಎಂದು ತಿಳಿದಿಲ್ಲ, ಆದರೆ ನಿಶ್ಚಿತವಾಗಿಯೂ ಬರುತ್ತಾನೆ’ ಎಂದು ಅಡಿಬರಹದಲ್ಲಿ ಉಲ್ಲೇಖಿಸಲಾಗಿದೆ.

ಶೀರ್ಷಿಕೆಗೆ ಉಪೇಂದ್ರ ಅಭಿಮಾನಿಗಳು ಫಿದಾ ಆಗಿದ್ದು, ಸಾಮಾಜಿಕ ಜಾಲತಾಣದಲ್ಲಿ ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿದ್ದಾರೆ. ‘ಇಂಥ ಸಿನಿಮಾಗಾಗಿಯೇ ಕಾಯುತ್ತಿದ್ದೇವೆ’ ಎಂದು ಹಲವರು ಹೇಳಿದ್ದಾರೆ.

ಈ ಹೊಸ ಸಿನಿಮಾವನ್ನು ಜಿ.ಮನೋಹರನ್ ಹಾಗೂ ಶ್ರೀಕಾಂತ್ ಕೆ.ಪಿ. ಅವರು ನಿರ್ಮಾಣ ಮಾಡುತ್ತಿದ್ದಾರೆ. ‘ಈ ಚಿತ್ರರಂಗದಲ್ಲಿ ‘ಉಪೇಂದ್ರ’ ಅನ್ನೊ ಕಥೆ ಮಾಡಿ, ಕಳೆದ 33 ವರ್ಷದಲ್ಲಿ ಚಿತ್ರಕಥೆ ಬರೆದು, ಸಂಭಾಷಣೆ ಹೇಳಿಸಿ, ಶಿಳ್ಳೆ ಚಪ್ಪಾಳೆಯಲ್ಲೇ ನಿರ್ದೇಶನ ಮಾಡಿದವರು ನೀವು. ಎಲ್ಲಾ ಅಭಿಮಾನಿ ಪ್ರಜಾ ಪ್ರಭುಗಳಿಗೆ ಈ ಚಿತ್ರ ಅರ್ಪಿಸುತ್ತಿದ್ದೇನೆ’ ಎಂದು ಉಪೇಂದ್ರ ಟ್ವೀಟ್ ಮೂಲಕ ಹೇಳಿದ್ದಾರೆ. ಪ್ರಸ್ತುತ ಕೆ.ಮಾದೇಶ್ ನಿರ್ದೇಶನದ ‘ಲಗಾಮ್’ ಚಿತ್ರ ಹಾಗೂ ಆರ್. ಚಂದ್ರು ಅವರ ನಿರ್ದೇಶನದ ‘ಕಬ್ಜ’ ಚಿತ್ರದ ಚಿತ್ರೀಕರಣದಲ್ಲಿ ಉಪೇಂದ್ರ ತೊಡಗಿಸಿಕೊಂಡಿದ್ದಾರೆ. ❖

ಬೈರಾಗಿ
ಶಿವರಾಜ್‌ಕುಮಾರ್
‘ಡಾಲಿ’ ಧನಂಜಯ್



‘ಬೈರಾಗಿ’ಯಲ್ಲಿ ಹುಲಿ ಘರ್ಜನೆ

ನಟ ಶಿವರಾಜ್‌ಕುಮಾರ್ ನಟನೆಯ 123ನೇ ಸಿನಿಮಾ ‘ಬೈರಾಗಿ’ಯ ಟೀಸರ್ ಬಿಡುಗಡೆಯಾಗಿದ್ದು, ಹುಲಿ ಘರ್ಜನೆ ಭರ್ಜರಿಯಾಗಿದೆ.

‘ವೇಷ ಹಾಕಿದಾಗ ಮಾತ್ರವಲ್ಲ. ನಾವು ಯಾವಾಗಲೂ ಹುಲಿಯೇ ಎಂದು ದೊಡ್ಡವರು ಹೇಳಿ ಬೆಳೆಸಿದರು. ನಾನು ಬೆಳೆಯುತ್ತಾ ಬೆಳೆಯುತ್ತಾ ಆ ಹುಲೀನೂ ನನ್ನ ಜೊತೆ ಬೆಳೆಯಿತು’ ಎನ್ನುತ್ತಾ ಪ್ರವೇಶಿಸುವ ಶಿವರಾಜ್‌ಕುಮಾರ್ ಅವರ ಭರ್ಜರಿ ಆ್ಯಕ್ಷನ್ ದೃಶ್ಯಗಳಿಗೆ, ಖಡಕ್ ಡೈಲಾಗ್‌ಗಳಿಗೆ ಅಭಿಮಾನಿಗಳು ಫಿದಾ ಆಗಿದ್ದಾರೆ. ‘ಜೇಮ್ಸ್’ ಚಿತ್ರದ ಜೊತೆಗೂ ‘ಬೈರಾಗಿ’ ಸಿನಿಮಾದ ಟೀಸರ್ ಸದ್ದು ಮಾಡುತ್ತಿದ್ದೆ. ನಿರ್ದೇಶಕ ಎಸ್.ಡಿ. ವಿಜಯ್ ಮಿಲ್ಟನ್ ನಿರ್ದೇಶನ ಚಿತ್ರಕ್ಕಿದೆ.

‘ಟಗರು’ ಸಿನಿಮಾ ಯಶಸ್ಸಿನ ಬಳಿಕ ಶಿವರಾಜ್‌ಕುಮಾರ್ ಹಾಗೂ ‘ಡಾಲಿ’ ಧನಂಜಯ್ ಒಟ್ಟಿಗೆ ಕಾಣಿಸಿಕೊಳ್ಳುತ್ತಿರುವ ಈ ಸಿನಿಮಾ ಮೇಲೆ ಜನರ ನಿರೀಕ್ಷೆ ಬಹಳಷ್ಟಿದೆ. ಶಿವರಾಜ್‌ಕುಮಾರ್ ಅವರ ಹುಲಿವೇಷದ ಗೆಟಪ್ ಎಲ್ಲೆಡೆ ವೈರಲ್ ಆಗಿದೆ. ಅಂಜಲಿ ಈ ಚಿತ್ರದ ನಾಯಕಿ. ‘ದಿಯಾ’ ಖ್ಯಾತಿಯ ಪೃಥ್ವಿ ಅಂಬಾರ್ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿದ್ದಾರೆ. ನಟ ಶಶಿಕುಮಾರ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಕೃಷ್ಣ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಕೃಷ್ಣ ಸಾರ್ಥಕ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ❖

ಕಿರುತೆರೆ



ಡ್ರಾಮಾ ಜೂನಿಯರ್ಸ್ ಸಾರಥ್ಯದಲ್ಲಿ ರಚಿತಾ, ರವಿಚಂದ್ರ, ಲಕ್ಷ್ಮೀ ಹಾಗೂ ಆನಂದ್

ಡ್ರಾಮಾ ಜೂನಿಯರ್ಸ್‌ಗೆ ಕಿಂದರಿ ಜೋಗಿ!

ಡ್ರಾಮಾ ಜೂನಿಯರ್ಸ್‌ನ ಹೊಸ ಆವೃತ್ತಿಯಲ್ಲಿ ಮಕ್ಕಳ ಜೊತೆಗೆ ಕಿಂದರಿಜೋಗಿ ಸೇರಿಕೊಂಡಿದ್ದಾರೆ. ಹೊಸ ಸರಣಿಯಲ್ಲಿ ಕ್ರೇಜಿಸ್ಟಾರ್ ರವಿಚಂದ್ರ, ಜೂಲಿ ಲಕ್ಷ್ಮೀ, ಡಿಂಪಲ್ ಕ್ವೀನ್ ರಚಿತಾ ರಾಮ್ ತೀರ್ಪುಗಾರರಾಗಿದ್ದಾರೆ.

ಮೂರು ವರ್ಷಗಳ ಬಳಿಕ ಹೊಸತನದೊಂದಿಗೆ ಈ ಆವೃತ್ತಿಯನ್ನು ಹೊರತರುತ್ತಿದ್ದೇವೆ ಎಂದು ಜೀ ವಾಹಿನಿ ಹೇಳಿದೆ. ಕಾರ್ಯಕ್ರಮದ ಪ್ರೋಮೊ ಸಾಮಾಜಿಕ ಜಾಲತಾಣಗಳಲ್ಲಿ ಈಗಾಗಲೇ ಮೆಚ್ಚುಗೆ ಗಳಿಸಿದೆ. ಮಾರ್ಚ್ 19ರಿಂದ ಪ್ರತಿ ಶನಿವಾರ ಮತ್ತು ಭಾನುವಾರ ಸಂಜೆ 7.30ಕ್ಕೆ ಜೀ ವಾಹಿನಿಯಲ್ಲಿ ಈ ಶೋ ಪ್ರಸಾರವಾಗಲಿದೆ.

ಈ ಸೀಸನ್‌ನಲ್ಲಿ ಏನಿದೆ?

ನಾಡಿನ ಸೊಗಡು, ಸಾಧಕರ ಯಶೋಗಾಥೆ, ಅನೇಕ ಸಾಹಿತಿಗಳ ಗದ್ಯಗಳು, ಸಣ್ಣ ಕಥೆಗಳು, ಕನ್ನಡತನವನ್ನು ಪ್ರತಿನಿಧಿಸುವ ಕಥೆಗಳನ್ನು ಮಕ್ಕಳು ಅಭಿನಯಿಸಲಿದ್ದಾರೆ. ಈ ಸರಣಿಗಾಗಿ ರಾಜ್ಯದಾದ್ಯಂತ ಸುಮಾರು 14 ಸಾವಿರ ಮಕ್ಕಳನ್ನು ಆಡಿಷನ್‌ಗೆ ಒಳಪಡಿಸಲಾಗಿದೆ. ಮಾಸ್ಟರ್ ಆನಂದ್ ಅವರ ನಿರೂಪಣೆಯಲ್ಲಿ ಈ ಕಾರ್ಯಕ್ರಮ ಪ್ರಸಾರವಾಗಲಿದೆ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಯಶಸ್ಸು ಎಂಬುದು ಅತ್ಯಂತ ಕೆಟ್ಟ ಶಿಕ್ಷಕ ಇದ್ದಂತೆ.
ತಾವು ಸೋಲಲು ಸಾಧ್ಯವೇ ಇಲ್ಲ ಅಂದುಕೊಳ್ಳುವಂತೆ
ಚತುರಮತಿಗಳನ್ನು ಅದು ಅಪಮಾರ್ಗಕ್ಕೆ ಎಳೆದುಬಿಡುತ್ತದೆ.
-ಬಿಲ್ ಗೇಟ್ಸ್

ಪಂಜಾಬ್: ಎಎಪಿಯ ಹೊಣೆಗಾರಿಕೆ ಹೆಚ್ಚಿಸಿದ ಭಾರಿ ಗೆಲುವು

ಪಂಜಾಬ್ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ಪರವಾಗಿ ಎದ್ದ ಅಲೆ ಮತ್ತು ಸಿಕ್ಕ ಗೆಲುವು ಎಷ್ಟೊಂದು ಅಭೂತಪೂರ್ವ ಎಂದರೆ, ಆ ಪಕ್ಷದ ನಾಯಕರೇ ಫಲಿತಾಂಶ ಕಂಡು ಬೆರಗುಗೊಂಡಿದ್ದಾರೆ. ಪೊರಕೆಯಲ್ಲಿ ಗುಡಿಸಿ ಹಾಕಬೇಕು ಎಂಬ ನಿರೀಕ್ಷೆಯಷ್ಟೇ ಪಕ್ಷಕ್ಕೆ ಇತ್ತು. ಆದರೆ, ಜನರು ವ್ಯಾಕ್ಯೂಮ್ ಕ್ಲೀನರ್ ತೆಗೆದುಕೊಂಡು ಸ್ವಚ್ಛಗೊಳಿಸಿದ್ದಾರೆ ಎಂದು ಪಕ್ಷದ ಮುಖಂಡರೊಬ್ಬರು ಹೇಳಿದ್ದು ಈ ಬೆರಗಿಗೆ ಪುರಾವೆ. 117 ಕ್ಷೇತ್ರಗಳ ಪೈಕಿ 92 ಕ್ಷೇತ್ರಗಳನ್ನು ಎಎಪಿ ಗೆದ್ದುಕೊಂಡಿದೆ. ಈ ಹಿಂದೆ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್‌ಗೆ ಸಿಕ್ಕಿದ್ದು 18 ಸ್ಥಾನಗಳು ಮಾತ್ರ. ಪಂಜಾಬ್‌ನಲ್ಲಿ ಇತ್ತೀಚಿನವರೆಗೆ ಇದ್ದದ್ದು ಕಾಂಗ್ರೆಸ್ ಮತ್ತು ಅಕಾಲಿದಳದ ನಡುವೆ ದ್ವಿಪಕ್ಷೀಯ ಸ್ಪರ್ಧೆ. ಈಗ ಅದು ಬಹುಪಕ್ಷೀಯ ಸ್ಪರ್ಧೆಯಾಗಿ ಮಾರ್ಪಟ್ಟಿದೆ. ಸ್ಪರ್ಧೆ ಬಹುಪಕ್ಷೀಯವಾದ ಕಾರಣದಿಂದಾಗಿ 2017ರಲ್ಲಿ 20 ಕ್ಷೇತ್ರಗಳಲ್ಲಿ ಗೆದ್ದಿದ್ದ ಎಎಪಿಯ ಸ್ಥಾನಗಳು ಈ ಬಾರಿ 92ಕ್ಕೆ ಏರಿಕೆಯಾದವು. ಆ ಪಕ್ಷದ ಮತಗಳಿಕೆ ಪ್ರಮಾಣವು ಶೇ 23.7ರಿಂದ ಶೇ 42ಕ್ಕೆ ಏರಿತು. ಕಾಂಗ್ರೆಸ್ ಮತ್ತು ಅಕಾಲಿದಳದ ಮತ ಗಳಿಕೆಯ ಪ್ರಮಾಣವು ಕ್ರಮವಾಗಿ ಶೇ 23 ಮತ್ತು ಶೇ 20ರಷ್ಟಿದೆ. ಕಾಂಗ್ರೆಸ್‌ನ 18 ಮತ್ತು ಅಕಾಲಿದಳದ 3 ಸ್ಥಾನ ಗಳಿಕೆಗೆ ಹೋಲಿಸಿದರೆ ಮತ ಪ್ರಮಾಣವು ಶೋಚನೀಯ ಏನಲ್ಲ. ಚುನಾವಣೆ ಮತ್ತು ರಾಜಕೀಯಕ್ಕೆ ಸಂಬಂಧಿಸಿ ರಾಜ್ಯದಲ್ಲಿ ಸೃಷ್ಟಿಯಾಗಿದ್ದ ಅಸಾಧಾರಣ ಸನ್ನಿವೇಶವು ಎಎಪಿಗೆ ವರವಾಗಿ ಪರಿಣಮಿಸಿದೆ.



ಅಮೋಘ ಗೆಲುವಿನ ಅಲೆಯಲ್ಲಿ ಎಎಪಿ ತೇಲಿಹೋಗಬಾರದು. ಭಾರಿ ಬಹುಮತವನ್ನು ಜನರು ನೀಡಿದ್ದಾರೆ ಎಂದರೆ ದೊಡ್ಡ ಹೊಣೆಗಾರಿಕೆಯನ್ನು ಹೊರಿಸಿದ್ದಾರೆ ಎಂದೇ ಅರ್ಥ

ಸ್ಥಾನಗಳ ಸಂಖ್ಯೆ ಕಡಿಮೆಯಾದರೂ ಕಾಂಗ್ರೆಸ್ ಪಕ್ಷವು ಗೆಲ್ಲಬಹುದು ಎಂಬ ನಿರೀಕ್ಷೆ ಕಳೆದ ವರ್ಷದವರೆಗೆ ಇತ್ತು. ಅಕಾಲಿದಳದ ನಾಯಕರ ವಿರುದ್ಧ ವಿವಿಧ ರೀತಿಯ ಭ್ರಷ್ಟಾಚಾರಗಳ ಆರೋಪ ಕೇಳಿಬಂದಿತ್ತು. ಜತೆಗೆ, ಕೇಂದ್ರವು ಜಾರಿಗೆ ತಂದಿದ್ದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಬಿಜೆಪಿಯ ಜತೆಗಿನ ಸಖ್ಯವನ್ನು ಅಕಾಲಿದಳ ಕಡಿದುಕೊಂಡಿತ್ತು. ಹೀಗಾಗಿ ಅಕಾಲಿದಳವು ದುರ್ಬಲವಾಗಿತ್ತು. ಅಮರಿಂದರ್ ಸಿಂಗ್ ನೇತೃತ್ವದ ಸರ್ಕಾರದ ವಿರುದ್ಧ ಸ್ವಲ್ಪ ಮಟ್ಟಿಗೆ ಆಡಳಿತ ವಿರೋಧಿ ಅಲೆ ಇತ್ತು. ಆದರೆ, ಅಮರಿಂದರ್ ಅವರನ್ನು ಬದಲಾಯಿಸಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಚುನಾವಣೆಗೆ ಕೆಲವೇ ತಿಂಗಳು ಇರುವಾಗ ನೇಮಿಸಿದ್ದು ಮತ್ತು ನವಜೋತ್ ಸಿಂಗ್ ಸಿಧು ಅವರಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಕೊಟ್ಟದ್ದು ಕಾಂಗ್ರೆಸ್‌ನ ಹಿನ್ನಡೆಗೆ ಕಾರಣವಾದ ಅಂಶಗಳಲ್ಲಿ ಕೆಲವು. ಪರಿಶಿಷ್ಟ ಜಾತಿಯ ಚನ್ನಿ ಅವರ ನೇಮಕದಿಂದಾಗಿ ಆ ಸಮುದಾಯದ ಮತಗಳು ಸಾರಾಸಗಟಾಗಿ ಪಕ್ಷಕ್ಕೆ ಸಿಗಬಹುದು ಎಂಬ ಕಾಂಗ್ರೆಸ್ ನಿರೀಕ್ಷೆ ಹುಸಿಯಾಗಿದೆ. ಚುನಾವಣೆಗೆ ಕೆಲವೇ ತಿಂಗಳು ಇರುವಾಗ ಚನ್ನಿ ಅವರನ್ನು ನೇಮಿಸಿದ್ದು ನೆರವಾಗಲಿಲ್ಲ ಮಾತ್ರವಲ್ಲ, ಪರಿಸ್ಥಿತಿ ಇನ್ನಷ್ಟು ಹದಗೆಡುವಂತೆ ಮಾಡಿತು. ಸಿಧು ಅವರಂತೂ ಚನ್ನಿ ಅವರ ವಿರುದ್ಧ ಪ್ರತಿದಿನವೂ ಬಹಿರಂಗವಾಗಿ ಟೀಕೆ ಮಾಡುತ್ತಲೇ ಇದ್ದರು. ಭ್ರಷ್ಟಾಚಾರಮುಕ್ತ ಮತ್ತು ದಕ್ಷ ಆಡಳಿತದ ಭರವಸೆಯನ್ನು ಎಎಪಿ ಕೊಟ್ಟಿತ್ತು. ಹಲವು ಹೊಸಮುಖಗಳನ್ನು ಕಣಕ್ಕೆ ಇಳಿಸಿತ್ತು. ದೆಹಲಿಯಲ್ಲಿ ಪರಿಣಾಮಕಾರಿಯಾಗಿ ಜಾರಿ ಆಗಿರುವ ಆರೋಗ್ಯ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಿಗೆ ಆದ್ಯತೆ ಇರುವ ಆಡಳಿತ ಮಾದರಿಯನ್ನು ಜನರ ಮುಂದೆ ಇರಿಸಿತ್ತು. ಒಂದು ಪರ್ಯಾಯ ಎಂಬಂತೆ ಜನರು ಇದನ್ನು ಕಂಡರು ಮತ್ತು ಎಎಪಿಗೆ ಮತ ಹಾಕಿದರು.

ಅಮೋಘ ಗೆಲುವಿನ ಅಲೆಯಲ್ಲಿ ಎಎಪಿ ತೇಲಿ ಹೋಗಬಾರದು. ಭಾರಿ ಬಹುಮತವನ್ನು ಜನರು ನೀಡಿದ್ದಾರೆ ಎಂದರೆ ದೊಡ್ಡ ಹೊಣೆಗಾರಿಕೆಯನ್ನು ಹೊರಿಸಿದ್ದಾರೆ ಎಂದೇ ಅರ್ಥ. ಎಎಪಿ, ದೆಹಲಿಯಲ್ಲಿ ಮಾಡಿರುವ ಪ್ರಯೋಗ ಯಶಸ್ವಿಯಾಗಿದೆ. ಭಾರಿ ಬಹುಮತದ ಸರ್ಕಾರವನ್ನು ಸತತ ಎರಡನೇ ಅವಧಿಗೆ ಅಲ್ಲಿ ಎಎಪಿ ನಡೆಸುತ್ತಿದೆ. ದೆಹಲಿ ಮಾದರಿಯನ್ನು ಮುಂದಿಟ್ಟುಕೊಂಡೇ ಪಂಜಾಬ್‌ನ ಜನರ ಮನ ಗೆಲ್ಲುವಲ್ಲಿ ಎಎಪಿ ಯಶಸ್ವಿಯಾಗಿದೆ. ಆದರೆ, ದೆಹಲಿ ಮತ್ತು ಪಂಜಾಬ್ ನಡುವೆ ಇರುವ ವ್ಯತ್ಯಾಸವನ್ನು ಹೊಸ ಮುಖ್ಯಮಂತ್ರಿ ಭಗವಂತ ಮಾನ್ ಅರ್ಥ ಮಾಡಿಕೊಳ್ಳಬೇಕು. ದೆಹಲಿಯನ್ನು ಪೂರ್ಣ ಪ್ರಮಾಣದ ರಾಜ್ಯ ಎಂದು ಹೇಳುವಂತಿಲ್ಲ. ದೆಹಲಿಯ ವಿಸ್ತೀರ್ಣ ಕಡಿಮೆ. ಅಲ್ಲಿ ಕಾನೂನು-ಸುವ್ಯವಸ್ಥೆಯನ್ನು ರಾಜ್ಯ ಸರ್ಕಾರ ನೋಡಿಕೊಳ್ಳಬೇಕಿಲ್ಲ. ಜತೆಗೆ ದೆಹಲಿ ಶ್ರೀಮಂತ ರಾಜ್ಯ. ಪಂಜಾಬ್ ಹಾಗಲ್ಲ. ಇಲ್ಲಿನ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳು ಕುಸಿತದತ್ತ ಸಾಗಿವೆ. ಮಾದಕ ಪದಾರ್ಥ ಬಳಕೆಯು ವ್ಯಾಪಕವಾಗಿದೆ. ನಿರುದ್ಯೋಗ ಸಮಸ್ಯೆ ನಡುಕ ಹುಟ್ಟಿಸುವ ರೀತಿಯಲ್ಲಿದೆ. ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಈ ಸಮಸ್ಯೆಗಳನ್ನು ಪರಿಹರಿಸಿ ಜನರು ಇಟ್ಟಿರುವ ಭರವಸೆಗೆ ತಕ್ಕ ರೀತಿಯಲ್ಲಿ ಎಎಪಿ ಆಡಳಿತ ನಡೆಸಬೇಕು. ದೆಹಲಿಗೆ ಹೋಲಿಸಿದರೆ ಪಂಜಾಬ್‌ಗೆ ಹೆಚ್ಚು ಸ್ವಾತಂತ್ರ್ಯ ಇದೆ ಎಂಬುದು ಮೇಲ್ನೋಟಕ್ಕೆ ಕಾಣುವ ಸತ್ಯ ಮಾತ್ರ. ಕೇಂದ್ರದ ಹಸ್ತಕ್ಷೇಪ ಮತ್ತು ಅಡ್ಡಿಗಳನ್ನು ಎದುರಿಸಲು ಸರ್ಕಾರವು ಸಿದ್ಧವಾಗಿಯೇ ಇರಬೇಕು. ಎರಡು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿರುವ ಎಎಪಿ, ರಾಷ್ಟ್ರ ಮಟ್ಟದಲ್ಲಿ ತಾನು ಕಾಂಗ್ರೆಸ್‌ಗೆ ಪರ್ಯಾಯ ಎಂದು ಬೀಗುತ್ತಿದೆ. ಕಾಂಗ್ರೆಸ್‌ಗೆ ಪರ್ಯಾಯವಾಗಿ ಪಕ್ಷವೊಂದು ರೂಪುಗೊಳ್ಳಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ ಎಂಬುದು ನಿಜ. ಆದರೆ, ಎಎಪಿಯೇ ಪರ್ಯಾಯ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ಪಂಜಾಬ್‌ನಲ್ಲಿ ಎಎಪಿ ಏನು ಮಾಡಲಿದೆ ಎಂಬುದರ ಮೇಲೆಯೇ ರಾಷ್ಟ್ರಮಟ್ಟದ ಮಹತ್ವಾಕಾಂಕ್ಷೆಯು ಅವಲಂಬಿತ.

ದಿನದ ಟ್ವೀಟ್

ದ್ವೇಷದ ಅಗತ್ಯವಿಲ್ಲ



ಮುಸ್ಲಿಮರ ವಿರುದ್ಧ ದ್ವೇಷವನ್ನು ಹುಟ್ಟುಹಾಕದೇ ಕಾಶ್ಮೀರಿ ಪಂಡಿತರ ಜೊತೆ ನಿಲ್ಲಲು ಸಾಧ್ಯ.

ಕೌಶಿಕ್ ರಾಜ್, ಕವಿ, ಪತ್ರಕರ್ತ

ಕಿಡಿನುಡಿ



ನಾನು ಚಿಕ್ಕವನಿದ್ದಾಗ, ಇತಿಹಾಸ ಮತ್ತು ಕಾಲ್ಪನಿಕ ಪುಸ್ತಕಗಳನ್ನು ಪೆಟ್ಟಿಗೆಗಳ ತುಂಬಾ ಖರೀದಿಸಿ ಹೊತ್ತುತರಲು ಕೋಲ್ಕತ್ತ ಪುಸ್ತಕ ಮೇಳಕ್ಕೆ ರೈಲಿನಲ್ಲಿ ಹೋಗುತ್ತಿದ್ದೆ. ಈಗ ಟಿಎಂಸಿ ಶಾಸಕರೊಬ್ಬರು ಬಿಹಾರದವರ ವಿರುದ್ಧ ನರಮೇಧಕ್ಕೆ ಕರೆ ನೀಡಲು ಕೋಲ್ಕತ್ತ ಪುಸ್ತಕ ಮೇಳವನ್ನು ವೇದಿಕೆಯಾಗಿಸಿ ಕೊಳ್ಳುತ್ತಾರೆ ಮತ್ತು ಬಂಗಾಳದ ಬುದ್ಧಿಜೀವಿಗಳು ಅದಕ್ಕೆ ಖುಷಿಯಿಂದ ಚಪ್ಪಾಳೆ ತಟ್ಟುತ್ತಾರೆ. ಬಂಗಾಳದ ಸ್ಥಿತಿ ಭಯಾನಕವಾಗಿದೆ. ನಾಚಿಕೆಗೇಡು!

ಅಭಿಷೇಕ್, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 18-3-1997

- **ಕಲ್ಪನಾಥ ರಾಯ್‌ಗೆ ಹತ್ತು ವರ್ಷ ಜೈಲು: ಟಾಡಾ ಕೋರ್ಟ್ ತೀರ್ಪು**

ನವದೆಹಲಿ, ಮಾ. 17 (ಪಿಟಿಐ)– ಭೂಗತ ದೊರೆ ದಾವೂದ್ ಇಬ್ರಾಹಿಂ ಸಹಚರರಿಗೆ ಆಶ್ರಯ ನೀಡಿದ ಆರೋಪದ ಮೇಲೆ ಕೇಂದ್ರದ ಮಾಜಿ ಸಚಿವ ಕಲ್ಪನಾಥ ರಾಯ್ ಅವರಿಗೆ ವಿಶೇಷ ಟಾಡಾ ನ್ಯಾಯಾಲಯವು ಇಂದು ಹತ್ತು ವರ್ಷಗಳ ಜೈಲು ಶಿಕ್ಷೆ ಹಾಗೂ 10 ಲಕ್ಷ ರೂಪಾಯಿ ದಂಡವನ್ನು ವಿಧಿಸಿ ತೀರ್ಪು ನೀಡಿದೆ.

- **ಲಂಚ ಪ್ರಕರಣ: ಜೆಎಂಎಂ ಮಾಜಿ ಸಂಸದ ಶೈಲೇಂದ್ರ ಮಹತೊ ತಪ್ಪೊಪ್ಪಿಗೆ**

ನವದೆಹಲಿ, ಮಾ. 17 (ಯುಎನ್ಐ, ಪಿಟಿಐ)– ಜೆಎಂಎಂ ಲಂಚ ಪ್ರಕರಣದಲ್ಲಿ ಆರೋಪಿಯಾಗಿರುವ ಶೈಲೇಂದ್ರ ಮಹತೊ ಅವರು ನ್ಯಾಯಾಲಯದ ಮುಂದೆ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ.

ಪ್ರಕರಣದ ವಿಚಾರಣೆ ನಡೆಸುತ್ತಿರುವ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಅಜಿತ್ ಭಾರಿಹೋಕ್ ಅವರಿಗೆ ಹೇಳಿಕೆಯನ್ನು ಸಲ್ಲಿಸಲಾಗಿದೆ. ಹೇಳಿಕೆಯನ್ನು ನಾಳೆ ಪರಿಶೀಲಿಸುವುದಾಗಿ ನ್ಯಾಯಾಧೀಶರು ಹೇಳಿದ್ದಾರೆ. ಅಂದಿನ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರ ವಿರುದ್ಧ 1993ರ ಜುಲೈ 28ರಂದು ಮಂಡಿಸಲಾದ ಅವಿಶ್ವಾಸ ಗೊತ್ತುವಳಿಯ ವಿರುದ್ಧ ಮತ ಹಾಕಲು ತಾವು 50 ಲಕ್ಷ ರೂಪಾಯಿ ಲಂಚ ಪಡೆದಿದ್ದಾಗಿ ಮಹತೊ ಒಪ್ಪಿಕೊಂಡಿದ್ದಾರೆ.

- **ಕೋಲಾರ: ಚಿನ್ನ ಕದಿಯುವ ಜಾಲ ಬೆಳಕಿಗೆ**

ನವದೆಹಲಿ, ಮಾ. 17– ಕೋಲಾರದ ಚಿನ್ನದ ಗಣಿಯಿಂದ ಉತ್ಪನ್ನವಾಗುವ ಚಿನ್ನವನ್ನು ಕದ್ದೊಯ್ದು ಅಕ್ರಮ ವ್ಯವಹಾರ ನಡೆಸುತ್ತಿರುವ ಜಾಲದ ಕೆಲವು ರಹಸ್ಯ ಗೊತ್ತಾಗಿರು-ವುದರಿಂದ, ಈ ಅಕ್ರಮ ದಂಧೆಯನ್ನು ಸಂಪೂರ್ಣವಾಗಿ ತಡೆಯಬೇಕು ಎಂದು ಉದ್ಯಮಗಳ ಸಂಸತ್ ಸ್ಥಾಯಿ ಸಮಿತಿಯ ಉಪಸಮಿತಿಯು ಕೇಂದ್ರ ಸರ್ಕಾರಕ್ಕೆ ತಿಳಿಸಿದೆ.

ಈ ಉಪಸಮಿತಿಯು ಸಾರ್ವಜನಿಕ ಉದ್ಯಮಗಳ ಸ್ಥಿತಿಗತಿಗಳ ಬಗೆಗೆ ಅಧ್ಯಯನ ಪ್ರವಾಸ ಮಾಡಿ ಸಿದ್ಧಪಡಿಸಿರುವ ವರದಿಯನ್ನು ಇಂದು ಲೋಕಸಭೆಯಲ್ಲಿ ಮಂಡಿಸಲಾಯಿತು.

ಈ ವರದಿಯ ಪ್ರಕಾರ, ಕೋಲಾರ ದಂತಹ ಒಂದು ಸಣ್ಣ ಪಟ್ಟಣದಲ್ಲಿ ಐದು ಸಾವಿರ ಮಂದಿ ಚಿನ್ನದ ಒಡವೆಗಳ ಕಾಯಕದಲ್ಲಿ ತೊಡಗಿರುವುದು ಮತ್ತು ಒಡವೆಗಳ ಐನೂರು ಷೋ ರೂಂಗಳು ಇರುವುದು ಇಲ್ಲಿ ಅಕ್ರಮ ದಂಧೆ ನಡೆಯುತ್ತಿರುವ ಸುಳಿವನ್ನು ಸ್ಪಷ್ಟವಾಗಿ ನೀಡುತ್ತವೆ ಎಂದು ಕೆಜಿಎಫ್ ಚಿನ್ನದ ಗಣಿಯಲ್ಲಿನ ವ್ಯವಹಾರದ ಬಗೆಗೆ ಶಂಕೆ ವ್ಯಕ್ತಪಡಿಸಿದೆ.

- **‘ಧರ್ಮಕಾರಣ’ ಲೇಖಕರಿಂದ ಅಕಾಡೆಮಿ ಪ್ರಶಸ್ತಿ ತಿರಸ್ಕಾರ**

ಬೆಂಗಳೂರು, ಮಾ. 17– ಇತ್ತೀಚಿನ ದಿನಗಳಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿರುವ ತಮ್ಮ ಕಾದಂಬರಿ ‘ಧರ್ಮಕಾರಣ’ಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಘೋಷಿಸಿರುವ ಬಹುಮಾನವನ್ನು ತಿರಸ್ಕರಿಸಲು ನಿರ್ಧರಿಸಿ-ರುವುದಾಗಿ ಲೇಖಕ ಡಾ. ಪಿ.ವಿ.ನಾರಾಯಣ ಸ್ಪಷ್ಟಪಡಿಸಿದ್ದಾರೆ. ‘ಬಿಟ್ಟುಕೊಡುತ್ತಿರುವುದು ಬಹುಮಾನವನ್ನೇ ವಿನಾ ಅಭಿಪ್ರಾಯವನ್ನಲ್ಲ’ ಎಂದು ಅಕಾಡೆಮಿ ಅಧ್ಯಕ್ಷರಿಗೆ ಬರೆದು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವ ಪತ್ರದಲ್ಲಿ ಅವರು ತಿಳಿಸಿದ್ದಾರೆ.

ಸೈಬರ್ ಯುದ್ಧ ಮುಂದಿನ ದಿನಗಳಲ್ಲಿ ಯುದ್ಧ ತಂತ್ರಗಾರಿಕೆಯ ಬಹುದೊಡ್ಡ ಆಯುಧವೇ ಆಗಲಿದೆ

ಉಕ್ರೇನ್: ಯುದ್ಧದ ಸುತ್ತಮುತ್ತ



ವಿಶ್ಲೇಷಣೆ

ವಸಂತ ಶೆಟ್ಟಿ

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಉಕ್ರೇನಿನ ಮೇಲೆ ಯುದ್ಧ ಸಾರಿ ಮೂರು ವಾರಗಳಾಗುತ್ತಿವೆ. ಮೂರು ದಿನಗಳೊಳಗೆ ಉಕ್ರೇನ್ ಅನ್ನು ಮಣಿಸಿ ತನ್ನ ಕೈಗೊಂಬೆಯೊಬ್ಬನನ್ನು ಅಧ್ಯಕ್ಷನನ್ನಾಗಿ ಕೂರಿಸಿ, ಪಕ್ಕದ ಬೆಲರೂಸ್‌ನಂತೆ ಪರೋಕ್ಷವಾಗಿ ತನ್ನ ಹಿಡಿತಕ್ಕೆ ತಂದುಕೊಳ್ಳುವ ಉಮೇದಿನಲ್ಲಿದ್ದ ಪುಟಿನ್ ಅವರಿಗೆ ಅಚ್ಚರಿ ಎನಿಸುವಂತೆ ಉಕ್ರೇನಿಯನ್ನರು ಹೋರಾಟ ಮಾಡುತ್ತಿದ್ದಾರೆ. ಉಕ್ರೇನಿನ ಪೂರ್ವ ಭಾಗದಲ್ಲಿ ಅಲ್ಪಸಂಖ್ಯಾತ ರಷ್ಯನ್ ಭಾಷಿಕರ ನರಮೇಧ ನಡೆಯುತ್ತಿದೆ ಮತ್ತು ಅದನ್ನು ತಡೆಯಲು ಮಿಲಿಟರಿ ಕಾರ್ಯಾಚರಣೆ ನಡೆಸುತ್ತಿದ್ದೇವೆ ಅನ್ನುವ ನೆಪವೊಡ್ಡಿ ಶುರುವಾದ ಈ ಯುದ್ಧದಲ್ಲಿ ರಷ್ಯನ್ ಭಾಷಿಕರೇ ಹೆಚ್ಚಿರುವ ನಗರಗಳನ್ನೂ ರಷ್ಯನ್ ಸೇನೆ ಕುಟ್ಟಿ ಪುಡಿ ಮಾಡುತ್ತಿದೆ. ಇದನ್ನು ಗಮನಿಸಿದರೆ, ಈ ಯುದ್ಧದ ನಿಜ ಉದ್ದೇಶ ಅಳಿದುಹೋದ ಸೋವಿಯತ್ ರಷ್ಯಾ (ಯುಎಸ್‌ಎಸ್‌ಆರ್) ಅನ್ನುವ ಸಾಮ್ರಾಜ್ಯ-ವನ್ನು ಮತ್ತೆ ಸ್ಥಾಪಿಸಬೇಕು ಅನ್ನುವ ವ್ಯಕ್ತಿಯೊಬ್ಬನ ಸಾಮ್ರಾಜ್ಯಶಾಹಿ ಕನಸನ್ನು ಈಡೇರಿಸುವ ಪ್ರಯತ್ನ ಅನ್ನುವುದು ಸ್ಪಷ್ಟವಾಗುತ್ತದೆ.

ಬಹುಬೇಗ ಯುದ್ಧ ಗೆಲ್ಲಲಾಗದ್ದಕ್ಕೆ ಹಾಗೂ ಅಪಾರ ಪ್ರಮಾಣದ ಸಾವು, ನೋವು ತನ್ನ ಸೇನೆಯಲ್ಲೂ ಆದ ಕಾರಣಕ್ಕೆ ಇನ್ನಷ್ಟು ಕಿರಿಕಿರಿಗೊಂಡಿರುವ ರಷ್ಯಾ ಸೇನೆಯು ಉಕ್ರೇನ್ ಅನ್ನು ಮಾನಸಿಕವಾಗಿ ಕುಗ್ಗಿಸಲೆಂದೇ ಮಿಲಿಟರಿ ಗುರಿಗಳಿಗಿಂತ ಹೆಚ್ಚಾಗಿ ನಾಗರಿಕರ ನೆಲೆಗಳ ಮೇಲೆ ಬಾಂಬು ಸುರಿಯುತ್ತಿದೆ. ದೊಡ್ಡ ಪ್ರಮಾಣದ ಸಾವು, ನೋವಿನ ಮೂಲಕ ಎರಡನೆಯ ಮಹಾಯುದ್ಧದ ನಂತರ ಯುರೋಪಿನಲ್ಲಿ ದೊಡ್ಡ ಮಟ್ಟದ ಯುದ್ಧ ಅಪರಾಧಗಳಿಗೆ ಕಾರಣವಾಗಿದೆ. ಯುದ್ಧದ ಕೊನೆಯಲ್ಲಿ ಚೆಚೆನ್ಯಾ ಮತ್ತು ಸಿರಿಯಾದಲ್ಲಿ ರಷ್ಯಾ ಸೇನೆ ಮಾಡಿದ್ದನ್ನು ಕಂಡರೆ ಮುಂದಿನ ದಿನಗಳು ಉಕ್ರೇನ್ ಪಾಲಿಗೆ ಇನ್ನಷ್ಟು ಸಂಕಟದ್ದಾಗಿ ಇರಲಿವೆ ಅನ್ನಬಹುದು. 70 ವರ್ಷಗಳ ಕಾಲ ತಕ್ಕಮಟ್ಟಿಗೆ ಶಾಂತಿ ನೆಲೆಸಿದ್ದ ಜಗತ್ತಿನಲ್ಲಿ ಈ ಯುದ್ಧ ಮುಂದಿನ ದಿನಗಳ ಕುರಿತು ಅನಿಶ್ಚಿತತೆಯನ್ನು, ಜಾಗತೀಕರಣ, ದೇಶ-ದೇಶಗಳ ನಡುವಿನ ಅಧಿಕಾರದ ಸಂಬಂಧವೆಲ್ಲವನ್ನೂ ಮತ್ತೊಮ್ಮೆ ಅವಲೋಕಿಸುವ ಸಂದರ್ಭವನ್ನು ನಮ್ಮೆದುರು ತಂದಿದೆ. ಇಲ್ಲಿಯವರೆಗಿನ ಈ ಯುದ್ಧದಿಂದ ಕೆಲವು ಸಂದೇಶಗಳು ಹೊರಹೊಮ್ಮುತ್ತಿವೆ.

ಉಕ್ರೇನಿನ ಮೇಲೆ 300 ವರ್ಷಗಳ ಕಾಲ ರಷ್ಯನ್ ಭಾಷೆ ಮತ್ತು ಸಂಸ್ಕೃತಿಯನ್ನು ಹೇರಿ, 1930ರ ಹೊತ್ತಲ್ಲಿ ಒಂದು ಭೀಕರ ಬರಗಾಲ ಸೃಷ್ಟಿಸಿ 40 ಲಕ್ಷಕ್ಕೂ ಹೆಚ್ಚು ಉಕ್ರೇನಿಯನ್ನರನ್ನು ಕೊಂದು, ಅವರ ಜಾಗಕ್ಕೆ ರಷ್ಯನ್ ಭಾಷಿಕರ ವಲಸೆಗೆ ನೆರವು ನೀಡಿದ ಇತಿಹಾಸದ ಹೊರತಾಗಿಯೂ ಉಕ್ರೇನಿಯನ್ನರ ರಾಷ್ಟ್ರೀಯತೆಯನ್ನು ಮಣಿಸಲು ರಷ್ಯಾಗೆ ಸಾಧ್ಯವಾಗಿರಲಿಲ್ಲ. ಈ ಬಾರಿಯ ಯುದ್ಧದಲ್ಲಿ ಸಾಮಾನ್ಯ ಉಕ್ರೇನಿಯನ್ನರು ತೋರುತ್ತಿರುವ ಪ್ರತಿರೋಧ ಗಮನಿಸಿದಾಗ, ರಷ್ಯಾವು ಯುದ್ಧ ಗೆದ್ದರೂ ಹೆಚ್ಚು ದಿನ ಉಕ್ರೇನ್ ಅನ್ನು ತನ್ನ ಅಂಕೆಯಲ್ಲಿ ಇಟ್ಟುಕೊಳ್ಳುವುದು ಅಸಾಧ್ಯ ಎಂದು ತೋರುತ್ತಿದೆ.

ಸೋವಿಯತ್ ರಷ್ಯಾದಿಂದ ಪ್ರತ್ಯೇಕವಾದಾಗ ಉಕ್ರೇನಿನ ಬಳಿ 300ಕ್ಕೂ ಹೆಚ್ಚು ಅಣ್ವಸ್ತ್ರದ ಸಿಡಿತಲೆಗಳಿದ್ದವು. ತನಗೆ ಭದ್ರತೆ ನೀಡುವ ರಷ್ಯಾದ ಮಾತು ನಂಬಿ ಉಕ್ರೇನ್ ಅವುಗಳೆಲ್ಲವನ್ನೂ ರಷ್ಯಾದ ಹಿಡಿತಕ್ಕೆ ಒಪ್ಪಿಸಿತು. ಒಂದು ವೇಳೆ ಉಕ್ರೇನಿನ ಬಳಿ ಈ ಅಸ್ತ್ರಗಳಿದ್ದಿದ್ದರೆ ಅದರ ಮೇಲೆ ದಾಳಿ ಮಾಡುವ ಮುನ್ನ ರಷ್ಯಾ ಹತ್ತು ಬಾರಿ ಯೋಚಿಸುತ್ತಿತ್ತು. ಉಕ್ರೇನಿನಂತಹ ಸಾರ್ವಭೌಮ ದೇಶವೊಂದು ತನ್ನ ಅಣ್ವಸ್ತ್ರಗಳನ್ನು ಹೀಗೆ ಬಿಟ್ಟುಕೊಡಬಾರದಿತ್ತು ಅನ್ನುವ ಪಾಠ ಕಲಿಯುವಷ್ಟರ ಹೊತ್ತಿಗೆ ರಷ್ಯಾದ ಬಾಂಬುಗಳ ಮಳೆಗೆ ಅರ್ಧ ದೇಶ ನಾಶವಾಗಿದೆ. ದೇಶವೊಂದರ ರಕ್ಷಣೆಗೆ ಅಣ್ವಸ್ತ್ರಕ್ಕಿಂತ ದೊಡ್ಡ ಸಾಧನವಿಲ್ಲ. ಭಾರತವೂ ಸೇರಿದಂತೆ ಅಣ್ವಸ್ತ್ರ ಹೊಂದಿರುವ ದೇಶಗಳಿಗೆ ಇದೊಂದು ಪಾಠ. ಅಣ್ವಸ್ತ್ರ ಪ್ರಸರಣ ತಡೆಯುವ ಉದ್ದೇಶಕ್ಕೂ ಯುದ್ಧದಿಂದ ಹಿನ್ನಡೆಯಾಗಿದೆ.

ಇಪ್ಪತ್ತನೆಯ ಶತಮಾನದುದ್ದಕ್ಕೂ ಅಮೆರಿಕದೊಂದಿಗೆ ವಿಶ್ವದ ದೊಡ್ಡಣ್ಣನಾಗಲು ಸೆಣಸಿದ ರಷ್ಯಾ ಆ ದಿನಗಳಿಗೆ ಹೋಲಿಸಿದರೆ ಈಗ ಒಂದು ಕಳೆಗುಂದಿದ ಪ್ರತಿರೂಪದಂತೆ ಕಾಣುತ್ತಿದೆ. ದೊಡ್ಡ ಸೈನ್ಯ, ಮದ್ದುಗುಂಡುಗಳಿದ್ದರೂ ಉಕ್ರೇನಿನಂತಹ ಚಿಕ್ಕ ದೇಶದ ಪ್ರತಿರೋಧ-ವನ್ನು ಗೆಲ್ಲಲಾಗದೆ ಯುದ್ಧವನ್ನು ಎಳೆದಾಡುತ್ತ ಜಗತ್ತಿನ ಕಣ್ಣಿನಲ್ಲಿ ಏಕಾಂಗಿಯಾಗುತ್ತಿದೆ. ಅದರ ಮಿಲಿಟರಿ ಶಕ್ತಿ, ಆಯುಧಗಳೆಲ್ಲವೂ ಸೋವಿಯತ್ ದಿನಗಳ ಮಟ್ಟದಲ್ಲೇ ಉಳಿದಿವೆ ಅನ್ನುವುದು ಸಾಬೀತಾಗುತ್ತಿದೆ. ಇಂತಹ ಆಯುಧಗಳನ್ನು ಆಮದು ಮಾಡಿಕೊಳ್ಳುವ ದೇಶಗಳೂ ಶಸ್ತ್ರಾಸ್ತ್ರಗಳ ವಿಷಯದಲ್ಲಿ ಸ್ವಾವಲಂಬಿಯಾಗುವುದರತ್ತ ಗಮನಹರಿಸುವುದು ಈಗಿನ ತುರ್ತು ಅಂದರೆ ತಪ್ಪಾಗದು.

ಪಶ್ಚಿಮದ ಯಜಮಾನಿಕೆಯನ್ನು ಮೆಟ್ಟಿ ತನ್ನದೇ ಆದ ಪ್ರಭಾವಲಯ ಸೃಷ್ಟಿಸಿಕೊಳ್ಳಬೇಕು ಅನ್ನುವ ಆತುರದಲ್ಲಿರುವ ಚೀನಾ ಈಗ ರಷ್ಯಾದ ಅಚ್ಚುಮೆಚ್ಚಿನ ಮಿತ್ರ-ರಾಷ್ಟ್ರವಾಗಿದೆ. ಅಮೆರಿಕ ಮತ್ತು ಪಶ್ಚಿಮದ ದೇಶಗಳು ವಿಧಿಸಿರುವ ಆರ್ಥಿಕ ನಿರ್ಬಂಧಗಳಿಂದ ತತ್ತರಿಸಿರುವ ರಷ್ಯಾಗೆ ಈಗ ಚೀನಾ ಆಸರೆಯಾಗಿದೆ. ಈ ಸಂದರ್ಭವನ್ನು ತನ್ನ ಲಾಭಕ್ಕೆ ಬಳಸಿಕೊಳ್ಳಲು ಹೊರಟ ಚೀನಾವು ರಷ್ಯಾದ ಪರವಾಗಿ ನಿಂತಿದ್ದರೂ ಪಶ್ಚಿಮದೊಂದಿಗೆ ಗಾಢವಾದ ವ್ಯಾಪಾರ ಸಂಬಂಧ ಹೊಂದಿರುವ ಚೀನಾಗೆ ಯುದ್ಧ ಮುಂದುವರಿದಷ್ಟೂ ರಷ್ಯಾದ ಜೊತೆಗಿನ ಗೆಳೆತನ ದುಬಾರಿಯಾಗಬಹುದು ಅನ್ನುವ ಆತಂಕ ತೋರುತ್ತಿದೆ. ಆರ್ಥಿಕ ನಿರ್ಬಂಧಗಳು ರಷ್ಯಾಗೆ ನೀಡುತ್ತಿರುವ ಹೊಡೆತ ನೋಡಿದ ಚೀನಾವು ತೈವಾನ್ ಮೇಲೆ ದಂಡೆತ್ತಿ ಹೋಗುವ ತನ್ನ ನಿರ್ಧಾರದಿಂದ ತಕ್ಷಣಕ್ಕಂತೂ ಹಿಂದೆ ಸರಿಯುತ್ತದೆ ಎಂದು ಊಹಿಸಬಹುದು.



ಆಪತ್ಕಾಲದಲ್ಲಿ ಭಾರತದೊಂದಿಗೆ ನಿಂತ ಗೆಳೆಯನೆಂದು, ಭಾರತದ ಮಿಲಿಟರಿ ಅಗತ್ಯಗಳನ್ನು ದೊಡ್ಡ ಮಟ್ಟದಲ್ಲಿ ಪೂರೈಸುವ ದೇಶವೆಂದು ಭಾರತವು ವಿಶ್ವಸಂಸ್ಥೆಯಲ್ಲಿ ರಷ್ಯಾದ ವಿರುದ್ಧ ಮತ ಚಲಾಯಿಸದೇ ಹೊರಗುಳಿದಿದೆ. ಅಮೆರಿಕ- ರಷ್ಯಾದ ಈ ಸಂಘರ್ಷದಲ್ಲಿ ಸುಮ್ಮನೆ ಸಿಲುಕಿಕೊಳ್ಳುವ ಅಗತ್ಯವಿಲ್ಲ ಅನ್ನುವ ಕಾರಣಕ್ಕೆ ಇದು ಸರಿಯಾದ ನಿರ್ಧಾರ ಎಂದುಕೊಂಡರೂ ಈ ಹೊತ್ತಿನಲ್ಲಿ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವವಾಗಿ ಉಕ್ರೇನಿನ ಸಾರ್ವಭೌಮತೆಯನ್ನು ಎತ್ತಿ ಹಿಡಿಯುವ ಕೆಲ ಮಾತುಗಳನ್ನಾದರೂ ಭಾರತ ಆಡಬೇಕಿತ್ತು ಅನ್ನುವ ಮಾತಿನಲ್ಲಿ ಸತ್ಯವಿದೆ. ಅಲಿಪ್ತ ನೀತಿಗೆ ಒಂದು ಗಟ್ಟಿಯಾದ ನೈತಿಕ ಆಯಾಮವೂ ಇತ್ತು ಅನ್ನುವುದನ್ನು ಮರೆಯಬಾರದು. ರಷ್ಯಾದ ಜೊತೆಗಿನ ನಮ್ಮ ಸ್ನೇಹದ ಇತಿಹಾಸ ಏನೇ ಇದ್ದರೂ ಇಂದು ಅದು ಬಲಹೀನವಾಗಿ ಚೀನಾದ ತೆಕ್ಕೆಗೆ ಜಾರುತ್ತಿರುವ ವೇಗವನ್ನು ನೋಡಿದರೆ, ನಾಳೆ ಚೀನಾದ ಜೊತೆ ಭಾರತಕ್ಕೆ ಯಾವುದೇ ಮಿಲಿಟರಿ ಸಂಘರ್ಷ ಏರ್ಪಟ್ಟಲ್ಲಿ ರಷ್ಯಾ ನಮ್ಮ ನೆರವಿಗೆ ಎಷ್ಟರ ಮಟ್ಟಿಗೆ ಬರಬಹುದು ಅನ್ನುವ ಆತಂಕ ಭಾರತದ ಅನೇಕ ವಿದೇಶಾಂಗ ನೀತಿಯ ವಿಶ್ಲೇಷಕರಲ್ಲಿದೆ.

ಇದು ಕ್ಯಾಪಿಟಲಿಸಂ ಕಾಲ. ಮುಕ್ತ ಮಾರುಕಟ್ಟೆಯ ಪರಿಕಲ್ಪನೆಯಲ್ಲಿ ಸರ್ಕಾರಗಳಿಗೆ ಹೆಚ್ಚು ಪಾತ್ರವಿಲ್ಲ ಅನ್ನುವ ಮಾತುಗಳನ್ನು ಕೇಳುತ್ತಲೇ ಇರುತ್ತೇವೆ. ಆದರೆ ರಷ್ಯಾದ ವಿರುದ್ಧ ಪಶ್ಚಿಮದ ದೇಶಗಳು ನಿರ್ಬಂಧ ವಿಧಿಸಿದ ಮೂರ್ನಾಲ್ಕು ದಿನಗಳಲ್ಲೇ ರಷ್ಯಾದಲ್ಲಿ ವ್ಯಾಪಾರ ಮಾಡುತ್ತಿದ್ದ ಪಶ್ಚಿಮದ ದೇಶಗಳ ಇನ್ನೂರಕ್ಕೂ ಹೆಚ್ಚು ಕಂಪನಿಗಳು ರಾತ್ರೋರಾತ್ರಿ ರಷ್ಯಾ ತೊರೆದಿದ್ದನ್ನು ನೋಡಿದಾಗ ಮುಕ್ತ ಮಾರುಕಟ್ಟೆ, ಸರ್ಕಾರಗಳ ನಿಯಂತ್ರಣವಿಲ್ಲ ಅನ್ನುವುದೆಲ್ಲ ಸುಳ್ಳು, ಸಂದರ್ಭ ಬಂದರೆ ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಸರ್ಕಾರಗಳ ಆಣತಿಯಂತೆ ನಡೆದುಕೊಳ್ಳುತ್ತವೆ ಎಂದು ಸಾಬೀತಾಗುತ್ತಿದೆ. ಹೊರಗಡೆಯ ಬಂಡವಾಳವನ್ನು ಸೆಳೆಯುವುದೇ ದೇಶವನ್ನು ಮುನ್ನಡೆಸುವ ದಾರಿ ಎಂದು ನಂಬಿರುವ ನಮ್ಮ ರಾಜಕಾರಣಿಗಳು ಒಮ್ಮೆ ಈ ಬೆಳವಣಿಗೆಯನ್ನು ಸರಿಯಾಗಿ ಗಮನಿಸಬೇಕಿದೆ.

ಈ ಯುದ್ಧದ ಇನ್ನೊಂದು ಆಯಾಮವೆಂದರೆ, ಇದು ಸೋಷಿಯಲ್ ಮೀಡಿಯಾದ ಕಾಲದಲ್ಲಿ ನಡೆಯುತ್ತಿರುವ ಮೊದಲ ದೊಡ್ಡ ಸಂಘರ್ಷ. ಹೀಗಾಗಿ ಮಿಲಿಟರಿ ಕಾರ್ಯಾ-ಚರಣೆಯಷ್ಟೇ ಪ್ರಾಮುಖ್ಯತೆ ಸೋಷಿಯಲ್ ಮೀಡಿಯಾದ ಮೂಲಕ ಸುಳ್ಳು ಸುದ್ದಿ, ಪ್ರಚಾರಾಂದೋಲನಕ್ಕೂ ಬಂದಿದೆ. ತನ್ನ ಜನರನ್ನು ಯುದ್ಧಕ್ಕೆ ಒಪ್ಪಿಸಲು ಇದನ್ನು ರಷ್ಯಾ ಬಳಸಿದಷ್ಟೇ ಚೆನ್ನಾಗಿ ರಷ್ಯನ್ ಯುದ್ಧಾಪರಾಧವನ್ನು ಜಗತ್ತಿನ ಮುಂದಿಡಲು ಉಕ್ರೇನ್ ಕೂಡ ಬಳಸಿಕೊಳ್ಳುತ್ತಿದೆ.

ಪಾಶ್ಚಾತ್ಯ ದೇಶಗಳು ಮತ್ತು ರಷ್ಯಾದ ನಡುವಿನ ಈ ತಿಕ್ಕಾಟ ಹೇಗೆ ಕೊನೆಯಾಗಬಹುದು ಅನ್ನುವುದನ್ನು ಯಾರೂ ಊಹಿಸಲಾರರು. ಆದರೆ ಹರಕೆಯ ಕುರಿಯಂತೆ ಬಲಿಯಾದದ್ದು ಮಾತ್ರ ಉಕ್ರೇನ್ ಮತ್ತು ಅದರ ಸಾಮಾನ್ಯ ಜನರು. ಕೊನೆಗೆ ಎಲ್ಲ ಯುದ್ಧಗಳ ಕತೆಯೂ ಇದೇ ಅಲ್ಲವೇ?

ಚುರುಮುರಿ



ಮಾತಾಡೋ ಸ್ಪೀಕರು!

• ಬಿ.ಎನ್.ಮಲ್ಲೇಶ್

‘ಗುರೂ... ಸ್ಪೀಕರ್ ಸಾಹೇಬ್ರು ಶಾಸಕರನ್ನ ಸಿನಿಮಾಕ್ಕೆ ಕರೆದ್ರೆ ಬಹಳ ಜನ ಹೋಗ್ಲೇ ಇಲ್ಲಂತೆ. ಪಾಪ ಅವರು ಬಹಳ ಬೇಜಾರ್ ಮಾಡ್ಕಂಡ್ರಂತೆ’ ಗುಡ್ಡೆ ಪೇಪರಲ್ಲಿ ಬಂದಿದ್ದ ಸುದ್ದಿಯನ್ನ ತೆಪರೇಸಿಗೆ ತೋರಿಸಿದ.

‘ಅಯ್ಯೋ ಬೆಳಿಗ್ಗೆ ನನ್ ಹೆಂಡ್ತಿನೂ ಗಂಟು ಬಿದ್ದಿದ್ಲಪ್ಪ, ಪುನೀತ್‌ದು ಹೊಸ ಸಿನಿಮಾಕ್ಕೆ ಕರ್ಕೊಂಡ್ ಹೋಗಿ ಅಂತ. ರಶ್ ಕಡಿಮಿ ಆಗ್ಲಿ ತಡಿ ಅಂದಿದ್ಕೆ ಸಿಟ್ ಮಾಡ್ಕಂಡಿದ್ಲು’ ತೆಪರೇಸಿ ನಕ್ಕ.

‘ಸ್ಪೀಕರ್ ಮಾತು ಕೇಳದಿದ್ರೂ ನಡೀತತಿ, ಹೆಂಡ್ತಿ ಮಾತು ಕೇಳದಿದ್ರೆ ನಡೆಯಲ್ಲಲೆ ತೆಪರ...’ ಗುಡ್ಡೆ ಬುದ್ಧಿ ಹೇಳಿದ.

‘ಆತು ಬಿಡಪ, ಈಗ ಸ್ಪೀಕರ್ ಅಂದ್ರೆ ಏನು?’

‘ಮಾತಾಡೋರು ಅಂತ...’

‘ಆದ್ರೆ ಸ್ಪೀಕರ್ ಮಾತಾಡಲ್ಲ. ಬೇರೆಯವರನ್ನ ಮಾತಾಡಕೆ ಹಚ್ಚಿ ತಾವು ಕೇಳ್ತಾ ಕುಂತಿರ್ತಾರೆ... ವಿಚಿತ್ರ ಅಲ್ವಾ?’

‘ನನ್ ಪ್ರಕಾರ ವಿಧಾನಸಭೇಲಿ ಸ್ಪೀಕರು, ಮನೇಲಿ ಗಂಡಂದಿರು ಇಬ್ರೂ ಒಂದೇ, ಜಾಸ್ತಿ ಮಾತಾಡಂಗಿಲ್ಲ. ಮಾತು ಕೇಳಿಸ್ಕಾಬೇಕು ಅಷ್ಟೆ...’

‘ಸ್ಪೀಕರು ಮಾತಾಡದಿದ್ರೂ ಅವರಿಗೆ ಶಾಸಕರನ್ನ ಹೊರಗೆ ಹಾಕೋ ಪವರ್ ಐತಿ, ನಿನಗೆ, ಐ ಮೀನ್ ಗಂಡಂದಿರಿಗೆ ಆ ಪವರ್ ಐತಾ?’ ತೆಪರೇಸಿ ಪ್ರಶ್ನೆ.

‘ಪವರ್ರಾ? ನಮ್ದು ಯಾವಾಗ್ಲು ಲೋಡ್ ಶೆಡ್ಡಿಂಗು...’

‘ಗೊತ್ತು ಬಿಡು, ನೀನು ಹೆಂಡ್ತಿ ಮುಂದೆ ಪಿಟಿಕ್ ಅನ್ನಲ್ಲ. ಮೌನಂ ಸೇಫೆಸ್ಟ್ ಸಾಧನಂ...’

‘ನೀನೇನ್ ಮಹಾ ಶೂರನಾ? ಮೊದ್ಲು ಪಮ್ಮಿನ ಸಿನಿಮಾಕ್ಕೆ ಕರ್ಕೊಂಡು ಹೋಗು, ಇಲ್ಲಾಂದ್ರೆ ರಾತ್ರಿ ಲೇಟಾಗ್ ಬಂದಾಗ ಬಾಗಿಲ ಹೊರಗೇ ಭಾಷಣ ಕೇಳ್ಬೇಕಾಗುತ್ತೆ...’ ಗುಡ್ಡೆ ನಕ್ಕ.

‘ನನ್ ಪ್ರಕಾರ ಹೆಂಡತಿಯರೂ ಸ್ಪೀಕರ್ ತರಾನೇ. ಆದ್ರೆ ಒಂದು ವ್ಯತ್ಯಾಸ’.

‘ಏನು?’

‘ಇವರು ಮಾತಾಡೋ ಸ್ಪೀಕರ್‌ಗಳು!’

ಸಂಗತ

ಹಿಜಾಬ್: ಎಷ್ಟೊಂದು ಗಲಭೆ!

ತರಗತಿಯಲ್ಲಿ ಕುಳಿತು ಬೋಧನೆ ಕೇಳಲು ಒಂದು ವಿಶಿಷ್ಟ ವಸ್ತ್ರಸಂಹಿತೆ ಏಕೆ ಇರಬೇಕು ಎಂಬುದು ಅರ್ಥವಾಗದ ಸಂಗತಿ

• ಡಾ. ಸಿ.ಎನ್.ರಾಮಚಂದ್ರನ್

ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಹಿಜಾಬ್ ಧರಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ಕೊಟ್ಟಿರುವ ತೀರ್ಪಿನ ವಿವರಗಳನ್ನು ಓದುತ್ತಿದ್ದಾಗ, ಕೆಲವು ವಿವರಗಳು ನನ್ನನ್ನು ತುಂಬಾ ಗೊಂದಲಕ್ಕೆ ಈಡು ಮಾಡಿದವು. ನಾನೇನೂ ಕಾನೂನು ತಜ್ಞನಲ್ಲ, ಕೋರ್ಟ್‌ಗಳಲ್ಲಿ ವಾದ ಮಾಡುವ ವಕೀಲಿ ವೃತ್ತಿಯೂ ನನ್ನದಲ್ಲ. ಭಾರತೀಯ ಕಾನೂನುಗಳ ಬಗ್ಗೆ ಆಸಕ್ತಿ ಇರುವುದರಿಂದ, ನನ್ನ ಗೊಂದಲವನ್ನು ಪ್ರಾಜ್ಞರು ದೂರ ಮಾಡಬಹುದೆಂಬ ನಿರೀಕ್ಷೆಯಿಂದ ಮಾತ್ರ ಕೆಳಗಿನ ಕೆಲವು ಸಂಗತಿಗಳನ್ನು ಪ್ರಸ್ತಾಪಿಸುತ್ತಿದ್ದೇನೆ.

ಮತ್ತೂ ಒಂದು ಮಾತು ಹೇಳಿ ಮುಂದು-ವರಿಯುತ್ತೇನೆ: ತಾತ್ವಿಕ ನೆಲೆಯಲ್ಲಿ, ಸ್ತ್ರೀಯರು ಹಿಜಾಬ್ ಧರಿಸಲೇಬೇಕು, ಪರದಾ ಪದ್ಧತಿಯನ್ನು ಪಾಲಿಸಲೇಬೇಕು, ಗಂಭೀರ- ಧಾರ್ಮಿಕ ಕಾರ್ಯ-ಕ್ರಮಗಳಲ್ಲಿ ಸ್ತ್ರೀಯರು ಸೀರೆಯನ್ನೇ ಉಡಬೇಕು ಇತ್ಯಾದಿ ವಿಧಿ-ನಿಷೇಧಗಳು ಸ್ತ್ರೀಯರ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಪಿತೃಕೇಂದ್ರಿತ ವ್ಯವಸ್ಥೆಗಳು ಯಾವುದೋ ಒಂದು ಕಾಲಘಟ್ಟದಲ್ಲಿ ಜಾರಿಗೆ ತಂದವುಗಳು. ಅವು ಇಂದಿನ ಸಮಾಜಕ್ಕೆ ಪ್ರಸ್ತುತ-ವಲ್ಲ ಎಂಬುದು ನನ್ನ ನಿಲುವು. ಆದರೆ ಈಗೊಂದು ತಿಂಗಳಿನಿಂದ ಹಿಜಾಬ್ ಕುರಿತಾಗಿ ಆಗುತ್ತಿರುವ ವಾದ ವಿವಾದಗಳ ಸಂದರ್ಭಗಳೇ ಬೇರೆ ಎಂದು ನನಗೆ ಕಾಣುತ್ತದೆ.

ಮೊದಲನೆಯದಾಗಿ, ‘ಹಿಜಾಬ್ ಅತ್ಯವಶ್ಯಕ ಧಾರ್ಮಿಕ ಆಚರಣೆಯಲ್ಲ’ ಎಂಬ ನಿರ್ಧಾರವನ್ನು ಒಪ್ಪಿದರೂ, ಹಿಜಾಬ್‌ಗೆ ಸಂಬಂಧಿಸಿದ ಈ ಮೊಕ-ದ್ದಮೆಯಲ್ಲಿ ಉತ್ತರಿಸಬೇಕಾದ ಪ್ರಶ್ನೆ ಅದಲ್ಲವೇ ಅಲ್ಲ ಎಂದು ನನಗನಿಸುತ್ತದೆ. ‘ಹಿಜಾಬ್ ಧರಿಸಿಕೊಂಡು ತರಗತಿಯಲ್ಲಿ ಕೂಡಬಹುದೆ ಅಥವಾ ಇಲ್ಲವೆ’ ಎನ್ನುವುದು ಪ್ರಶ್ನೆ. ಬೋಧನೆ, ಪಠ್ಯಗಳು ಮತ್ತು ಪ್ರಶ್ನೆಪತ್ರಿಕೆಗಳು ಸಮಾನವಾಗಿರುವಾಗ, ತರಗತಿಯಲ್ಲಿ ಕುಳಿತು ಬೋಧನೆಯನ್ನು ಕೇಳಲು ಮತ್ತು ಪರೀಕ್ಷೆಗಳಲ್ಲಿ ಉತ್ತರಿಸಲು ಒಂದು ವಿಶಿಷ್ಟ ವಸ್ತ್ರಸಂಹಿತೆ ಏಕೆ ಇರಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ.

ನಾನು ನನ್ನ ಶಿಕ್ಷಣ ಕಾಲದಲ್ಲಿ ಬಿ.ಎ. ಆನರ್ಸ್ ಸೇರಿದಂತೆ ಎಲ್ಲಾ ಘಟ್ಟದ ತರಗತಿಗಳಿಗೂ ಪಂಚೆ-ಶರ್ಟ್ ಅಥವಾ ಪೈಜಾಮ-ಶರ್ಟ್ ಮತ್ತು ಚಪ್ಪಲಿಯನ್ನು ಧರಿಸಿಯೇ ಹೋಗುತ್ತಿದ್ದೆ– ಧಾರ್ಮಿಕ ಕಾರಣದಿಂದಲ್ಲ, ನನಗೆ ಪ್ಯಾಂಟ್-ಸೂಟ್ ಹಾಕಲು ಹಣವಿರಲಿಲ್ಲ ಎಂಬ ಒಂದೇ ಕಾರಣಕ್ಕೆ. ಆಗ ಯಾವ ಘಟ್ಟದಲ್ಲಿಯೂ ಶಿಕ್ಷಕರಾಗಲಿ, ಸಹ-ವಿದ್ಯಾರ್ಥಿಗಳಾ-ಗಲಿ ಯಾರೂ ಆ ಉಡುಪನ್ನು ಆಕ್ಷೇಪಿಸುತ್ತಿರಲಿಲ್ಲ. ಈಗ ಕಾಲ ಬದಲಾಗಿದೆ ಎಂದರೂ ನಾವು ಹಾಕುವ ಬಟ್ಟೆಗೂ ನಮ್ಮ ಶಿಕ್ಷಣಕ್ಕೂ ನಿಕಟ ಸಂಬಂಧವಿದೆ ಎಂದು ನನಗೆ ನಂಬಲಾಗುವುದಿಲ್ಲ.

ಹಾಗೆಯೇ, ‘ಮೇಲು-ಕೀಳು, ಬಡವ-ಶ್ರೀಮಂತ ಎಂಬ ತರತಮಗಳನ್ನು ತೊರೆದು ವಿದ್ಯಾರ್ಥಿಗಳು ಅನುಶಾಸನದ ಶಿಕ್ಷಣ ಪಡೆಯಲಿ ಎಂಬ ಉದ್ದೇಶದಿಂದಲೇ ಸಮವಸ್ತ್ರ ಸಂಹಿತೆ ಇದೆ’ ಎಂಬ ಹೇಳಿಕೆ ಚರ್ಚಾರ್ಹ. ಸಮವಸ್ತ್ರ (ಯೂನಿಫಾರ್ಮ್) ಧರಿಸಿದ ಮಾತ್ರಕ್ಕೆ ಮಕ್ಕಳಲ್ಲಿ ಅಥವಾ ವಯಸ್ಕರಲ್ಲಿ ಸರ್ವ ಸಮಾನ ಭಾವನೆ ಹುಟ್ಟುತ್ತದೆ ಎಂಬ ವಾದ ಸತ್ಯದೂರವೆಂದು 40 ವರ್ಷಗಳ ಕಾಲ ಭಿನ್ನ ವಿದ್ಯಾ-ಸಂಸ್ಥೆಗಳಲ್ಲಿ ಹಾಗೂ ಭಿನ್ನ ದೇಶಗಳಲ್ಲಿ ಶಿಕ್ಷಕನಾಗಿ ದುಡಿದಿರುವ ನನಗೆ ಅನುಭವವೇದ್ಯವಾಗಿದೆ. ಪ್ರಾಥಮಿಕ ಶಾಲಾ ಮಕ್ಕಳು ಕೂಡಾ ಯೂನಿಫಾರ್ಮ್ ಧರಿಸಿಯೂ ಕೆಲ ಮಕ್ಕಳು ಕಾರಿನಲ್ಲಿ ಅಥವಾ ಬೈಕ್‌ಗಳಲ್ಲಿ ಅಥವಾ ಬಸ್‌ಗಳಲ್ಲಿ ಶಾಲೆಗೆ ಬರುವುದನ್ನು ಮತ್ತು ಶಾಲೆಯಿಂದ ಮನೆಗೆ ಮರಳುವುದನ್ನು ಗಮನಿಸುತ್ತಾರೆ. ಶಾಲೆಯಿಂದ ಟ್ರಿಪ್ ಹೋಗುವಾಗ, ಟ್ರಿಪ್‌ಗೆ ಕೊಡಬೇಕಾದ ಹಣ ಇಲ್ಲದೆ ಟ್ರಿಪ್‌ಗೆ ಹೋಗದೇ ಉಳಿಯುವವರು ತಮ್ಮ ಹಾಗೂ ಇತರರ ನಡುವೆ ಇರುವ ಅಗಾಧ ವ್ಯತ್ಯಾಸವನ್ನು ಗ್ರಹಿಸುತ್ತಾರೆ. ಇನ್ನು ಹೈಸ್ಕೂಲ್-ಕಾಲೇಜು ವಿದ್ಯಾರ್ಥಿಗಳು ‘ಇಂಗ್ಲಿಷ್ ಚೆನ್ನಾಗಿ ಮಾತನಾಡುವವರು- ಇಂಗ್ಲಿಷ್ ಬಾರದವರು’, ಸ್ಮಾರ್ಟ್‌ಫೋನ್ ಇರುವವರು-ಅದಿಲ್ಲದವರು, ಉಳ್ಳವರು- ಬಡವರು ಇತ್ಯಾದಿ ಅಸಮಾನತೆಯ ವಿವಿಧ ಪದರುಗಳನ್ನು ಅನುಭವಿ-ಸುತ್ತಾರೆ. ಪರಿಣಾಮವಾಗಿ, ಒಂದು ಬಗೆಯ ‘ಉಚ್ಚ ಭಾವನೆ’ಯಿಂದ ತಲೆ ಎತ್ತಿ ತಿರುಗುತ್ತಾರೆ ಅಥವಾ ‘ನೈಚ್ಯ ಭಾವನೆ’ಯಿಂದ ನರಳುತ್ತಾರೆ. ಇವಾವುದನ್ನೂ ‘ಸಮಾನ ವಸ್ತ್ರಸಂಹಿತೆ’ ಪರಿಹರಿಸುವುದಿಲ್ಲ.



ಕೊನೆಯದಾಗಿ ಒಂದು ನೆನಪು. 35-40 ವರ್ಷಗಳ ಹಿಂದಿನ ಘಟನೆ. ಬೆಂಗಳೂರಿನ ಒಂದು ಕಾನ್ವೆಂಟ್ ಸ್ಕೂಲಿನಲ್ಲಿ ಹಿಂದೂ ಹುಡುಗಿಯೊಬ್ಬಳು ಒಮ್ಮೆ ಹಣೆಗೆ ಕುಂಕುಮವಿಟ್ಟು ಶಾಲೆಗೆ ಬಂದಿದ್ದಳು. ಈ ಸುದ್ದಿ ಸ್ಕೂಲಿನ ಹೆಡ್ ಮಿಸ್ಟ್ರೆಸ್‌ಗೆ ಮುಟ್ಟಿದಾಗ, ಅವರು ಕೂಡಲೇ ತರಗತಿಗೆ ಬಂದು, ಕುಂಕುಮ ಧರಿಸಿ ತರಗತಿಗೆ ಬರುವುದು ಅವರ ಶಾಲೆಯ ತತ್ವಗಳಿಗೆ ವಿರುದ್ಧವೆಂದು ಹೇಳುತ್ತಾ, ಆಕೆಯ ಹಣೆಯನ್ನು ಒರೆಸಿ, ಶಾಲೆಯ ಶಿಸ್ತನ್ನು ಮುರಿದುದಕ್ಕಾಗಿ ಶಿಕ್ಷೆಯೆಂದು, ಅಳುತ್ತಿದ್ದ ಆ ಹುಡುಗಿಯನ್ನು ಅರ್ಧ ದಿವಸ ಬೆಂಚಿನ ಮೇಲೆ ನಿಲ್ಲಿಸಿದ್ದರು. ಮರುದಿನ ಈ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದ ಪೋಷಕರು, ಕನ್ನಡ ಸಂಸ್ಥೆಗಳು ಇತ್ಯಾದಿ ಅನೇಕರು ಶಾಲೆಗೆ ನುಗ್ಗಿ, ಹೆಡ್ ಮಿಸ್ಟ್ರೆಸ್ ಎಲ್ಲಾ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಆ ಹುಡುಗಿಯ ಕ್ಷಮೆ ಕೇಳುವಂತೆ ಮಾಡಿದರು.

ಆ ಸುದ್ದಿಯ ಬಗ್ಗೆ ನಾನೊಂದು ಲೇಖನವನ್ನು ‘ಮುಂಗಾರು’ ಪತ್ರಿಕೆಗೆ ಬರೆದಿದ್ದೆ. ಅದರ ಕೊನೆಯ ಸಾಲು, ‘ಅತಿ ಚಿಕ್ಕ ವಿಷಯಕ್ಕೆ ಎಷ್ಟೊಂದು ಗಲಭೆ! ತಿಗಣೆ ಕೊಲ್ಲಲು ಸುತ್ತಿಗೆ ತೆಗೆದುಕೊಂಡಂತೆ’ ಎಂದಿತ್ತು. ಇಂದು ಹಿಜಾಬ್ ವಿವಾದದ ಬಗ್ಗೆಯೂ ನನಗೆ ಹಾಗೇ ಅನಿಸುತ್ತದೆ.

ವಾಚಕರ ವಾಣಿ

ಕೈ ಬಿಸಿ ಮಾಡಬೇಕಿತ್ತು!

‘ಆರ್‌ಟಿಒ ಕೂಟ: ದಲ್ಲಾಳಿಗಳದ್ದೇ ಆಟ’ ಎಂಬ ವಿಶೇಷ ವರದಿಯನ್ನು (ಪ್ರ.ವಾ., ಮಾರ್ಚ್ 14) ಓದಿದ ಮೇಲೆಯೇ ನನಗೆ ತಿಳಿದದ್ದು, ನನ್ನ ಚಾಲನಾ ಪರವಾನಗಿ ಯಾಕೆ ಇನ್ನೂ ನನ್ನ ಕೈಗೆ ತಲುಪಿಲ್ಲ ಎಂಬುದು. ಚಾಲನಾ ಪರೀಕ್ಷೆ ಪಾಸ್ ಆಗಿ ಎರಡು ತಿಂಗಳಾಯಿತು. ಆದರೂ ಪರವಾನಗಿಗೆ ಕಾಯುವುದೇ ಆಗಿದೆ. ಅಂಚೆಯ ಮೂಲಕ ಅದನ್ನು ಕಳುಹಿಸಲು ಇಷ್ಟು ಸಮಯ ಬೇಕೇ? ಇದರ ಅರ್ಥ, ನಾನು ಆರ್‌ಟಿಒ ಕಚೇರಿ ಸಿಬ್ಬಂದಿಯ ‘ಕೈ ಬಿಸಿ’ ಮಾಡಬೇಕಿತ್ತು! ಎಂಥ ವಿಪರ್ಯಾಸ ಇದು? ಇಂತಹ ಸ್ಥಿತಿಗೆ ಕೊನೆ ಇಲ್ಲವೇ?

ವಿಜಯ್ ಶಂಕರ್, ಚಾಮರಾಜಪೇಟೆ

ಪರೀಕ್ಷೆಗಳ ದಿನಾಂಕ: ಘರ್ಷಣೆ ತಪ್ಪಿಸಿ

ದೇಶದಾದ್ಯಂತ ಹನ್ನೆರಡನೇ ತರಗತಿಯ ಪರೀಕ್ಷೆಗಳು ಮೊದಲೇ ನಿಗದಿಯಾಗಿ ಇನ್ನೇನು ಪ್ರಾರಂಭವಾಗ-ಲಿವೆ. ವೃತ್ತಿನಿರತ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯ ದಿನಾಂಕಗಳೂ ಒಂದರ ಹಿಂದೊಂದು ಪ್ರಕಟಗೊಳ್ಳುತ್ತಿವೆ ಮತ್ತು ಒಂದಕ್ಕೊಂದು ಕ್ಲ್ಯಾಶ್ ಆಗುತ್ತಿವೆ. ರಾಜ್ಯದ ಖಾಸಗಿ ಎಂಜಿನಿಯರಿಂಗ್ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಕಾಮೆಡ್-ಕೆ ಪರೀಕ್ಷೆ ಜೂನ್ 19ಕ್ಕೆ ನಡೆಯಲಿದೆ. ಆದರೆ ಅದೇ ದಿನ ನ್ಯಾಷನಲ್ ಲಾ ಯೂನಿವರ್ಸಿಟಿಯ ಪ್ರವೇಶ ಪರೀಕ್ಷೆ ಕ್ಲಾಟ್– ಕಾಮನ್ ಲಾ ಅಡ್ಮಿಶನ್ ಟೆಸ್ಟ್ ಕೂಡಾ ನಿಗದಿಯಾಗಿದೆ. ದ್ವಿತೀಯ ಪಿಯು ನಂತರ ಎರಡೂ ಪ್ರವೇಶ ಪರೀಕ್ಷೆಗಳನ್ನು ಬರೆಯಬೇಕೆನ್ನುವ ವಿದ್ಯಾರ್ಥಿಗಳಿಗೆ ಇದರಿಂದ ತೀವ್ರ ತೊಂದರೆಯಾಗಲಿದೆ.

ಕೆಲವು ವಾರಗಳ ಹಿಂದೆ ರಾಜ್ಯದ ದ್ವಿತೀಯ ಪಿಯು ಪರೀಕ್ಷೆಗಳು ಏಪ್ರಿಲ್ 16ರಿಂದ ಪ್ರಾರಂಭವಾಗುತ್ತವೆ ಎಂದು ಪ್ರಕಟಿಸಲಾಗಿತ್ತು. ಅದೇ ದಿನ ರಾಷ್ಟ್ರಮಟ್ಟದ ಜೆಇಇ ಪರೀಕ್ಷೆ ನಡೆಯುತ್ತದೆ ಎಂಬ ಪ್ರಕಟಣೆ ಹೊರಬಿದ್ದಿತು. ಆಗ ರಾಷ್ಟ್ರಮಟ್ಟದ ಪರೀಕ್ಷೆಗೆ ದಾರಿ ಮಾಡಿಕೊಡಲು, ರಾಜ್ಯದ ಪಿಯು ಪರೀಕ್ಷೆಗಳನ್ನು ಮುಂದೂಡಿ ಏಪ್ರಿಲ್ 22ಕ್ಕೆ ನಿಗದಿ ಮಾಡಲಾಯಿತು. ಈಗ ಜೆಇಇ ಪರೀಕ್ಷೆ ನಡೆಸುವ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ಮತ್ತೊಮ್ಮೆ ಪರೀಕ್ಷೆ ಮುಂದೂಡಿ ಏಪ್ರಿಲ್ 21ಕ್ಕೆ ಪ್ರಾರಂಭಿಸಲು ನಿರ್ಧರಿಸಿದೆ. ಪಿಯು ಪರೀಕ್ಷೆಗಳು ಮತ್ತೆ ಮುಂದಕ್ಕೆ ಹೋಗಬಹುದು ಎಂಬ ಆತಂಕ ವಿದ್ಯಾರ್ಥಿಗಳಿಗೆ ಎದುರಾಗಿದೆ. ಹೀಗೆ ಪದೇ ಪದೇ ದಿನಾಂಕಗಳು ಬದಲಾದರೆ ವಿದ್ಯಾರ್ಥಿಗಳು ಗೊಂದಲಕ್ಕೆ ಬೀಳುವುದಿಲ್ಲವೇ? ಪರೀಕ್ಷೆ ನಡೆಸುವ ಸಂಸ್ಥೆಗಳು, ಸರ್ಕಾರದ ಇಲಾಖೆಗಳು ವಿವಿಧ ಪರೀಕ್ಷೆಗಳ ದಿನಾಂಕಗಳು ಒಂದೇ ಸಮಯದಲ್ಲಿ ಬಾರದಂತೆ ನಿಗದಿ ಮಾಡಲು ಅನುಕೂಲವಾಗುವ ಡೇಟಾಪೂಲ್ (ದತ್ತಾಂಶ ಕಣಜ) ಹೊಂದಿದ್ದರೆ ಇಂಥ ಅವಾಂತರ ತಪ್ಪಿಸಬಹುದಲ್ಲವೇ?

ಗುರುರಾಜ್ ಎಸ್. ದಾವಣಗೆರೆ, ಬೆಂಗಳೂರು

ಭಾಷಾಭಿಮಾನ: ವೈಜ್ಞಾನಿಕ ನಿಲುವಿರಲಿ

‘ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪುಸ್ತಕ ಮಳಿಗೆಗಳಲ್ಲಿ ಕನ್ನಡ ಹೊರತುಪಡಿಸಿ ಅನ್ಯ ಭಾಷೆಯ ಪುಸ್ತಕಗಳಿಗೆ ಅವಕಾಶ ನೀಡುವುದಿಲ್ಲ’ ಎಂಬ ಹೇಳಿಕೆ ನೀಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕನ್ನಡ ಭಾಷೆಯ ಬಗ್ಗೆ ತಮ್ಮಲ್ಲಿರುವ ಸಂಕುಚಿತ ಮನೋಭಾವ ಮತ್ತು ಭಾಷಾ ಮೌಢ್ಯವನ್ನು ಅನಾವರಣಗೊಳಿಸಿದ್ದಾರೆ. ಒಂದು ಭಾಷೆಯ ಬೆಳವಣಿಗೆ ಮತ್ತು ಉನ್ನತಿಯು ಬೇರೊಂದು ಭಾಷೆಯೊಂದಿಗಿನ ತನ್ನ ಕೊಡು-ಕೊಳ್ಳುವಿಕೆ-ಯನ್ನು ಅವಲಂಬಿಸಿರುತ್ತದೆ ಎನ್ನುವ ಭಾಷಾಶಾಸ್ತ್ರಜ್ಞರ ವೈಜ್ಞಾನಿಕ ನಿಲುವನ್ನು ತಿಳಿಹೇಳಬೇಕಾದ ಅನಿವಾರ್ಯ ಬಂದೊದಗಿದೆ. ಬಿಎಂಶ್ರೀ ಅವರ ‘ಇಂಗ್ಲಿಷ್ ಗೀತಗಳು’ ಕನ್ನಡ ಕಾವ್ಯವು ಹೊಸಮಾರ್ಗವನ್ನು ಸೃಷ್ಟಿಸಿಕೊಳ್ಳಲು ಹೇಗೆ ಕಾರಣವಾಯಿತು ಎನ್ನುವುದನ್ನು ಮತ್ತೊಮ್ಮೆ ನಾವು ಮನಗಾಣಬೇಕಾಗಿದೆ.

ತೆಲುಗು, ಮರಾಠಿ, ತಮಿಳು ಮತ್ತಿತರ ಭಾಷೆಗಳ ಸೊಗಡನ್ನು ನಮ್ಮ ಸಾಹಿತಿಗಳು ಕನ್ನಡಕ್ಕೆ ತಂದಿದ್ದು ಮತ್ತು ಕನ್ನಡದಿಂದ ಆ ಭಾಷೆಗಳಿಗೆ ಕೊಟ್ಟಿದ್ದನ್ನು ನಾವಿಲ್ಲಿ ಸ್ಮರಿಸಬೇಕು. ಇಷ್ಟಾಗಿಯೂ ಬೇರೆ ಭಾಷೆಯ ಪುಸ್ತಕಗಳಿಗೆ ಅವಕಾಶವಿಲ್ಲ ಎನ್ನುವುದು ಎಷ್ಟು ಸರಿ? ಅಧ್ಯಕ್ಷರು ತಮ್ಮ ಹೇಳಿಕೆಯನ್ನು ಬದಲಿಸಿ, ‘ಕನ್ನಡ ಜಾತ್ರೆಗೆ ಬರುವ ಕನ್ನಡ ಸಹೃದಯರೇ, ನಿಮಗೊಂದು ಮತ್ತು ನಿಮ್ಮವರಿಗೊಂದು ಕನ್ನಡ ಪುಸ್ತಕವನ್ನು ಕೊಂಡುಕೊಳ್ಳಿ’ ಎಂದು ಹೇಳಿದ್ದರೆ ಅರ್ಥಪೂರ್ಣವಾಗುತ್ತಿತ್ತೇನೊ?

ಎಚ್.ವಿ.ಪ್ರಕಾಶ್, ರಟ್ಟೀಹಳ್ಳಿ

ಎಸಿಬಿ ದಾಳಿ: ಪರಿಣಾಮ ಮುಖ್ಯ

ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರಾಜ್ಯದಲ್ಲಿ 18 ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ದಾಳಿ ಮಾಡಿ, ಅವರ ಬಳಿ ಅಪಾರ ಪ್ರಮಾಣದ ನಗದು, ಚಿನ್ನ ಹಾಗೂ ಇತರ ಆಸ್ತಿ ಇರುವುದನ್ನು ಪತ್ತೆ ಮಾಡಿದೆ. ಈ ಕ್ರಮವು ಸಾರ್ವಜನಿಕರಿಂದ ಮೆಚ್ಚುಗೆ ಪಡೆದಿರಲೂ ಸಾಕು. ಆದರೆ ಅದು ಭ್ರಷ್ಟಾಚಾರ ತಡೆಯುವಲ್ಲಿ ಸಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡುವುದರ ಬಗ್ಗೆ ಅನುಮಾನಗಳು ಹುಟ್ಟುತ್ತವೆ.

ಈ ಬಗೆಯ ದಾಳಿಗಳ ಆರಂಭದ ಹಂತದ ವಿಷಯ ಮಾತ್ರ ಸಾರ್ವಜನಿಕರ ಗಮನಕ್ಕೆ ಮಾಧ್ಯಮಗಳ ಮೂಲಕ ಬರುತ್ತದೆ. ನಂತರ ಜರುಗಿಸಿದ ಕ್ರಮಗಳ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಈ ಮಾಹಿತಿಯನ್ನು ಇಲಾಖೆಯು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದರೆ ಎಸಿಬಿಯ ಕ್ರಮದ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಇಲ್ಲವಾದಲ್ಲಿ ಇದೊಂದು ಪ್ರಚಾರದ ಭಾಗವಾಗಬಹುದು. ಎಸಿಬಿಯ ಇಂತಹ ದಾಳಿಗಳು ದೂರುಗಳನ್ನು ಆಧರಿಸಿಯೇ ಇರುತ್ತವೆ. ಅಧಿಕಾರಿಗಳು ದೊಡ್ಡ ಪ್ರಮಾಣದ ಅಕ್ರಮ ಆಸ್ತಿ ಸಂಗ್ರಹಿಸಿರುವ ಮಾಹಿತಿ ಅವರ ಇಲಾಖಾ ಮೇಲಧಿಕಾರಿಗಳ ಗಮನಕ್ಕೆ ಬರುವುದಿಲ್ಲವೇ? ಆರಂಭಿಕ ಹಂತದಲ್ಲಿಯೇ ಈ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಿದಲ್ಲಿ ಅವರು ದೊಡ್ಡ ಪ್ರಮಾಣದ ಅಕ್ರಮ ಆಸ್ತಿ ಸಂಗ್ರಹಿಸುವುದನ್ನು ಮತ್ತು ಜನರ ಲೂಟಿ ಮಾಡುವುದನ್ನು ತಡೆಯಬಹುದಲ್ಲವೇ? ಇಂತಹ ದಾಳಿಗಳು ನಿರಂತರವಾಗಿ ಹೆಚ್ಚುತ್ತಿರುವುದು ಆಡಳಿತ ವೈಫಲ್ಯಕ್ಕೆ ಸಾಕ್ಷಿಯನ್ನು ಒದಗಿಸುತ್ತವೆ.


ಸಂಗಯ್ಯ ಅ. ಹಿರೇಮಠ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೀಸಲಾತಿ ಬಡತನ ನಿರ್ಮೂಲನೆ ಕಾರ್ಯಕ್ರಮ ಅಲ್ಲ

ಅಭಿವೃದ್ಧಿ ಎನ್ನುವುದು ವರಮಾನದ, ಬಂಡವಾಳದ, ಉತ್ಪಾದನೆಯ ಪ್ರಶ್ನೆಯಲ್ಲ. ಇವೆಲ್ಲವೂ ಅಭಿವೃದ್ಧಿಯ ಸಾಧನಗಳು. ಜನರು ಘನತೆಯಿಂದ ಬದುಕುವುದನ್ನು ಸಾಧ್ಯ ಮಾಡಿಕೊಡುವುದೇ ಅಭಿವೃದ್ಧಿ. ಮೀಸಲಾತಿಯು ಮೂಲತಃ ಸಾಮಾಜಿಕವಾದುದೇ ವಿನಾ ಯಾವುದೇ ಕಾರಣಕ್ಕೂ ಇದನ್ನು ಆರ್ಥಿಕ ನೆಲೆಯಲ್ಲಿ ನೋಡುವುದು ಸರಿಯಲ್ಲ. ಮೀಸಲಾತಿಯು ಆರ್ಥಿಕ ಅಥವಾ ಬಡತನ ನಿವಾರಣಾ ಕಾರ್ಯಕ್ರಮವಲ್ಲ. ಈ ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಗಳಿಗೆ ಮೀಸಲಾತಿ ನೀಡುವ ಕ್ರಮದ ಬಗ್ಗೆ ಎತ್ತಿರುವ ಪ್ರಶ್ನೆಗಳನ್ನು ಪರಿಶೀಲಿಸಬೇಕಾಗುತ್ತದೆ

■ ಟಿ.ಆರ್. ಚಂದ್ರಶೇಖರ



ನಮ್ಮದು ಮೂಲತಃ ಜಾತಿ ವ್ಯವಸ್ಥೆಯ ಸಮಾಜ. ಜಾತಿ ವ್ಯವಸ್ಥೆಯಲ್ಲಿ ಶ್ರೇಣೀಕರಣವಿದೆ, ತಾರತಮ್ಯವಿದೆ. ಉನ್ನತ ಜಾತಿಗಳಿವೆ; ಕೆಳಜಾತಿಗಳಿವೆ. ಇವೆರಡರ ನಡುವೆ ಮಧ್ಯಮ ಜಾತಿಗಳಿವೆ. ಈ ಮಧ್ಯಮ ಜಾತಿಗಳನ್ನೇ 'ಇತರ ಹಿಂದುಳಿದ ಜಾತಿಗಳು' (ಒಬಿಸಿಗಳು) ಎಂದು ಕರೆಯಲಾಗಿದೆ. ಈ ಒಬಿಸಿಗಳಿಗೆ ಒಕ್ಕೂಟ ಸರ್ಕಾರದ ಇಲಾಖೆಗಳಲ್ಲಿ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ಶೇ 27ರಷ್ಟು ಮೀಸಲಾತಿ ನೀಡುವ ಕ್ರಮ 1992ರಲ್ಲಿ ಜಾರಿಗೆ ಬಂದಿತು. ಇದು ರಾಜ್ಯ ಮಟ್ಟಕ್ಕೂ ವಿಸ್ತರಣೆಯಾಗಿದೆ.

ಶಿಕ್ಷಣದಲ್ಲಿ ಮೀಸಲಾತಿ ನೀಡುವ ಕ್ರಮವೂ ಜಾರಿಯಲ್ಲಿದೆ. ಸಂವಿಧಾನದ 73 ಮತ್ತು 74ನೆಯ ತಿದ್ದುಪಡಿ ನಂತರ ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಗಳಿಗೆ ಮೀಸಲಾತಿ ನೀಡುವ ಕ್ರಮ ರಾಜ್ಯ ಮಟ್ಟದಲ್ಲಿ ವಿವಿಧ ಹಂತಗಳಲ್ಲಿ ಆರಂಭವಾಯಿತು. ಇದೀಗ ನಗರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಗಳಿಗೆ ಮೀಸಲಾತಿ ನೀಡುವುದರ ಬಗ್ಗೆ ಸುಪ್ರೀಂ ಕೋರ್ಟ್ ಅನೇಕ ಪ್ರಶ್ನೆಗಳನ್ನು ಎತ್ತಿದೆ. ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ನಿಖರವಾದ ಅಂಕಿಅಂಶಗಳೊಂದಿಗೆ ಗುರುತಿಸಿದ ನಂತರವೇ ಮೀಸಲಾತಿ ನಿಗದಿ ಮಾಡಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ವಾಸ್ತವಿಕ ದತ್ತಾಂಶಗಳು ಲಭ್ಯವಾಗುವವರೆಗೆ ಮೀಸಲಾತಿಯನ್ನು ನ್ಯಾಯಾಲಯವು ತಡೆಹಿಡಿದಿದೆ. ಇದು ರಾಜ್ಯ ಸರ್ಕಾರಗಳಿಗೆ ನುಂಗಲಾರದ ತುತ್ತಾಗಿದೆ. ಮಹಾರಾಷ್ಟ್ರದ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿ ಮೀಸಲಾತಿಗೆ ಸಂಬಂಧಿಸಿದಂತೆ ಎಲ್ಲಿಯವರೆಗೆ ಈ ಮೂರು ಮಾನದಂಡಗಳನ್ನು ಸರ್ಕಾರವು ಅನುಸರಿಸುವುದಿಲ್ಲವೋ ಅಲ್ಲಿಯವರೆಗೆ ಒಬಿಸಿಗಳಿಗೆ ಮೀಸಲಾತಿ ಅವಕಾಶ ನೀಡಿ ಚುನಾವಣೆ ನಡೆಸುವುದನ್ನು ನ್ಯಾಯಾಲಯ ತಡೆಹಿಡಿದಿದೆ. ಈ ಮಾಹಿತಿ ಲಭ್ಯವಿಲ್ಲದೇ ಇದ್ದರೆ, ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮೀಸಲು ವಾರ್ಡ್‌ಗಳನ್ನು ಸಾಮಾನ್ಯ ವಾರ್ಡ್ ಎಂದೇ ಪರಿಗಣಿಸಿ ಚುನಾವಣೆ ನಡೆಸಲು ಮಹಾರಾಷ್ಟ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಈ ನಿರ್ದೇಶನ ದೇಶದ ಎಲ್ಲ ಭಾಗಗಳಿಗೂ ಅನ್ವಯವಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ.

ಒಬಿಸಿ ಮೀಸಲಾತಿ ಮತ್ತು ನ್ಯಾಯಾಲಯದ ಪ್ರಶ್ನೆಗಳು: ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಗಳಿಗೆ ಮೀಸಲಾತಿ ನೀಡುವ ಕ್ರಮದ ಬಗ್ಗೆ ಸುಪ್ರೀಂ ಕೋರ್ಟ್ ಕೆಲವು ಪ್ರಶ್ನೆಗಳನ್ನು ಎತ್ತಿದೆ. ಸಂವಿಧಾನದ ವಿಧಿ 15(4) ಮತ್ತು 16(4)ರಲ್ಲಿ ಶಿಕ್ಷಣ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದ ಮೀಸಲಾತಿ ಮತ್ತು ವಿಧಿ 243(ಡಿ) (ಗ್ರಾಮೀಣ ಸ್ಥಳೀಯ ಸಂಸ್ಥೆಗಳು) ಹಾಗೂ 243(ಟಿ) (ನಗರ ಸ್ಥಳೀಯ ಸಂಸ್ಥೆಗಳು) ಅಡಿಯಲ್ಲಿ ನೀಡುವ ರಾಜಕೀಯ ಪ್ರಾತಿನಿಧ್ಯದ ಮೀಸಲಾತಿಗೂ ಇರುವ ವ್ಯತ್ಯಾಸವನ್ನು ನ್ಯಾಯಾಲಯವು ಎತ್ತಿ ತೋರಿಸಿದೆ.

ಒಬಿಸಿಗಳಿಗೆ ರಾಜಕೀಯ ಪ್ರಾತಿನಿಧ್ಯ ಮೀಸಲಾತಿಯ ಸಾಂವಿಧಾನಿಕ ಹಕ್ಕಿನ ಸಂದರ್ಭವನ್ನು ನ್ಯಾಯಾಲಯ ಪ್ರಶ್ನಿಸಿಲ್ಲ. ಅದು ಎತ್ತಿರುವ ಪ್ರಶ್ನೆಗಳ ಮೂಲದಲ್ಲಿರುವ ಕಾಳಜಿ ಎಂದರೆ ಮೀಸಲಾತಿ ನಿಗದಿಗೆ ಭದ್ರವಾದ ಸಾಕ್ಷ್ಯಾಧಾರಗಳಿರಬೇಕು ಎಂಬುದಾಗಿದೆ.

ಅಭಿವೃದ್ಧಿ ಮತ್ತು ರಾಜಕೀಯ ಸಹಭಾಗಿತ್ವ: ಅಭಿವೃದ್ಧಿಯಲ್ಲಿ ಜನರಸಹಭಾಗಿತ್ವ ಇಲ್ಲದಿದ್ದರೆ ಅಭಿವೃದ್ಧಿಯ ಫಲಗಳು ಎಲ್ಲರಿಗೂ ಸಮಾನವಾಗಿ ದೊರೆಯುವುದಿಲ್ಲ. ನಮ್ಮ ಶ್ರೇಣೀಕೃತ ಜಾತಿ ವ್ಯವಸ್ಥೆಯ ಸಮಾಜದಲ್ಲಿ ಜನರ ಸಹಭಾಗಿತ್ವವೆನ್ನುವುದು ಅಖಂಡ ಸ್ವರೂಪದಲ್ಲಿ ಸಾಧ್ಯವಾಗುವುದಿಲ್ಲ. ಹಾಗಾಗಿಯೇ, ಜಾನ್ ರಾಲ್ಸ್ ಪ್ರತಿಪಾದಿಸಿದ 'ಭಿನ್ನತೆಯ ನಿಯಮ'ದ ಆಧಾರದಲ್ಲಿ ರಾಜಕೀಯ ಸಹಭಾಗಿತ್ವವನ್ನು ನಿರ್ವಹಿಸಬೇಕು.

ನಮ್ಮ ಸಂವಿಧಾನದಲ್ಲಿನ ಮೀಸಲಾತಿ ತತ್ವದ ಮೂಲ ಈ ಭಿನ್ನತೆಯ ನಿಯಮದಲ್ಲಿದೆ. ಅಭಿವೃದ್ಧಿ ಎನ್ನುವುದು ವರಮಾನದ, ಬಂಡವಾಳದ, ಉತ್ಪಾದನೆಯ ಪ್ರಶ್ನೆಯಲ್ಲ. ಇವೆಲ್ಲವೂ ಅಭಿವೃದ್ಧಿಯ ಸಾಧನಗಳು. ಜನರು ಘನತೆಯಿಂದ ಬದುಕುವುದನ್ನು ಸಾಧ್ಯ ಮಾಡಿಕೊಡುವುದೇ ಅಭಿವೃದ್ಧಿ. ಮೀಸಲಾತಿಯು ಮೂಲತಃ ಸಾಮಾಜಿಕವಾದುದೇ ವಿನಾ ಯಾವುದೇ ಕಾರಣಕ್ಕೂ ಇದನ್ನು ಆರ್ಥಿಕ ನೆಲೆಯಲ್ಲಿ ನೋಡುವುದು ಸರಿಯಲ್ಲ. ಮೀಸಲಾತಿಯು ಆರ್ಥಿಕ ಅಥವಾ ಬಡತನ ನಿವಾರಣಾ ಕಾರ್ಯಕ್ರಮವಲ್ಲ. ಈ ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಗಳಿಗೆ ಮೀಸಲಾತಿ ನೀಡುವ ಕ್ರಮದ ಬಗ್ಗೆ ಎತ್ತಿರುವ ಪ್ರಶ್ನೆಗಳನ್ನು ಪರಿಶೀಲಿಸಬೇಕಾಗುತ್ತದೆ.

ಮೀಸಲಾತಿ ನೀಡಲು ಆಧಾರವಾಗಿರುವ ವಾಸ್ತವಿಕ ದತ್ತಾಂಶಗಳು ಏನು ಎಂದು ಸುಪ್ರೀಂ ಕೋರ್ಟ್ ಈ ಹಿಂದೆಯೂ ಸರ್ಕಾರಗಳನ್ನು ಕೇಳಿದೆ. 'ಇದೇನು ಹೊಸದಾಗಿ ಉದ್ಭವಿಸಿರುವ ಪ್ರಶ್ನೆಯಲ್ಲ. ಕರ್ನಾಟಕ ಸರ್ಕಾರವು 2015-16ರಲ್ಲಿ ₹170 ಕೋಟಿ ಖರ್ಚು ಮಾಡಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿದೆ (ಜಾತಿ ಗಣತಿ). ಅನೇಕ ರೀತಿಯ ವಿರೋಧಗಳ ನಡುವೆ ಸರ್ಕಾರ ಜಾತಿ ಗಣತಿ ನಡೆಸಿದೆ. ಯಾವುದೇ ಸಮೀಕ್ಷೆಯ ಖಚಿತತೆಯ ಬಗ್ಗೆ, ಫಲಿತಗಳ ಬಗ್ಗೆ ಪ್ರಶ್ನೆಗಳು ಇದ್ದೇ ಇರುತ್ತವೆ. ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಗಳ ಮೀಸಲಾತಿ ಬಗ್ಗೆ ಈಗ ಸುಪ್ರೀಂ ಕೋರ್ಟ್ ಎತ್ತಿರುವ ಪ್ರಶ್ನೆಗಳಿಗೆ ಕರ್ನಾಟಕವು 2015-16ರಲ್ಲಿ ನಡೆಸಿದ ಜಾತಿ ಗಣತಿಯಲ್ಲಿನ ದತ್ತಾಂಶಗಳನ್ನು ಬಳಸಿಕೊಂಡು ಉತ್ತರ ಕಂಡುಕೊಳ್ಳಬಹುದು. ಈ ದೃಷ್ಟಿಯಿಂದ ಕರ್ನಾಟಕಕ್ಕೆ ಒಂದು ಅನುಕೂಲವಿದೆ. ಈ ವರದಿಯು ಪ್ರಕಟವಾದರೆ ಕೆಲವು ಬಲಾಢ್ಯ ಜಾತಿಗಳು ಮೀಸಲಾತಿ ಕಳೆದುಕೊಳ್ಳುವ ಸಾಧ್ಯತೆಯಿರುತ್ತದೆ. ಆದರೆ ವರದಿಯಲ್ಲಿನ ಫಲಿತಗಳ ಆಧಾರದಲ್ಲಿ ಸಣ್ಣ-ಪುಟ್ಟ ಸಮುದಾಯಗಳಿಗೆ ನ್ಯಾಯ ದೊರೆಯಬಹುದಾಗಿದೆ.

ಮೀಸಲಾತಿ ಮತ್ತು ಸಾಮಾಜಿಕ ನ್ಯಾಯ: ಒಬಿಸಿ ಸಮುದಾಯಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ನೀಡದಿದ್ದರೆ ಅವು ಸಾಮಾಜಿಕ ನ್ಯಾಯದಿಂದ ವಂಚಿತವಾಗುತ್ತವೆ. ವಂಚಿತ ಒಬಿಸಿ ಸಮುದಾಯಗಳ ಧ್ವನಿ ಸ್ಥಳೀಯ ಸಂಸ್ಥೆಗಳಲ್ಲಿ ಇಲ್ಲದಂತಾಗುತ್ತದೆ. ಸಾಮಾಜಿಕ ನ್ಯಾಯ ಎಂಬುದು ಸಾಂವಿಧಾನಿಕ ಮೌಲ್ಯ. ಅದನ್ನು ಸಾಧಿಸಿಕೊಳ್ಳಲು ಸಮಾಜದಲ್ಲಿನ ವಿವಿಧ ವರ್ಗ-ಜಾತಿಗಳಿಗೆ ವಿವಿಧ ಪ್ರಮಾಣದ ಮೀಸಲಾತಿ ನೀಡಬೇಕಾಗುತ್ತದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಮತ್ತು ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಗೆ 100 ವರ್ಷಕ್ಕೂ ಮೀರಿದ ಚರಿತ್ರೆಯಿದೆ. ಮೈಸೂರು ಸಂಸ್ಥಾನದಲ್ಲಿ 1919ರಲ್ಲಿ ಮಿಲ್ಲರ್ ಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ಬ್ರಾಹ್ಮಣೇತರರಿಗೆ ಸರ್ಕಾರಿ ನೌಕರಿಗಳಲ್ಲಿ ಶೇ 75ರಷ್ಟು ಮೀಸಲಾತಿ ನೀಡಲಾಗಿತ್ತು. ಇಂತಹ ಅನುಕೂಲ ರಾಜ್ಯದ ಉಳಿದ ಪ್ರದೇಶಗಳಿಗೆ ಇರಲಿಲ್ಲ. ಮೈಸೂರು ಸಂಸ್ಥಾನವು ನೀಡಿದ ಮೀಸಲಾತಿಯಿಂದಾಗಿ ದಕ್ಷಿಣ ಕರ್ನಾಟಕದಲ್ಲಿ ಅವರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿದೆ. ಆದರೆ, ಉತ್ತರ ಕರ್ನಾಟಕ ಭಾಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯಗಳು ಇಂತಹ ಸೌಲಭ್ಯಕ್ಕೆ 1950ರವರೆಗೆ ಕಾಯಬೇಕಾಯಿತು. ಒಬಿಸಿಗಳ ಮೀಸಲಾತಿ ಮತ್ತು ಸಾಮಾಜಿಕ ಪ್ರಗತಿಗಳ ನಡುವೆ ಅನುಲೋಮ ಸಂಬಂಧವಿದೆ. ರಾಜಕೀಯ ಪ್ರಾತಿನಿಧ್ಯವು ಸದರಿ ಸಮುದಾಯಗಳ ಶೈಕ್ಷಣಿಕ ಮತ್ತು ಉದ್ಯೋಗದ ಅಭಿವೃದ್ಧಿಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

ಒಬಿಸಿಗಳ ರಾಜಕೀಯ ಮೀಸಲಾತಿಯು ಸದರಿ ವರ್ಗದಲ್ಲಿನ ಮಹಿಳೆಯರ ಸಬಲೀಕರಣಕ್ಕೆ ಕಾಣಿಕೆ ನೀಡುತ್ತದೆ. ಒಬಿಸಿ ಸಮುದಾಯಗಳ ಮಹಿಳೆಯರಿಗೂ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಸೌಲಭ್ಯವಿದೆ. ಒಬಿಸಿಗಳ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ ಬಗ್ಗೆ ಜನಗಣತಿ ಮಹಾನಿರ್ದೇಶನಾಲಯದ ಮೂಲಕ ಮಾಹಿತಿ ಪಡೆದು, ಒಕ್ಕೂಟ ಸರ್ಕಾರ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ಒಕ್ಕೂಟ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲ. ಈಗ ಸ್ಥಳೀಯ ಸಂಸ್ಥೆಗಳಲ್ಲಿನ ಮೀಸಲಾತಿಯ ಪ್ರಶ್ನೆ ರಾಷ್ಟ್ರೀಯ ಸಮಸ್ಯೆಯಾಗಿದೆ. ಎಲ್ಲ ರಾಜ್ಯಗಳೂ ಸಮಸ್ಯೆ ಎದುರಿಸುತ್ತಿವೆ. ಒಬಿಸಿ ಪಟ್ಟಿಯನ್ನು ರಾಜ್ಯ ಸರ್ಕಾರಗಳಿಗೆ ಸಿದ್ಧಪಡಿಸಲು ಸ್ವಾತಂತ್ರ್ಯ ನೀಡಲಾಗಿದೆ ಎಂದು ಒಕ್ಕೂಟ ಸರ್ಕಾರವು ಕೈಕಟ್ಟಿಕೊಂಡು ಕೂರುವಂತಿಲ್ಲ. ಸ್ಥಳೀಯ ಸಂಸ್ಥೆಗಳು ಈಗ ಸಂವಿಧಾನಾತ್ಮಕ ಸಂಸ್ಥೆಗಳಾಗಿವೆ. ಮಂಡಲ್ ಆಯೋಗದ ಪ್ರಕಾರ, ನಮ್ಮ ಸಮಾಜದ ಒಟ್ಟು ಜನಸಂಖ್ಯೆಯಲ್ಲಿ ಶೇ 52ರಷ್ಟು ಒಬಿಸಿ ಜನರಿದ್ದಾರೆ. ಇಂದು ಅದು ಹೆಚ್ಚಾಗಿದೆಯೋ ಅಥವಾ ಕಡಿಮೆಯಾಗಿದೆಯೋ ಎಂಬುದರ ಬಗ್ಗೆ ನಿಖರ ಮಾಹಿತಿಯಿಲ್ಲ. ಇಂದಿನ ತಂತ್ರಜ್ಞಾನ ಯುಗದಲ್ಲಿ ಮಾಹಿತಿ ಕೊರತೆಯಿಂದ ಮೀಸಲಾತಿ ಇಲ್ಲ ಎನ್ನುವುದು ಸರಿಯಲ್ಲ. ಕರ್ನಾಟಕ ಸರ್ಕಾರವು 2015-16ರಲ್ಲಿ ನಡೆಸಿದ ಜಾತಿಗಣತಿ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ತಜ್ಞರ ಜೊತೆ ಸಮಾಲೋಚಿಸಿ, ಅದರಲ್ಲಿ ಸಣ್ಣಪುಟ್ಟ ಲೋಪದೋಷಗಳಿದ್ದರೆ ಸರಿಪಡಿಸಿ ಅದರ ಫಲಿತಗಳನ್ನು ಬಳಸಿಕೊಂಡು ಮೂರು ಸೂತ್ರಗಳನ್ನು ತುರ್ತು ಕ್ರಮಗಳ ಮೂಲಕ ಪೂರೈಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು.

ಲೇಖಕ: ಅಭಿವೃದ್ಧಿ ಅರ್ಥಶಾಸ್ತ್ರಜ್ಞ

'ರಾಜಕೀಯ ಮೀಸಲಾತಿ ಅತ್ಯವಶ್ಯ'

ಹಿಂದುಳಿದ ವರ್ಗಗಳಿಗೆ ಎಲ್ಲಾ ಹಂತದ ರಾಜಕೀಯದಲ್ಲಿ ಮೀಸಲಾತಿ ನೀಡುವುದು ಅತ್ಯಂತ ಅವಶ್ಯಕ. ಯಾವುದೇ ರಾಜ್ಯಕ್ಕೆ ಹೋದರೂ ಎರಡರಿಂದ ಮೂರು ಜಾತಿಗಳು ಮಾತ್ರ ರಾಜಕೀಯ ಅಧಿಕಾರ ಅನುಭವಿಸುತ್ತಿವೆ. ಎಲ್ಲಾ ಜಾತಿಗಳಿಗೂ ರಾಜಕೀಯ ಪ್ರಾತಿನಿಧ್ಯ ಸಿಗಬೇಕು ಎಂಬ ಕಾರಣಕ್ಕೆ ಮೀಸಲಾತಿ ನೀಡಲಾಗಿತ್ತು. ಈಗ ಸುಪ್ರೀಂ ಕೋರ್ಟ್ ನೀಡಿರುವ ಆದೇಶದಿಂದ ಅಸಮಾನತೆ ಹೆಚ್ಚಾಗುವ ಸಾಧ್ಯತೆ ಇದೆ. 1995ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ದೇವೇಗೌಡರು ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿ ಕಲ್ಪಿಸಿದರು. ಅದಕ್ಕೂ ಮುನ್ನ 1956ರಲ್ಲಿ ಕುರುಬ ಸಮುದಾಯದ ವೈ.ರಾಮಚಂದ್ರ ಬೆಂಗಳೂರಿನ ಮೇಯರ್ ಆಗಿದ್ದರು. ತದ ನಂತರ 1995ರ ತನಕ ಒಕ್ಕಲಿಗರು, ಕುರುಬರು, ತಿಗಳರು, ಮುಸ್ಲಿಂ, ದಲಿತರು, ನೇಕಾರರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಮೇಯರ್ ಸ್ಥಾನ ಸಿಗಲೇ ಇಲ್ಲ. ಮೀಸಲಾತಿ ದೊರಕಿದ ನಂತರ ಹಲವರು ಮೇಯರ್ ಆಗಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಜಾತಿ ಜನಗಣತಿ ವರದಿ ಪಡೆದು ಜಾರಿಗೊಳಿಸುವ ಧೈರ್ಯ ಮಾಡಬೇಕಿತ್ತು. ಆದರೆ, ಅವರು ಸಬೂಬು ಹೇಳಿ ನುಣುಚಿಕೊಂಡರು. ಬಸವರಾಜ ಬೊಮ್ಮಾಯಿ ಅವರು ಈಗ



ಯಾವುದೇ ಸಬೂಬು ಹೇಳದೆ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿ ಒಪ್ಪಬೇಕು. ಅದರ ಪ್ರಕಾರ ಮೀಸಲಾತಿ ನೀಡಬೇಕು. ದೇವರಾಜ ಅರಸು, ವಿ.ಪಿ.ಸಿಂಗ್ ಮಾದರಿಯಲ್ಲಿ ಬಸವರಾಜ ಬೊಮ್ಮಾಯಿ ಅವರೂ ಹಿಂದುಳಿದ ವರ್ಗಗಳ ಹಿತೈಷಿ ಎಂದು ಇತಿಹಾಸದಲ್ಲಿ ಉಳಿಯಬೇಕು.

ಮುಕುಡಪ್ಪ, ಹಿಂದುಳಿದ ದಲಿತ(ಹಿಂದ) ಸಮಿತಿ ಅಧ್ಯಕ್ಷ

'ಸುಪ್ರೀಂ ಪ್ರಶ್ನೆಗಳಿಗೆ ಸಮೀಕ್ಷೆಯಲ್ಲಿ ಉತ್ತರವಿದೆ'

ಈಗಿರುವ ಸಾಮಾಜಿಕ ನ್ಯಾಯಾದ ಜೊತೆಗೆ ರಾಜಕೀಯ ನ್ಯಾಯವೂ ಮುಖ್ಯ. ಸುಪ್ರೀಂ ಕೋರ್ಟ್ ಕೇಳುತ್ತಿರುವ ಪ್ರಶ್ನೆಗಳಿಗೆ ಕಾಂತರಾಜು ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯಲ್ಲಿ ಅಂಕಿ-ಅಂಶ ಸಹಿತ ಉತ್ತರವಿದೆ. ಈ ವರದಿ ಕೇವಲ ಹಿಂದುಳಿದ ವರ್ಗಗಳಿಗೆ ಸಂಬಂಧಿಸದ ವಿವರ ಮಾತ್ರ ಒದಗಿಸುವುದಿಲ್ಲ, ಎಲ್ಲಾ ಸಮುದಾಯಗಳ ಸ್ಥಿತಿಗತಿಯನ್ನು ತಿಳಿಸುತ್ತದೆ. ರಾಜಕೀಯ ಮೀಸಲಾತಿ ಉಳಿಸಿಕೊಳ್ಳಲು ಇನ್ನೊಂದು ಆಯೋಗ ರಚನೆ ಮಾಡಬೇಕಿಲ್ಲ, ಅದರ ಅಗತ್ಯವೂ ಇಲ್ಲ. ಈವರೆಗೆ ಯಾವ ಸಮುದಾಯಗಳಿಗೆ ಎಷ್ಟು ರಾಜಕೀಯ ಅವಕಾಶ ಸಿಕ್ಕಿದೆ, ಯಾವ ಸಮುದಾಯಗಳು ವಂಚಿತವಾಗಿವೆ ಎಂಬ ಅಂಶಗಳು ಈ ವರದಿಯಲ್ಲೇ ಅಡಕವಾಗಿದೆ. ಸುಪ್ರೀಂ ಕೋರ್ಟ್ ಹೇಳುವ ಮಾನದಂಡವನ್ನು ಈಗ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಅನುಸರಿಸಿದರೆ, ಮುಂದಿನ ದಿನಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲೂ ರಾಜಕೀಯ ಮೀಸಲಾತಿ ಇಲ್ಲದಂತೆ ಆಗಲಿದೆ. ಕಾಂತರಾಜ್



ಆಯೋಗದ ವರದಿಯನ್ನು ಕೂಡಲೇ ಸರ್ಕಾರ ಸ್ವೀಕಾರ ಮಾಡಬೇಕು. ಅಗತ್ಯ ಎನಿಸಿದರೆ ಅದನ್ನು ಅಧ್ಯಯನಕ್ಕೆ ಒಳಪಡಿಸಬಹುದು. ಆದರೆ, ಅದರಲ್ಲಿರುವ ಅಂಕಿ-ಅಂಶ ಬಳಸಿಕೊಳ್ಳಲು ತೊಂದರೆಯೇನೂ ಇಲ್ಲ. ಇನ್ನೊಂದು ಆಯೋಗ ರಚನೆ ಮಾಡುವುದೆಂದರೆ ಕಾಲಹರಣವೇ ಹೊರತು ಬೇರೇನೂ ಆಗುವುದಿಲ್ಲ.

ಆರ್.ಕೆ.ಸಿದ್ರಾಮಣ್ಣ, ವಿಧಾನ ಪರಿಷತ್ತಿನ ಮಾಜಿ ಸದಸ್ಯ

'ಮೀಸಲಾತಿಯೂ ವಂಶಪಾರಂಪರ್ಯ ಆಗಬಾರದು'

ವರ್ಣಾಶ್ರಮ ವ್ಯವಸ್ಥೆಯೇ ಜಾತಿಯಾಗಿ ಬದಲಾಗಿದ್ದು, ಈ ವ್ಯವಸ್ಥೆ ಭಾರತೀಯ ಸಮಾಜವನ್ನು ಅವನತಿಯ ಅಂಚಿಗೆ ದೂಡಿದೆ. ಈಗ ಮೀಸಲಾತಿ ವಿರೋಧಿಗಳು ಶಕ್ತಿಶಾಲಿಗಳಾಗಿದ್ದಾರೆ. ಹೀಗಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮೀಸಲಾತಿ ರೀತಿಯಲ್ಲೇ ರಾಜಕೀಯ ಮೀಸಲಾತಿಯೂ ಅಗತ್ಯವಿದೆ.

ಮಂಡಲ್ ಆಯೋಗದ ವರದಿ ಆಧರಿಸಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸುವ ಪ್ರಕ್ರಿಯೆಗೆ ಕರ್ನಾಟಕ ಚಾಲನೆ ಕೊಟ್ಟಿತು. ಯಾವುದೇ ಸೌಲಭ್ಯ ಸಿಗದವರಿಗೆ ಮೀಸಲಾತಿ ಅನುಕೂಲಕರ ದಾರಿಯಾಗಿತ್ತು. ಆದರೆ, ಶ್ರೀಮಂತರಿಗೆ, ಪ್ರಬಲ ಜಾತಿಯವರಿಗೆ ಮೀಸಲಾತಿಯ ಅಗತ್ಯವಿಲ್ಲ. ಹಿಂದುಳಿದವರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಮೀಸಲಾತಿ ಅಗತ್ಯವಿದೆ.

ರಾಜಕೀಯ ಮೀಸಲಾತಿಯಂತೂ ಇತ್ತೀಚೆಗೆ ಪಿತ್ರಾರ್ಜಿತ ಆಸ್ತಿಯಂತಾಗಿದೆ. ತಂದೆ ಪ್ರಭಾವಿಯಾಗಿದ್ದರೆ ಮಕ್ಕಳಿಗೆ ರಾಜಕೀಯ ಮೀಸಲಾತಿ ಲಾಭ ಅನಾಯಸವಾಗಿ ದಕ್ಕುತ್ತಿದೆ ಅಥವಾ ದಕ್ಕಿಸಿಕೊಡಲಾಗುತ್ತಿದೆ. ಅರ್ಹತೆ ಇಲ್ಲದಿದ್ದರೂ ಮೀಸಲಾತಿ ಅಡಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡರೆ 'ಯೋಗ್ಯತೆ ಇದ್ದವರಿಗೆ ಯೋಗವಿಲ್ಲ' ಎಂಬಂತಾಗುತ್ತದೆ. ಸಚಿವರ ಮಕ್ಕಳೇ ಸಚಿವನಾಗುವುದು, ಶಾಸಕರ ಮಕ್ಕಳೇ ಶಾಸಕನಾಗುವ ವಂಶಪಾರಂಪರ್ಯ ರಾಜಕಾರಣಕ್ಕೆ ಈ ಮೀಸಲಾತಿ ಬಳಕೆಯಾಗುತ್ತಿದೆ. ಇದು ತಪ್ಪಬೇಕು.

ಕೆಲವೊಮ್ಮೆ ಅನರ್ಹರೂ ರಾಜಕೀಯ ಮೀಸಲಾತಿಯ ಸೌಲಭ್ಯ ಪಡೆಯುವಂತಾಗುತ್ತದೆ. ಇದು ಸುಗಮ ರಾಜಕೀಯ ಆಡಳಿತಕ್ಕೆ ಧಕ್ಕೆ ತರುವ ಸಂಗತಿ. ಮೀಸಲಾತಿ ಸೌಲಭ್ಯ ಪಡೆದು ನಿಜವಾದ ಅರ್ಥದಲ್ಲಿ ಆಡಳಿತ ನಡೆಸಿದರೆ ಅದಕ್ಕೊಂದು ಅರ್ಥ ಬರುತ್ತದೆ ಮತ್ತು ಅಂತಹ ಮೀಸಲಾತಿ ನಿಜಕ್ಕೂ ಸಾರ್ಥಕವಾಗುತ್ತದೆ.



ಡಾ.ವರದಾ ಶ್ರೀನಿವಾಸ್, ಲೇಖಕಿ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 71

ಸೃಷ್ಟಿ ರಹಸ್ಯದ ಖಂಡ

ಶ್ರೀ ಶಿವಮಹಾಪುರಾಣದ ಎರಡನೆ ಸಂಹಿತೆಯಾದ ರುದ್ರಸಂಹಿತೆಯಲ್ಲಿ ಐದು ಖಂಡಗಳಿವೆ. ಮೊದಲನೆಯದು ಸೃಷ್ಟಿಖಂಡ, ಎರಡನೆಯದು ಸತಿಖಂಡ, ಮೂರನೆಯದು ಪಾರ್ವತೀಖಂಡ, ನಾಲ್ಕನೆಯದು ಕುಮಾರಖಂಡ ಮತ್ತು ಐದನೆಯದು ಯುದ್ಧಖಂಡ.

ಮೊದಲ ಖಂಡವಾದ ಸೃಷ್ಟಿಖಂಡದಲ್ಲಿ 'ಮುನಿಪ್ರಶ್ನ ವರ್ಣನ' ಎಂಬ ಅಧ್ಯಾಯ ಇದೆ. ಇದರಲ್ಲಿ ಶೌನಕಾದಿಮುನಿಗಳು ಕೇಳುವ ಪ್ರಶ್ನೆಗಳಿಗೆ ಸೂತಪುರಾಣಿಕ ಉತ್ತರಿಸುತ್ತಾನೆ. ಈ ಸಂದರ್ಭದಲ್ಲಿ ವ್ಯಾಸಮಹರ್ಷಿ ರುದ್ರಸಂಹಿತೆಯ ಮೊದಲ ಅಧ್ಯಾಯವಾದ ಸೃಷ್ಟಿ ಉಪಖ್ಯಾನವನ್ನು ಹೇಳುವಾಗ ಶಿವನನ್ನು ಪ್ರಾರ್ಥಿಸಿ, ಆರಂಭಿಸಿದ್ದನ್ನು ಸಹ ಸೂತಮುನಿ ಸ್ಮರಿಸುತ್ತಾನೆ.

ವ್ಯಾಸಮಹರ್ಷಿಗಳು ಶಿವನನ್ನು 'ಈ ಪ್ರಪಂಚದ ಸೃಷ್ಟಿ, ಸ್ಥಿತಿ, ಸಂಹಾರಗಳಿಗೆ ಕಾರಣನಾದ, ಗೌರೀದೇವಿಯ ವಲ್ಲಭನಾದ ಓ ಶಿವನೇ! ನೀನು ತತ್ತ್ವಜ್ಞಾನಿಯಾಗಿ, ಅನಂತವಾದ ಕೀರ್ತಿಯನ್ನು ಪಡೆದಿರುವೆ. ಮಾಯೆಗೆ ಆಶ್ರಯನಾಗಿದ್ದರೂ, ಮಾಯಾಪಾಶಕ್ಕೆ ಸಿಲುಕದಿರುವಂಥ ಅಪರೂಪದ ವ್ಯಕ್ತಿತ್ವ ನಿನ್ನದು. ಇವನ ರೂಪವಿಂಥದು – ಎಂದು ಊಹಿಸಲೂ ಅಸಾಧ್ಯವಾದ, ಕೇವಲ ಜ್ಞಾನಸ್ವರೂಪನಾದ ನೀನು ಆದ್ಯಂತರಹಿತನಾದವನು. ನಿನ್ನ ಮಾಯೆಯಿಂದ ಚರಾಚರ ಪ್ರಪಂಚವೆಲ್ಲವನ್ನೂ ಸೃಷ್ಟಿಸಿ, ಆಕಾಶದಂತೆ ಅದರ ಒಳಗೂ ಹೊರಗೂ ವ್ಯಾಪಿಸಿರುವೆ. ಸೂಜಿಗಲ್ಲಿನ ಆಕರ್ಷಣೆಗೆ ಸಿಲುಕಿ ಕಬ್ಬಿಣ ಮೊದಲಾದ ಲೋಹಗಳು ತಿರುಗುತ್ತಿರುವಂತೆ, ಜಗತ್ತುಗಳೆಲ್ಲವೂ ಸದಾ ನಿನ್ನ ಸುತ್ತುತ್ತವೆ. ಪ್ರಪಂಚಕ್ಕೆಲ್ಲಾ ತಂದೆಯಾದ ಶಿವನನ್ನೂ, ಜಗನ್ಮಾತೆಯೂ ಮಂಗಳ ಸ್ವರೂಪಳೂ ಆದ ಪಾರ್ವತಿಯನ್ನೂ, ಇವರೀರ್ವರ ಮಗನಾದ ಗಣಪತಿಯನ್ನೂ ಪ್ರಾರ್ಥಿಸುವ' ಎಂದು ಹೇಳಿ ಸೃಷ್ಟಿ ಉಪಖ್ಯಾನವನ್ನು ಹೇಳಿದ್ದರು.

ಸೂತಮುನಿಯ ಮಾತಿನಿಂದ ಸಂಪ್ರೀತರಾದ ಪ್ರಯಾಗದ ಋಷಿಗಳು 'ಈಗ ನಮಗೆ ಶಿವಸ್ವರೂಪ ಮತ್ತು ಶಿವಪಾರ್ವತಿಯರ ಚರಿತ್ರೆಗಳನ್ನು ತಿಳಿಸು. ಗುಣತ್ರಯಗಳ ಸಂಬಂಧವೇ ಇಲ್ಲದೆ, ನಿರ್ಗುಣನಾದ ಆ ಮಹೇಶ್ವರನು, ಈ ಪ್ರಪಂಚದಲ್ಲಿ ಸಗುಣನಾಗುವ ಬಗೆ ಯಾವುದು? ನಾವೆಲ್ಲರೂ ಶಿವನ ಸ್ವರೂಪ ಇಂಥದ್ದೆಂದು ತಿಳಿದಿಲ್ಲ. ಪ್ರಭುವಾದ ಆ ಶಿವನು, ಈ ಸೃಷ್ಟಿಯ ಮೊದಲು ಸ್ವಸ್ವರೂಪದಿಂದ ಯಾವ ರೀತಿಯಲ್ಲಿದ್ದ? ಸೃಷ್ಟಿಯಾದನಂತರ ಯಾವ ರೀತಿ ವಿಹರಿಸುತ್ತಿದ್ದಾನೆ? ಸೃಷ್ಟಿಯ ಕೊನೆಯಲ್ಲಿ ಆ ಮಹೇಶ್ವರ ಹೇಗಿರುತ್ತಾನೆ? ಲೋಕಕ್ಕೆ ಕಲ್ಯಾಣವನ್ನುಂಟು ಮಾಡುವುದಕ್ಕೆ ಬದ್ಧನಾದ ಆ ಶಂಕರ ಪ್ರಸನ್ನನಾಗುವ ಬಗೆ ಹೇಗೆ? ಸುಪ್ರಸನ್ನನಾದ ಆತನು ಯಾವ ಒಳ್ಳೆಯ ಫಲವನ್ನು ಕೊಡುತ್ತಾನೆ? ತನ್ನ ಭಕ್ತರಿಗೆ ಹೇಗೆ ಸ್ಪಂದಿಸುತ್ತಾನೆ? ನಮಗೆ ತಿಳಿಸು' ಎಂದು ಕೋರುತ್ತಾರೆ.

ಇದಕ್ಕೆ ಸೂತಮುನಿ 'ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಪ್ರಸಿದ್ಧರಾದ ತ್ರಿಮೂರ್ತಿಗಳು ಆ ಶಿವನ ಅವಯವದಿಂದ ಹುಟ್ಟಿರುವರು. ಅವರಲ್ಲಿ ಪೂರ್ಣವಾದ ಅಂಶವನ್ನು ಪಡೆದ ಮಹೇಶ್ವರನು, ಎರಡನೆಯ ಶಿವನೆಂದೇ ತಿಳಿ ಎಂದು ವ್ಯಾಸರು ಹೇಳಿದ್ದರು. ಶಿವನ ಚರಿತ್ರವನ್ನು ಕೇಳಬೇಕೆಂಬ ನಿಮ್ಮ ಪ್ರಶ್ನೆಯು ಗಂಗೆಯ ಜಲದಂತೆ ಪಾವನಗೊಳಿಸುವುದು. ಪಶುಹಿಂಸಾನಿರತನಾದವನೊಬ್ಬನನ್ನು ಬಿಟ್ಟು, ಯಾವ ಪುರುಷನು ತಾನೇ ಶಿವ ಪುರಾಣ ಬೇಡ ಎನ್ನುತ್ತಾನೆ? ಉತ್ತಮ, ಮಧ್ಯಮ, ಅಧಮರೆಂಬ ಮೂರು ವಿಧವಾದ ಜನಗಳನ್ನೂ ಆನಂದಗೊಳಿಸುವ ಶಿವನ ಗುಣಸಂಕೀರ್ತನದ ಬಗ್ಗೆ ಬೇಸರಗೊಳ್ಳುವವರು ಯಾರೂ ಇಲ್ಲ? ಸಂಸಾರವೆಂಬ ರೋಗಕ್ಕೆ ಔಷಧವಾಗಿರುವ ಶಿವನ ಗುಣಗಳು, ಮನಸ್ಸಿಗೆ ಆಹ್ಲಾದಕರವಾಗಿಯೂ, ಕಿವಿಗೆ ಇಂಪಾಗಿಯೂ ಇರುವುದು. ನಿಮ್ಮ ಕೋರಿಕೆಯಂತೆ ಶಿವನ ಲೀಲೆಗಳನ್ನು ವರ್ಣಿಸುವೆನು. ಆದರದಿಂದ ಕೇಳಿರಿ' ಎಂದು ಸೂತಮುನಿ ಶಿವಮಹಾಪುರಾಣದ ರುದ್ರಸಂಹಿತೆಯ ಮೊದಲ ಖಂಡವಾದ ಸೃಷ್ಟಿಖಂಡ ಹೇಳತೊಡಗುತ್ತಾನೆ.

'ನೀವೀಗ ನನ್ನನ್ನು ಕೇಳಿದಂತೆಯೇ, ಹಿಂದೆ ವಿಶ್ವಸ್ವರೂಪನಾದ ವಿಷ್ಣುವಿನಿಂದ ಪ್ರೇರೇಪಿಸಲ್ಪಟ್ಟ ನಾರದ ತನ್ನ ತಂದೆಯಾದ ಬ್ರಹ್ಮನನ್ನು ಕೇಳಿದ್ದ. ಶಿವನಲ್ಲಿ ಭಕ್ತಿಯುಳ್ಳ ಬ್ರಹ್ಮ ಪ್ರಸನ್ನಚಿತ್ತನಾಗಿ ಶಿವನ ಗುಣಗಳನ್ನು ವರ್ಣಿಸಿದ್ದನ್ನು ಗುರು ವ್ಯಾಸರು ನನಗೆ ತಿಳಿಸಿದ್ದರು' ಎಂದು ಸೂತಪುರಾಣಿಕನು ಬ್ರಹ್ಮ-ನಾರದ ಸಂವಾದವನ್ನ ಹೇಳತೊಡಗಿದನು. ಇಲ್ಲಿಗೆ ಶ್ರೀ ಶಿವಮಹಾಪುರಾಣದಲ್ಲಿ ಎರಡನೆ ಸಂಹಿತೆಯಾದ ರುದ್ರಸಂಹಿತೆಯ ಮೊದಲನೇ ಖಂಡವಾದ ಸೃಷ್ಟಿ ಉಪಾಖ್ಯಾನದ ಮುನಿಪ್ರಶ್ನ ವರ್ಣನ ಎಂಬ ಮೊದಲನೆ ಅಧ್ಯಾಯ ಮುಗಿಯುತ್ತದೆ •

ಬೆರಗಿನ ಬೆಳಕು

ಗುರುರಾಜ ಕರಜಗಿ



ಮಾಗಿದ ಬದುಕು

ಅಹುದು ಬಾಳ್ ಭಂಡತನವಿಹದಿ ಬಾಳ್
ಮುಗಿಯುವೊಡೆ |
ಕಹಿಯೊಗರು ಕಾಯಿ, ಮಿಡಿತನದೊಳದು
ಮುಗಿಯೆ ||
ಸಿಹಿಯಹುದು ಕಾಯಿ ಹಣ್ಣಾಗೆ, ಜೀವಿತವಂತು |
ಮಹಿಮೆಗೊಳುವುದು ಮಾಗೆ – ಮಂಕುತಿಮ್ಮ
|| 587 ||

ಪದ-ಅರ್ಥ: ಭಂಡತನವಿಹದಿ = ಭಂಡತನವು + ಇಹದಿ, ಕಹಿಯೊಗರು = ಕಹಿ + ಒಗರು, ಮಿಡಿತನದೊಳದು = ಮಿಡಿತನದೊಳು (ಮಾಗದ ಹಂತದಲ್ಲಿ) + ಅದು, ಜೀವಿತವಂತು = ಜೀವತವು- + ಅಂತು, ಮಾಗೆ = ಮಾಗಿದರೆ


ವಾಚ್ಯಾರ್ಥ: ಇಹಲೋಕದ ಬಾಳು ಯಾವ ಸಾಧನೆಯಿಲ್ಲದೆ ಮುಗಿದರೆ ಅದು ಭಂಡತನದ ಬಾಳೇ. ಮರದಲ್ಲಿಯ ಕಾಯಿ ಮಿಡಿತನದಲ್ಲೇ ಉದುರಿ ಹೋದರೆ ಅದು ಕೇವಲ ಕಹಿ ಮತ್ತು ಒಗರು. ಅದೇ ಕಾಯಿ ಹಣ್ಣಾದರೆ ಸಿಹಿಯಾಗುತ್ತದೆ. ಮನುಷ್ಯ ಜೀವನವೂ ಅಂತೆಯೇ. ಅದು ಮಾಗಿದಂತೆ ಅದರ ಮಹಿಮೆ ಹೆಚ್ಚಾಗುತ್ತದೆ.

ವಿವರಣೆ: ಎಷ್ಟು ಸುಂದರವಾದ ದೃಷ್ಟಾಂತದ ಮೂಲಕ ಬದುಕು ಹರಳುಗಟ್ಟುವುದನ್ನು ಈ ಚೌಪದಿ ವಿವರಿಸುತ್ತದೆ.

ಮೊರೊಕ್ಕೋದ ಕುಗ್ರಾಮದಲ್ಲಿ ಜನಿಸಿದವಳು ನಜತ್. ಆಕೆಯ ತಂದೆ-ತಾಯಿಯರಿಗೆ ಏಳು ಮಕ್ಕಳು. ಈಕೆ ಎರಡನೆಯವಳು. ಬಡತನ ಪರಿವಾರಕ್ಕೇ ಅಂಟಿತ್ತು. ಹುಡುಗಿ ಮಾಡುತ್ತಿದ್ದ ಕೆಲಸ ಒಂದೇ, ಅದು ಕುರಿ ಕಾಯುವುದು. ಕೆಲ ವರ್ಷಗಳ ನಂತರ ಬಡತನದ ಬವಣೆಯನ್ನು ತಡೆದುಕೊಳ್ಳಲಾರದೆ ಆಕೆಯ ತಂದೆ ಫ್ರಾನ್ಸ್‌ಗೆ ವಲಸೆ ಬಂದರು. ನಿರ್ಮಾಣ ಕಾರ್ಯದಲ್ಲಿ ಕೂಲಿ ಕೆಲಸ. ಇದು ಆಕೆಯ ಬಾಲ್ಯದ ಸ್ಥಿತಿ. ಅದು ಹಾಗೆಯೇ ಮುಂದುವರೆದಿದ್ದರೆ ಅದೊಂದು ಅಸಫಲ ಜೀವನವೆಂದೇ ಜನ ಭಾವಿಸುತ್ತಿದ್ದರು. ಅದನ್ನು ಕಗ್ಗ ಭಂಡತನದ ಬಾಳು ಎನ್ನುತ್ತದೆ. ಆದರೆ ನಜತ್‌ಳ ಜೀವನ ಅಲ್ಲಿಗೇ ನಿಲ್ಲಲಿಲ್ಲ. ಫ್ರಾನ್ಸ್‌ನಲ್ಲಿ ಒಂದು ಶಾಲೆಗೆ ಸೇರಿದಳು. ಫ್ರೆಂಚ್ ಬಾರದೆ ಕಷ್ಟಪಡುತ್ತಿದ್ದ ಹುಡುಗಿ ಸತತ ಪ್ರಯತ್ನದಿಂದ ಫ್ರೆಂಚ್ ಭಾಷೆಯ ಮೇಲೆ ಪ್ರಭುತ್ವವನ್ನು ಪಡೆದಳು. ವಿಶೇಷ ವಿದ್ಯಾರ್ಥಿವೇತನವನ್ನು ಪಡೆದು ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಳು. ವಲಸಿಗಳಾಗಿ ಫ್ರಾನ್ಸ್‌ಗೆ ಬಂದ ನಜತ್ ರಾಜಕೀಯದಿಂದಲೇ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಾಧ್ಯ ಎಂದು ತೀರ್ಮಾನಿಸಿ ರಾಜಕೀಯದತ್ತ ವಾಲಿದಳು. ತನ್ನ ಸಹಪಾಠಿಯಾಗಿದ್ದ ಬೋರಿಸ್ ವ್ಯಾಲ್ಯೂಡ್‌ರನ್ನು ಮದುವೆಯಾದಳು. ಸೋಷಿಯಲಿಸ್ಟ್ ಪಕ್ಷದ ಸದಸ್ಯೆಯಾದಳು. ರಾಜಕೀಯ ಮೆಟ್ಟಿಲುಗಳನ್ನು ಏರುತ್ತ 2012ರಲ್ಲಿ ಮಹಿಳಾ ವ್ಯವಹಾರ ಸಚಿವೆಯಾಗಿ ಫ್ರೆಂಚ್ ಕ್ಯಾಬಿನೆಟ್‌ಗೆ ಆಯ್ಕೆಯಾದಳು. 2014ರಲ್ಲಿ ಕ್ಯಾಬಿನೆಟ್ ಪುನರ್‌ರಚನೆಯಾದಾಗ ಆಕೆ ದೇಶದ ಶಿಕ್ಷಣ ಸಚಿವೆಯಾದಳು. ಇದು ತೀರ ಕೆಳಸ್ತರದಿಂದ ವಲಸೆ ಹೊಂದಿ ಬಂದ ಬಾಲಕಿಯ ಯಶೋಗಾಥೆ.

ಬಾಲ್ಯದಲ್ಲಿದ್ದಂತೆಯೇ ಜೀವನ ಮುಂದುವರೆಯಲಿಲ್ಲ. ಅದು ಮಾಗುವಿಕೆಯನ್ನು ಕಂಡಿತು. ಅಂತೆಯೇ ಆಕೆಯ ಸಾಧನೆ, ಮಹಿಮೆ ಜಗತ್ತಿಗೆ ಸಾಬೀತಾಯಿತು. ಕಗ್ಗದ ಚಿಂತನೆ ಅದೇ. ಮರದಲ್ಲೊಂದು ಪೀಚು ಕಾಯಿ, ಅದನ್ನು ಕಿತ್ತಿದರೆ ಅದರ ಬದುಕು ಮುಗಿಯಿತು. ರುಚಿಯೋ ಓಗರು, ಕಹಿ. ಆದರೆ ಅದು ಮರದಲ್ಲೇ ಉಳಿದಿದ್ದರೆ, ಅದು ಮರದ ಸಾರಸರ್ವಸ್ವವನ್ನು ಹೀರಿಕೊಂಡು, ರಸದುಂಬಿ ಹಣ್ಣಾಗುತ್ತದೆ, ಸಿಹಿಯಾಗುತ್ತದೆ. ಮನುಷ್ಯನ ಬದುಕೂ ಹಾಗೆಯೇ. ಅದು ಮಾಗಬೇಕು. ಅನುಭವದಿಂದ, ಓದಿನಿಂದ, ಹಿರಿಯರ ಸಂಪರ್ಕದಿಂದ, ಲೋಕದರ್ಶನದಿಂದ. ಅದರಿಂದ ವ್ಯಕ್ತಿತ್ವ ದೊಡ್ಡದಾಗುತ್ತದೆ. ಅದರ ಮಹಿಮೆ ಪ್ರಪಂಚಕ್ಕೆ ತಿಳಿಯುತ್ತದೆ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮಾರ್ಚ್ 18, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ-ಶಿಶಿರ ಋತು ಮೀನ ಮಾಸದ 04 ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ಪೂರ್ಣಿಮಾ ಗಂ. 12-48 ನಕ್ಷತ್ರ: ಉತ್ತರಫಲ್ಗುನಿ ಗಂ. 24-18 ಯೋಗ: ಗಂಡ ಗಂ. 23-14, ಕರಣ: ಬವ ಗಂ. 12-48.
ರಾಹುಕಾಲ : ಬೆಳಿಗ್ಗೆ 10:30 – 12:00 ಸೂರ್ಯೋದಯ : 06-39 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 14 ಶಬನ್ ದಿನ ವಿಶೇಷ : ಹೋಳಿ, ಡೋಲಾಯಾತ್ರ, ಶ್ರೀ ಚೈತನ್ಯರ ಜನ್ಮದಿನ, ಫಂಗಿನಿ ಉತ್ತಿರಮ್, ಪೂರ್ಣಿಮಾ ಜ್ಯೂಯಿಷ್
ಅದೃಷ್ಟ ಸಂಖ್ಯೆ: 4, 13

ಮೇಷ: ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದು ಮಾರ್ಗದರ್ಶಿಗಳ ಮಾತಿನಂತೆ ಧಾರ್ಮಿಕ ಚುಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಮೀನುಗಾರರು ಉದ್ಯೋಗ ನಿಮಿತ್ತವಾಗಿ ಸಮುದ್ರಯಾನ ಮಾಡುವಾಗ ಜಾಗರೂಕತೆ ವಹಿಸಿ.

ವೃಷಭ: ಕೋರ್ಟ್ ಕೆಲಸಗಳಿಗಾಗಿ ಹಿರಿಯ ಅಧಿಕಾರಿಗಳ ಸಲಹೆಯನ್ನು ಪಡೆಯುವುದು ಅವಶ್ಯಕ. ತಾಂತ್ರಿಕ ಕ್ಷೇತ್ರದಲ್ಲಿ ದುಡಿಯುವವರಿಗೆ ಅನಿರೀಕ್ಷಿತವಾಗಿ ಹೊಸ ಉದ್ಯೋಗ ದೊರೆತು ಸಂತೋಷ. ಆತ್ಮವಿಶ್ವಾಸ ಹೆಚ್ಚಲಿದೆ.

ಮಿಥುನ: ಧೈರ್ಯದಿಂದ ದೊಡ್ಡ ದೊಡ್ಡ ಯೋಜನೆ ಕೈಗೊಳ್ಳಬಹುದು, ಆದರೆ ಹಣದ ವಿಚಾರದಲ್ಲಿ ಎಚ್ಚರ ವಹಿಸಿ. ಸಂಬಂಧಿಕರಲ್ಲಿ ಹಣದ ವ್ಯವಹಾರ ಬೇಡ. ಆಪ್ತರು ಮತ್ತು ನೆರೆಯವರೊಂದಿಗೆ ಬಾಂಧವ್ಯ ಉತ್ತಮಗೊಳ್ಳುವುದು.

ಕರ್ಕಾಟಕ: ಸಮಯಕ್ಕೆ ಸರಿಯಾಗಿ ಪೌಷ್ಟಿಕ ಆಹಾರ ಸೇವಿಸುವ ಅಭ್ಯಾಸ ಮಾಡುವುದರಿಂದ ಆರೋಗ್ಯ ವೃದ್ಧಿಸುವುದು. ವಿದ್ಯಾರ್ಥಿಗಳು ವಿಜ್ಞಾನ ವಿಷಯದಲ್ಲಿ ಯಶಸ್ಸು ಗಳಿಸಲು ಪರಿಶ್ರಮ ಪಡಬೇಕು.

ಸಿಂಹ: ಆದಾಯ ಮತ್ತು ಖರ್ಚುಗಳನ್ನು ಸರಿದೂಗಿಸಿಕೊಳ್ಳುವುದು ಕಷ್ಟವೆನಿಸುವುದಿಲ್ಲ. ನಿಮ್ಮ ಪ್ರತಿಭೆ ಮತ್ತು ಕೌಶಲಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ. ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ ಎನ್ನಿಸುವುದು.

ಕನ್ಯಾ: ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳುವುದು ನಿಮ್ಮ ಕೈಗೆ ಬಿಟ್ಟ ವಿಷಯ. ಭೂಮಿಯ ಅದರಲ್ಲೂ ಕೃಷಿ ಭೂಮಿಯ ಖರೀದಿ, ಮಾರಾಟದಂತಹ ವ್ಯವಹಾರದಿಂದ ಅಧಿಕ ಲಾಭ.

ತುಲಾ: ಸಮಾಜದಲ್ಲಿ ಗಣ್ಯವ್ಯಕ್ತಿಯಾಗಿರುವವರನ್ನು ನೋಡುವ, ಅವರಲ್ಲಿ ಮಾತನಾಡುವ ಅವಕಾಶ. ಮಕ್ಕಳು ವಿದ್ಯಾಭ್ಯಾಸದ ಕಡೆ ಗಮನ ಹರಿಸಿ, ಏಕಾಗ್ರತೆ ಕಾಯ್ದುಕೊಳ್ಳಿ. ಧ್ಯಾನ ಹಾಗೂ ಯೋಗದ ಅಭ್ಯಾಸದಿಂದ ಅನುಕೂಲ.

ವೃಶ್ಚಿಕ: ಹಿರಿಯರ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಲೇವಾದೇವಿ ವ್ಯವಹಾರಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ. ಸಂಶೋಧನಾ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಮುನ್ನಡೆ.

ಧನು: ಕುಡಿಯುವ ನೀರಿನ ಶುದ್ಧತೆ ಗಮನಿಸಿ. ಉದ್ಯೋಗದಲ್ಲಿನ ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಸಹೋದ್ಯೋಗಿಗಳ ಅಥವಾ ನೆರೆಹೊರೆಯವರ ವೈಷಮ್ಯಗಳು ಅನುಭವಕ್ಕೆ ಬರಲಿದೆ.

ಮಕರ: ಕಾಯಕವೇ ಕೈಲಾಸವೆಂದು ದುಡಿಯುವ ನಿಮಗೆ ಆಫೀಸಿನಲ್ಲಿ ಸ್ಥಾನಮಾನಗಳು ದೊರೆಯಲಿದೆ. ಶ್ರಮಜೀವಿಗಳಿಗೆ ಉತ್ತಮ ಆದಾಯ. ನಿಮ್ಮ ಯೋಜನೆಗಳು ಸರಿಯಾದ ಹಾದಿಯಲ್ಲಿ ಸಾಗುತ್ತಿರುವುದರಿಂದ ಸಮಾಧಾನ.

ಕುಂಭ: ತಾಳ್ಮೆ ಈ ದಿನದ ಮೂಲಮಂತ್ರವಾಗಲಿದೆ. ಯಾವುದೇ ವಿಚಾರದಲ್ಲಾದರೂ ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆ ಮುಖ್ಯವಾಗಿ ಕಾಪಾಡಿಕೊಳ್ಳಿರಿ. ಪ್ರೀತಿ ಪಾತ್ರರೊಡನೆ ಆತ್ಮೀಯ ಒಡನಾಟ ಉಳಿಸಿಕೊಳ್ಳಿರಿ.


ಮೀನ: ದೈನಂದಿನ ಖರ್ಚುವೆಚ್ಚ ಹಾಗೂ ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳುವಿರಿ. ಬಹಳ ದಿನಗಳ ನಂತರ ಈ ರೀತಿಯ ಅದ್ಭುತ ನಿರ್ಣಯವನ್ನು ಕೈಗೊಂಡಿರುವ ನಿಮಗೆ ಶುಭವಾಗುವುದು.

ಪದಬಂಧ 4901

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಪ್ಪವಾಗಿರುವ ತರ್ಜುಮೆಗಾರ (5)
3.ಉತ್ಪತ್ತಿ ಸ್ಥಾನವೂ ಆಗಿರುವ ಧಾನ್ಯ (2)
5.ದಾವಣಿ ಧರಿಸಿ ಹೇಳಿದ ಜನಪದ ಹಾಡು (3)
6.ಹದಿನೈದು ದಿನಗಳ ಅವಧಿ (2)
8.ಪದ ಹೇಳಿ ಪಡೆದಿರುವ ಡಿಗ್ರಿ (3)
10.ತಕಲಿ ಹಿಡಿದಿರುವ ಬಂಟ! (2)
11.ಹಗರಣದಲ್ಲಿ ಸಿಕ್ಕಿರುವ ದುಡ್ಡು (2)
12.ಮಗನಿಗೆ ಇದು ಸಲೀಸು ಬಿಡಿ! (3)
14.ಸುಮನೋಹರವಾಗಿರುವ ಪುಷ್ಪ (2)
16.ವಿಧಿಯನ್ನು ನಿರ್ಣಯಿಸುವವನು (3)
17.ರೈಲು ಬಂಡಿಯ ಬಿಡಿ ಗಾಡಿ (2)
18.ಬೆಲೆಬಾಳುವ ಮಣಿ ಪೋಣಿಸಿದ್ದು (5)

ಮೇಲಿಂದ ಕೆಳಕ್ಕೆ
1. ಈ ರೀತಿ ಬಳಿಯುವುದು (4)
2. ಲಲಿತ ವಿದ್ಯೆಯನ್ನು ಬಲ್ಲವನು (4)
4.ಗೆಲುವನ್ನು ಪಡೆದವನೀತ (4)
7.ಹಣ ಇರಿಸಿಕೊಂಡಿರುವ ಜೈನ ಸನ್ಯಾಸಿ! (3)
8.ಹೀಗೆ ವಾಚನ ಮಾಡು (3)
9.ಬಿಡುವು ಹೀಗೆ ದೊರೆತಿದೆ (3)
10.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
11.ಕಗ್ಗೊಲೆಯ ಘಟನೆ (4)
13.ಈ ತರದ ಅನ್ಯಮಾರ್ಗ (4)
15.ಮತದಲ್ಲಿರುವ ಉದ್ದೇಶ ಗೊತ್ತಾಯಿತೇ? (4)



4900ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರವಿ 2.ಸಮೀಕ್ಷಕ
5.ಪ್ರಥಮಾ 6.ಕಶೇರು
8.ಸುಭಗ 10.ಆನಂದಾಶ್ರು
11.ರಕ್ತಗತ 12.ತಮಾಳ
14.ಕದಂಬ 16.ಲಾಲಸ
18.ಅವಧಾನಿ 19.ಖಗೋಳ

ಮೇಲಿಂದ ಕೆಳಕ್ಕೆ:
2.ವಿಪ್ರ 3.ಸಮಾರಂಭ
4.ಕ್ಷಣಿಕ 7.ರುದಿತ
8.ಸುಶ್ರುತ 9.ಗರಳ
10.ಆಸ್ತಿಕ 13.ಮಾತುಲಾನಿ
15.ಬಡವ 17.ಸಖ

ಸುಡೊಕು 5287

	7	9			3		8	
	4			8		2	5	9
8	1		2	6		7		
	8					1		5
	9	2	8	1	5		6	
5						8		
9		7	5					
	5			7	2		4	
4	3		6		1			2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5286 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,975
ಇಂದಿನ ಅಂತ್ಯ	17,287
▲	312
ದಿನದ ಗರಿಷ್ಠ	17,344

ವಿನಿಮಯ ದರ

$ ಡಾಲರ್	75.84
£ ಪೌಂಡ್	99.96
€ ಯುರೊ	83.79
¥ ಯೆನ್ (100ಕ್ಕೆ)	64

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹395
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹398

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1545 (1550)
ಸೂರ್ಯಕಾಂತಿ (ರಿಫೈನ್ಡ್)	1900 (1900)
ಪಾಮೋಲಿನ್	₹1517 (1538)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಮಂಗಳೂರು	₹7500-13523
ಪುತ್ತೂರು	₹4000-10500
ತುರುವೇಕೆರೆ	₹17300-17300

ಮಹಿಳಾ ಸಿಬ್ಬಂದಿ ಶೇ 50ಕ್ಕೆ ಏರಿಕೆ: ಬ್ರಿಟಾನಿಯಾ

ಕೋಲ್ಕತ್ತ (ಪಿಟಿಐ): ಬ್ರಿಟಾನಿಯಾ ಇಂಡಸ್ಟ್ರೀಸ್ 2024ರ ಒಳಗಾಗಿ ಕಂಪನಿಯಲ್ಲಿನ ಒಟ್ಟಾರೆ ಸಿಬ್ಬಂದಿಯಲ್ಲಿ ಮಹಿಳೆಯರ ಪ್ರಮಾಣವನ್ನು ಶೇಕಡ 38ರಿಂದ ಶೇ 50ಕ್ಕೆ ಹೆಚ್ಚಿಸುವ ಗುರಿ ಇಟ್ಟುಕೊಂಡಿದೆ.

'ಕಂಪನಿಯಲ್ಲಿ ಲಿಂಗ ಸಮಾನತೆ ಉತ್ತೇಜಿಸಲು ಬಯಸುತ್ತೇವೆ. ಗುವಾಹಟಿಯಲ್ಲಿ ಇರುವ ಘಟಕದಲ್ಲಿನ ಒಟ್ಟಾರೆ ಸಿಬ್ಬಂದಿಯಲ್ಲಿ ಮಹಿಳಾ ಸಿಬ್ಬಂದಿ ಪ್ರಮಾಣ ಶೇ 60ರಷ್ಟು ಇದ್ದು ಅದನ್ನು ಶೇ 65ಕ್ಕೆ ಹೆಚ್ಚಿಸಲಾಗುವುದು' ಎಂದು ಕಂಪನಿಯ ಮುಖ್ಯ ಮಾರುಕಟ್ಟೆ ಅಧಿಕಾರಿ (ಸಿಎಂಒ) ಅಮಿತ್ ದೋಷಿ ತಿಳಿಸಿದ್ದಾರೆ.

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

1ನೇ ದರ್ಜೆ ₹18000-20000

2ನೇ ದರ್ಜೆ ₹10000-16000

ಭಾರತಕ್ಕೆ ರಿಯಾಯಿತಿ ದರದಲ್ಲಿ ತೈಲ ಮಾರುತ್ತಿರುವ ರಷ್ಯಾ: ರಿಲಯನ್ಸ್ ಹಿಂದೇಟು

ಎಚ್‌ಪಿ, ಎಂಆರ್‌ಪಿಎಲ್‌ನಿಂದ ಖರೀದಿ

ನವದೆಹಲಿ (ರಾಯಿಟರ್ಸ್/ಪಿಟಿಐ): ಕೇಂದ್ರ ಸರ್ಕಾರದ ಒಡೆತನದ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ರಷ್ಯಾದಿಂದ ಕಚ್ಚಾ ತೈಲ ಖರೀದಿಸಿದೆ. ಆದರೆ, ಪಾಶ್ಚಿಮಾತ್ಯ ದೇಶಗಳು ಹೇರಿರುವ ನಿರ್ಬಂಧದ ಕಾರಣದಿಂದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ರಷ್ಯಾದಿಂದ ಕಚ್ಚಾ ತೈಲ ಖರೀದಿಸದೆ ಇರುವ ಸಾಧ್ಯತೆ ಇದೆ.

10 ಲಕ್ಷ ಬ್ಯಾರಲ್ ಯೂರಲ್ಸ್ ಕಚ್ಚಾ ತೈಲ ಖರೀದಿಗೆ ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಕಂಪನಿಯು ಟೆಂಡರ್ ಕರೆದಿದೆ.

'ರಷ್ಯಾದಿಂದ ಖರೀದಿಸಲು ಸಾಧ್ಯವಾದರೂ, ನಿರ್ಬಂಧಗಳ ಕಾರಣದಿಂದಾಗಿ ನಾವು ಅದರಿಂದ ದೂರ ಉಳಿಯುತ್ತೇವೆ' ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ರಾಜೇಶ್ ರಾವತ್ ಹೇಳಿದ್ದಾರೆ. ರಿಲಯನ್ಸ್ ಕಂಪನಿಯು ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುವುದು ಮಧ್ಯಪ್ರಾಚ್ಯದ ದೇಶಗಳು ಹಾಗೂ ಅಮೆರಿಕದಿಂದ.

ಪಾಶ್ಚಿಮಾತ್ಯ ದೇಶಗಳು ಹೇರಿರುವ ನಿರ್ಬಂಧದ ಕಾರಣದಿಂದಾಗಿ ಹಲವು ಕಂಪನಿಗಳು ಮತ್ತು ದೇಶಗಳು ರಷ್ಯಾದಿಂದ ಕಚ್ಚಾ ತೈಲ ತರಿಸಿಕೊಳ್ಳುತ್ತಿಲ್ಲ. ರಷ್ಯಾ ದೇಶವು ಉಕ್ರೇನ್ ಮೇಲೆ ಆಕ್ರಮಣ ನಡೆಸಿದ ನಂತರದಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ರಷ್ಯಾದಿಂದ 30 ಲಕ್ಷ ಬ್ಯಾರಲ್ ಯೂರಲ್ಸ್ ಕಚ್ಚಾ ತೈಲ ಖರೀದಿಸಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಗೆ ಹೋಲಿಸಿದರೆ, ಪ್ರತಿ ಬ್ಯಾರಲ್‌ಗೆ 20–25 ಡಾಲರ್ ಕಡಿಮೆ ಬೆಲೆಗೆ ಯೂರಲ್ಸ್ ಕಚ್ಚಾ ತೈಲವನ್ನು ಐಒಸಿ ಖರೀದಿಸಿದೆ.

ಎಚ್‌ಪಿಸಿಎಲ್ ಕಂಪನಿಯು ರಷ್ಯಾದಿಂದ 20 ಲಕ್ಷ ಬ್ಯಾರೆಲ್ ಯೂರಲ್ಸ್ ಕಚ್ಚಾ ತೈಲ ಖರೀದಿಸಿದೆ ಎಂದು ಮೂಲಗಳು ತಿಳಿಸಿವೆ. ಎಚ್‌ಪಿಸಿಎಲ್ ಹೀಗೆ ಖರೀದಿಸುತ್ತಿರುವುದು ಬಹಳ ಅಪರೂಪ. ಯುರೋಪಿನ ವ್ಯಾಪಾರಿ ಕಂಪನಿ ವಿಟೋಲ್‌ನ ಮೂಲಕ ಈ ಖರೀದಿ ನಡೆದಿದೆ.

ಐಒಸಿ ಕಂಪನಿಯು ರಷ್ಯಾದ ರೊಸ್ನೆಫ್ಟ್ ಕಂಪನಿ ಜೊತೆ 2020ರಿಂದಲೂ ಒಪ್ಪಂದ ಹೊಂದಿದೆ. ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವ ವೆಚ್ಚ ಹೆಚ್ಚು ಎಂಬ ಕಾರಣಕ್ಕೆ, ಅಲ್ಲಿಂದ ತೈಲ ತರಿಸಿಕೊಳ್ಳುತ್ತಿರಲಿಲ್ಲ. ಆದರೆ, ಈಗ ರಿಯಾಯಿತಿ ಬೆಲೆಯಲ್ಲಿ ತೈಲ ಒದಗಿಸಲು ರಷ್ಯಾ ಮುಂದಾಗಿರುವ ಕಾರಣ, ಭಾರತದ ಕಂಪನಿಗಳು ಆ ಕಡೆ ಮುಖ ಮಾಡಿವೆ ಎಂದು ಮೂಲಗಳು ಹೇಳಿವೆ.

ಆರ್ಥಿಕ ನಿರ್ಬಂಧಗಳ ಕಾರಣದಿಂದಾಗಿ ತೈಲದ ಸಾಗಣೆ ಹಾಗೂ ವಿಮೆ ವಿಚಾರದಲ್ಲಿ ತೊಂದರೆ ಎದುರಾಗದಿರಲಿ ಎಂದು ಭಾರತದ ಕಂಪನಿಗಳು, ಸಾಗಣೆಯ ಹೊಣೆಯನ್ನು ವರ್ತಕರಿಗೇ ವಹಿಸುತ್ತಿವೆ. ಸದ್ಯಕ್ಕೆ ಪಾವತಿಗಳು ಡಾಲರ್ ಮೂಲಕ ನಡೆಯುತ್ತಿವೆ ಎಂದು ಗೊತ್ತಾಗಿದೆ. ರಷ್ಯಾದಿಂದ ತೈಲ ಮತ್ತು ಇತರ ಇಂಧನಗಳನ್ನು ಖರೀದಿಸಿ, ಅಂತರರಾಷ್ಟ್ರೀಯ ಪಾವತಿ ವ್ಯವಸ್ಥೆ ಮೂಲಕ ಹಣ ಕೊಡಲು ಅವಕಾಶ ಇದೆ.


ರಷ್ಯಾದಿಂದ ವಿನಾಯಿತಿ ದರದಲ್ಲಿ ಕಚ್ಚಾ ತೈಲ ಖರೀದಿಸಿದರೆ ಭಾರತವು ತಾನು ವಿಧಿಸಿದ ನಿರ್ಬಂಧಗಳನ್ನು ಉಲ್ಲಂಘಿಸಿದಂತೆ ಆಗುವುದಿಲ್ಲ ಎಂದು ಅಮೆರಿಕವು ಸ್ಪಷ್ಟಪಡಿಸಿದೆ.

ಮುಖ್ಯಾಂಶಗಳು

- ಬ್ಯಾರಲ್‌ಗೆ 25 ಡಾಲರ್ ಕಡಿಮೆ ಬೆಲೆಗೆ ಮಾರಾಟ
- 10 ಲಕ್ಷ ಬ್ಯಾರಲ್ ಯೂರಲ್ಸ್ ತೈಲ ಖರೀದಿಗೆ ಎಂಆರ್‌ಪಿಎಲ್ ಟೆಂಡರ್
- ಡಾಲರ್ ಮೂಲಕವೇ ಪಾವತಿ

ತೈಲ ಬೆಲೆ ಹೆಚ್ಚಳ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಗುರುವಾರ ಶೇಕಡ 3.97ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 101.91 ಡಾಲರ್‌ಗೆ ತಲುಪಿದೆ.



ಸುದ್ದಿ 2 ನಿಮಿಷ

ಬಿಪಿಸಿಎಲ್‌ನಿಂದ ಧ್ವನಿ ಆಧಾರಿತ ಎಲ್‌ಪಿಜಿ ಬುಕಿಂಗ್, ಪಾವತಿ ಸೌಲಭ್ಯ

ನವದೆಹಲಿ (ಪಿಟಿಐ): ಇಂಟರ್ನೆಟ್ ಸಂಪರ್ಕವಿಲ್ಲದ ಫೋನ್ ಬಳಸುವ ಗ್ರಾಹಕರ ಅನುಕೂಲಕ್ಕಾಗಿ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಧ್ವನಿ ಆಧಾರಿತ ಎಲ್‌ಪಿಜಿ ಬುಕಿಂಗ್ ಮತ್ತು ಪಾವತಿ ಸೌಲಭ್ಯಕ್ಕೆ ಗುರುವಾರ ಚಾಲನೆ ನೀಡಿದೆ.

ಇದಕ್ಕಾಗಿ ಅಲ್ಟ್ರಾ ಕ್ಯಾಷ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಜೊತೆ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ. 'ಯುಪಿಐ 123ಪೇ' ಮೂಲಕ ಗ್ರಾಹಕರು ಹಣ ಪಾವತಿ ಮಾಡಬಹುದಾಗಿದೆ ಎಂದು ತಿಳಿಸಿದೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು 'ಯುಪಿಐ 123ಪೇ' ಸೇವೆಗೆ ಕಳೆದ ವಾರವಷ್ಟೇ ಚಾಲನೆ ನೀಡಿದ್ದರು.



ಭಾರತ್ ಗ್ಯಾಸ್ ಗ್ರಾಹಕರು 080-4516-3554 ಸಂಖ್ಯೆಗೆ ಕರೆ ಮಾಡಿ ಗ್ಯಾಸ್ ಬುಕ್ ಮಾಡಬಹುದು ಮತ್ತು ಸುರಕ್ಷಿತವಾಗಿ ಹಣ ಪಾವತಿಸಬಹುದು ಎಂದು ಕಂಪನಿ ಹೇಳಿದೆ. ಗ್ರಾಮೀಣ ಭಾಗದಲ್ಲಿ ಇರುವ ಸುಮಾರು ನಾಲ್ಕು ಕೋಟಿ ಗ್ರಾಹಕರಿಗೆ ಇದರಿಂದ ಅನುಕೂಲ ಆಗಲಿದೆ ಎಂದು ಕಂಪನಿಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನದ ದರ ₹ 249ರಷ್ಟು, ಬೆಳ್ಳಿ ಧಾರಣೆ ₹ 365ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿದೆ. 10 ಗ್ರಾಂ ಚಿನ್ನದ ದರ ₹ 249ರಷ್ಟು ಹೆಚ್ಚಾಗಿ ₹ 51,500ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 365ರಷ್ಟು ಏರಿಕೆ ಕಂಡು ₹ 68,218ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದು ದೇಶಿ ಮಾರುಕಟ್ಟೆಯಲ್ಲಿಯೂ ದರ ಹೆಚ್ಚಳಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಅಮೆರಿಕದ ಬಾಂಡ್ ಗಳಿಕೆಯು ಕಡಿಮೆ ಆಗಿದ್ದರಿಂದ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ಹೇಳಿದ್ದಾರೆ.

ಅಧಿಕಾರಶಾಹಿ ಅಡೆತಡೆ ನಿವಾರಣೆ ಅಗತ್ಯ: ಡಬ್ಲ್ಯುಜಿಸಿ

'ಚಿನ್ನ ಉತ್ಪಾದನೆ ಹೆಚ್ಚಳ ಸಾಧ್ಯ'

ಮುಂಬೈ (ರಾಯಿಟರ್ಸ್): ಭಾರತದಲ್ಲಿ ಚಿನ್ನ ಉದ್ಯಮದಲ್ಲಿ ಹೂಡಿಕೆಗೆ ಉತ್ತೇಜನ ನೀಡಿದಲ್ಲಿ, ಅಧಿಕಾರಿಗಳ ಮಟ್ಟದಲ್ಲಿ ಇರುವ ಅಡೆತಡೆಗಳನ್ನು ನಿವಾರಿಸಿದಲ್ಲಿ ವಾರ್ಷಿಕ ಚಿನ್ನ ಉತ್ಪಾದನೆಯು ಈಗಿರುವ 1.6 ಟನ್‌ಗಳಿಂದ 20 ಟನ್‌ಗಳಿಗೆ ಹೆಚ್ಚಾಗಲಿದೆ ಎಂದು ವಿಶ್ವ ಚಿನ್ನ ಸಮಿತಿಯು (ಡಬ್ಲ್ಯುಜಿಸಿ) ತನ್ನ ವರದಿಯಲ್ಲಿ ಹೇಳಿದೆ.

ಚಿನ್ನ ಬಳಕೆಯಲ್ಲಿ ಜಗತ್ತಿನಲ್ಲಿ ಎರಡನೆಯ ಸ್ಥಾನದಲ್ಲಿರುವ ಭಾರತವು ತನ್ನ ಬೇಡಿಕೆಯ ಬಹುಪಾಲನ್ನು ಆಮದು ಮೂಲಕವೇ ಪೂರೈಸಿಕೊಳ್ಳುತ್ತಿದೆ. ದೇಶದಲ್ಲಿ ಉತ್ಪಾದನೆ ಹೆಚ್ಚಾದರೆ ಆಮದು ಪ್ರಮಾಣವನ್ನು ತಗ್ಗಿಸಬಹುದಾಗಿದೆ.

2021ರಲ್ಲಿ 1,050 ಟನ್ ಚಿನ್ನ ಆಮದು ಮಾಡಿಕೊಳ್ಳಲು ₹ 4.23 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. 2020ರಲ್ಲಿ 430 ಟನ್ ಆಮದಾಗಿತ್ತು.



ಭಾರತದಲ್ಲಿ ಗಣಿಗಾರಿಕೆಗೆ ಪರವಾನಗಿ ಪಡೆಯಲು ದೀರ್ಘ ಪ್ರಕ್ರಿಯೆ ಅನುಸರಿಸಬೇಕು. ಹಲವು ಸಂಸ್ಥೆಗಳ ಒಪ್ಪಿಗೆ ಪಡೆಯಬೇಕು. ಈ ಕಾರಣಗಳಿಂದಾಗಿ ಮುಖ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳು ಹೂಡಿಕೆಯಿಂದ ಹಿಂದೆ ಸರಿಯುತ್ತಿವೆ ಎಂದು ಸಮಿತಿಯು ತಿಳಿಸಿದೆ.

ಬಹುತೇಕ ಚಿನ್ನದ ಗಣಿಗಳು ಇರುವ ಪ್ರದೇಶಗಳಲ್ಲಿ ರಸ್ತೆ ಮತ್ತು ರೈಲು ಸಂಪರ್ಕ ಸರಿಯಾಗಿಲ್ಲ. ಇದರಿಂದಾಗಿ ಸರಕು ಸಾಗಣೆ ಕಷ್ಟವಾಗುವುದಷ್ಟೇ ಅಲ್ಲದೆ ದುಬಾರಿಯೂ ಆಗುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕರ್ನಾಟಕದಲ್ಲಿ ಇರುವ ಹಟ್ಟಿ ಚಿನ್ನದ ಗಣಿಯಲ್ಲಿ ಸದ್ಯ ನಾಲ್ಕು ಸಾವಿರಕ್ಕೂ ಅಧಿಕ ಕೆಲಸಗಾರರು ಮತ್ತು ಗುತ್ತಿಗೆ ನೌಕರರು ಇದ್ದಾರೆ. ಭಾರತದಲ್ಲಿ ಉತ್ಪಾದನೆ ಆಗುವ ಚಿನ್ನದಲ್ಲಿ ಬಹುಪಾಲು ಇಲ್ಲೇ ಉತ್ಪಾದನೆ ಆಗುತ್ತಿದೆ.


ಚಿನ್ನದ ಗಣಿಗಾರಿಕೆಯು ಇನ್ನೂ 3 ಸಾವಿರದಿಂದ 4 ಸಾವಿರ ಜನರಿಗೆ ಉದ್ಯೋಗ ನೀಡಬಹುದಾಗಿದೆ. ಆದರೆ, ಇದಕ್ಕೆ ₹ 7,600 ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆಯ ಅಗತ್ಯ ಇದೆ ಎಂದು ಡಬ್ಲ್ಯುಜಿಸಿ ಹೇಳಿದೆ.

ಸಹಕಾರ ಸಂಘ ಬಲಪಡಿಸಲು ಕ್ಯಾಂಪ್ಕೊ ಅಧ್ಯಕ್ಷ ಕೊಡ್ಗಿ ಮನವಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಪಾರದರ್ಶಕವಾಗಿ ವಹಿವಾಟು ನಡೆಸುವ ಸಹಕಾರ ಸಂಘಗಳನ್ನು ಬಲಪಡಿಸಲು ಸರ್ಕಾರ ಕ್ರಮಕೈಗೊಳ್ಳಬೇಕು ಎಂದು ಕ್ಯಾಂಪ್ಕೊ ಅಧ್ಯಕ್ಷ ಕಿಶೋರ್‌ಕುಮಾರ್ ಕೊಡ್ಗಿ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಒತ್ತಾಯಿಸಿದ್ದಾರೆ.

'ಎಪಿಎಂಸಿ ಶುಲ್ಕವನ್ನು ಜಿಎಸ್‌ಟಿಯಲ್ಲಿ ವಿಲೀನಗೊಳಿಸುವ ಮೂಲಕ ಕೃಷಿ ಉತ್ಪನ್ನಗಳು ಸಹಕಾರ ವ್ಯವಸ್ಥೆ ಅಡಿಯಲ್ಲಿ ಹೆಚ್ಚು ಮಾರಾಟ ಆಗುವಂತೆ ಕ್ರಮವಹಿಸಬೇಕು. ಇದರಿಂದ ಸಹಕಾರ ಸಂಸ್ಥೆಗಳಿಗೆ, ಕೃಷಿಕರಿಗೆ ಅನುಕೂಲವಾಗುತ್ತದೆ. ಕೆಲವು ಖಾಸಗಿ ವರ್ತಕರು ತೆರಿಗೆ ವಂಚಿಸಿ ಉತ್ಪನ್ನಗಳನ್ನು ಸಾಗಾಟ ಮಾಡುವುದರಿಂದ ಜಿಎಸ್‌ಟಿ ನಷ್ಟವಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಉತ್ಪನ್ನ ಸಾಗಾಟ ಮಾಡುವ ವಾಹನಗಳಿಗೆ ಜಿಪಿಎಸ್ ಅಳವಡಿಸಿ, ಅವುಗಳ ಮೇಲೆ ನಿಗಾವಹಿಸಬೇಕು' ಎಂದು ಆಗ್ರಹಿಸಿದ್ದಾರೆ.



ಕೊಡ್ಗಿ

ಕೆಲವು ತೋಟಗಾರಿಕಾ ಬೆಳೆಗಳಿಗೆ ಕೀಟನಾಶಕವಾಗಿ ಕಾಪರ್ ಸಲ್ಫೇಟ್ ಬಳಸಲಾಗುತ್ತದೆ. ಇದರ ಮೇಲಿನ ಶೇ 18ರ ಜಿಎಸ್‌ಟಿ ಹಾಗೂ ಮೈಕ್ರೊ ನ್ಯೂಟ್ರಿಯೆಂಟ್ ಮೇಲಿನ ಶೇ 18ರ ಜಿಎಸ್‌ಟಿಯನ್ನು ಶೇ 5ಕ್ಕೆ ಇಳಿಸಬೇಕು. ಪ್ರಸ್ತುತ ಪಾನ್ ಮಸಾಲಾ ಉತ್ಪನ್ನಕ್ಕೆ ಶೇ 28ರಷ್ಟು ಜಿಎಸ್‌ಟಿ ಮತ್ತು ಶೇ 60ರಷ್ಟು ಮೇಲ್ತೆರಿಗೆ ವಿಧಿಸಲಾಗುತ್ತಿದೆ. ಪಾನ್ ಮಸಾಲಾ ತಂಬಾಕುರಹಿತ ಆಗಿರುವುದರಿಂದ ಅದರ ತೆರಿಗೆ ಮನ್ನಾ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	45719-46129
ಬೆಟ್ಟೆ	36449-36889
ಕೆಂಪುಗೋಟು	30700-31100
ರಾಶಿ	45239-45669
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	21599-32099
ಕೋಕ	14509-26399
ಹಳೆಚಾಲಿ	46599-47569
ಹೊಸಚಾಲಿ	34041-39239
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22099-29899
ಕೋಕ	20889-28990
ಹೊಸಚಾಲಿ	33099-39399
ಕೆಂಪುಗೋಟು	26199-31889
ರಾಶಿ	43099-46429
ತಟ್ಟಿಬೆಟ್ಟೆ	37089-45839
ಶಿರಸಿ	
ಬೆಟ್ಟೆ	35099-44999
ಬಿಳಿಗೋಟು	17296-32410
ಚಾಲಿ	28111-40099
ರಾಶಿ	44108-46491
ಯಲ್ಲಾಪುರ	
ಬಿಳಿಗೋಟು	26029-32212
ಕೋಕ	20169-29030
ಚಾಲಿ	35699-40080
ಕೆಂಪುಗೋಟು	26119-36699
ರಾಶಿ	46610-51920
ತಟ್ಟಿಬೆಟ್ಟೆ	38369-46499
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	222-778
ದ್ವಿತಳಿ	500-922

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15450	15450	217.05 ಸೆಂಟ್ಸ್
ಎಸಿ	7560	7600	7950	
ಆರ್‌ಪಿ	8500	8300	8600	
ಆರ್‌ಸಿ	4000	3900	3960	2148 ಡಾಲರ್ಸ್

ಶ್ರೀಲಂಕಾಕ್ಕೆ ಎಸ್‌ಬಿಐ ಸಾಲ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಶ್ರೀಲಂಕಾ ದೇಶಕ್ಕೆ ಆಹಾರ, ಔಷಧ ಮತ್ತು ಇತರ ಅಗತ್ಯ ವಸ್ತುಗಳನ್ನು ಖರೀದಿಸಲು ಒಟ್ಟು ₹ 7,596 ಕೋಟಿ ಸಾಲ ನೀಡಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಗುರುವಾರ ತಿಳಿಸಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಶ್ರೀಲಂಕಾದ ಹಣಕಾಸು ಸಚಿವ ಬಸಿಲ್ ರಾಜಪಕ್ಸ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದರು. 'ಸಾಲ ನೀಡುವುದಕ್ಕೆ ಸಂಬಂಧಿಸಿದಂತೆ ಎಸ್‌ಬಿಐ ಅಧಿಕಾರಿಗಳು ಮತ್ತು ಶ್ರೀಲಂಕಾ ಸರ್ಕಾರದ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ' ಎಂದು ಸಚಿವಾಲಯ ಟ್ವೀಟ್ ಮಾಡಿದೆ.

ಭಾರತೀಯ ಆಮದು–ರಫ್ತು ಬ್ಯಾಂಕ್ (ಎಕ್ಸಿಂ ಬ್ಯಾಂಕ್) ಈ ಮೊದಲು ಶ್ರೀಲಂಕಾಕ್ಕೆ ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲು ₹ 3,797 ಕೋಟಿ ಸಾಲ ಒದಗಿಸಿತ್ತು.

ಮುಂದುವರಿದ ಗೂಳಿ ಓಟ

ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ಸಕಾರಾತ್ಮಕ ವಹಿವಾಟಿನಿಂದಾಗಿ ದೇಶಿ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ಉತ್ತಮ ವಹಿವಾಟು ನಡೆಯಿತು.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರವನ್ನು ಶೇ 0.25ರಷ್ಟು ಏರಿಕೆ ಮಾಡಿದ್ದು, ಹಣದುಬ್ಬರ ನಿಯಂತ್ರಿಸಲು ಬಡ್ಡಿದರ ಇನ್ನಷ್ಟು ಹೆಚ್ಚಿಸುವ ಸೂಚನೆ ನೀಡಿದೆ. ಹೀಗಿದ್ದರೂ ಷೇರುಪೇಟೆಗಳ ವಹಿವಾಟು ಏರಿಕೆ ಕಂಡಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,048 ಅಂಶ ಏರಿಕೆ ಕಂಡು 57,864 ಅಂಶಗಳಿಗೆ ತಲುಪಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 312 ಅಂಶ ಹೆಚ್ಚಾಗಿ 17,287 ಅಂಶಗಳಿಗೆ ತಲುಪಿದೆ.

ರೂಪಾಯಿ ಮೌಲ್ಯ ಹೆಚ್ಚಳ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 37 ಪೈಸೆ ಹೆಚ್ಚಾಗಿದ್ದು ಒಂದು ಡಾಲರ್‌ಗೆ ₹ 75.84ರಂತೆ ವಿನಿಮಯಗೊಂಡಿದೆ.

ಮುಂಬೈ ಧಾರಣೆ

ಶೇಂಗಾ

17-3-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1510 (1535)
ಪಾಮ್ ವಾರದ ಡೆಲಿವರಿ	1515 (1536)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,300 (51,100)
ಬೆಳ್ಳಿ ಕೆ.ಜಿ 67,950 (67,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೆಎಸ್‌ಎಲ್‌ಟಿಎ ಐಟಿಎಫ್ ಟೂರ್ನಿ: ಸಿದ್ಧಾರ್ಥ್ ರಾವತ್, ಅರ್ಜುನ್ ಖಾಡೆಗೂ ಗೆಲುವು

ಕ್ವಾರ್ಟರ್‌ಫೈನಲ್‌ಗೆ ಮುಕುಂದ್, ನಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎದುರಾಳಿಗಳ ಪ್ರಬಲ ಪೈಪೋಟಿಯನ್ನು ಮೀರಿ ನಿಂತ ಭಾರತದ ಮುಕುಂದ್ ಶಶಿಕುಮಾರ್ ಮತ್ತು ನಿಕ್ಕಿ ಕಳಿಯಂಡ ಪೂಣಚ್ಚ ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ಆಶ್ರಯದ ಎಸ್‌ಕೆಎಂಇ ಐಟಿಎಫ್ ಓಪನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ರಾಜ್ಯ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ಗುರುವಾರ ನಡೆದ ಪಂದ್ಯಗಳಲ್ಲಿ ಭಾರತದ ನಿತಿನ್ ಕುಮಾರ್ ಸಿನ್ಹಾ, ಸಿದ್ಧಾರ್ಥ್ ರಾವತ್, ಅರ್ಜುನ್ ಖಾಡೆ, ಮನೀಷ್ ಸುರೇಶ್ ಕುಮಾರ್ ಮತ್ತು ಬ್ರಿಟನ್‌ನ ಜುಲಿಯನ್ ಕ್ಯಾಶ್ ಅವರೂ ಎಂಟರ ಘಟ್ಟ ಪ್ರವೇಶಿಸಿದರು.

ಅಗ್ರ ಶ್ರೇಯಾಂಕದ ಮುಕುಂದ್ ಶಶಿಕುಮಾರ್ 16ರ ಘಟ್ಟದ ಪಂದ್ಯದಲ್ಲಿ ಅಭಿನವ್ ಸಂಜೀವ್ ಷಣ್ಮುಖಂ ವಿರುದ್ಧ 6-7 (8), 7-5, 6-3ರಲ್ಲಿ ಜಯ ಗಳಿಸಿದರು. ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಚೇತರಿಕೆಯ ಆಟವಾಡಿದ ಮುಕುಂದ್ ಪ್ರೇಕ್ಷಕರ ಮನ ಗೆದ್ದರು.

ಭಾರತದ ಯುವಪ್ರತಿಭೆ ನಿತಿನ್ ಕುಮಾರ್ ಸಿನ್ಹಾ ಅವರ ಸವಾಲಿಗೆ ದಿಟ್ಟ ಉತ್ತರ ನೀಡಿದ ಜುಲಿಯನ್ 4-6, 6-3, 6-2ರಲ್ಲಿ ಪಂದ್ಯ ಗೆದ್ದುಕೊಂಡರು. ಏಳನೇ ಶ್ರೆಯಾಂಕದ ನಿಕ್ಕಿ ಪೂಣಚ್ಚ ಅವರೂ ಮೊದಲ ಸೆಟ್‌ನಲ್ಲಿ ನೀರಸ ಆಟವಾಡಿದ್ದರು. ಆದರೆ ನಂತರ ಗೆಲುವಿನ ಹಾದಿಯಲ್ಲಿ ಸಾಗಿದರು. ನಿಶಾಂತ್ ದಬಾಸ್ ಎದುರಿನ ಪಂದ್ಯದಲ್ಲಿ ಅವರು 0-6, 6-2, 6-2ರಲ್ಲಿ ಜಯ ಗಳಿಸಿದರು.

ಸಿದ್ಧಾರ್ಥ್ ರಾವತ್ ಅವರು ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದಿದ್ದ ಇಶಾಕ್ ಇಕ್ಬಾಲ್ ಅವರನ್ನು 6-4, 7-5ರಲ್ಲಿ ಮಣಿಸಿದರೆ ಅರ್ಜುನ್ ಖಾಡೆ 6-0, 6-3ರಲ್ಲಿ ದಲ್ವಿಂದರ್ ಸಿಂಗ್ ವಿರುದ್ಧ ಗೆಲುವು ಸಾಧಿಸಿದರು. ಅರ್ಹತಾ ಸುತ್ತಿನಿಂದ ಬಂದಿದ್ದ ಜಪಾನ್‌ನ ದೈಸುಕೆ ಸುಮಿಜಾವ ಎದುರು ಸುರೇಶ್ ಕುಮಾರ್ 6-3, 7-6 (3)ರಲ್ಲಿ ಜಯ ಸಾಧಿಸಿದರು.



ಅಭಿನವ್ ಸಂಜೀವ್ ಷಣ್ಮುಖಂ ಎದುರಿನ ಪಂದ್ಯದಲ್ಲಿ ಮುಕುಂದ್ ಶಶಿಕುಮಾರ್ ಚೆಂಡನ್ನು ರಿಟರ್ನ್ ಮಾಡಲು ಮುಂದಾದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ

ಫುಟ್‌ಬಾಲ್ ಲೀಗ್: ಪ್ಲೇ 365 ತಂಡಕ್ಕೆ ಗೆಲುವು

ಬೆಂಗಳೂರು: ಪ್ಲೇ 365 ಎಫ್‌ಸಿ ಮತ್ತು ಆರ್‌ವಿ ಎಫ್‌ಸಿ ತಂಡಗಳು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ 'ಸಿ' ಡಿವಿಷನ್ ಲೀಗ್‌ನಲ್ಲಿ ಕ್ರಮವಾಗಿ ಉತ್ತರ ವಲಯ ಮತ್ತು ದಕ್ಷಿಣ ವಲಯ ಪರವಾಗಿ ಭರ್ಜರಿ ಗೆಲುವು ಸಾಧಿಸಿದವು.

ಮಲ್ಲೇಶ್ವರ ಮೈದಾನದಲ್ಲಿ ನಡೆದ ಉತ್ತರ ವಲಯದ 'ಐ' ಗುಂಪಿನ ಪಂದ್ಯದಲ್ಲಿ ಪ್ಲೇ 365 ತಂಡ 4-2ರಲ್ಲಿ ಗೋಲ್ಡನ್ ಎಫ್‌ಸಿಯನ್ನು ಮಣಿಸಿತು. ಮೋಹನ್ (6ನೇ ನಿಮಿಷ), ಮಹೇಶ್ (14ನೇ ನಿ), ಸೌಬನ್ ಅಹಮ್ಮದ್ (56ನೇ ನಿ) ಮತ್ತು ಸಂಜಯ್ (60ನೇ ನಿ) ವಿಜಯಿ ತಂಡಕ್ಕಾಗಿ ಗೋಲು ಗಳಿಸಿದರು. ಎದುರಾಳಿ ತಂಡಕ್ಕಾಗಿ ಧನುಷ್ (3ನೇ ನಿ) ಮತ್ತು ಸತೀಶ್ (46ನೇ ನಿ) ಗೋಲು ಗಳಿಸಿದರು.

ಕಾಫಿ ಲ್ಯಾಂಡ್ ಮತ್ತು ಬ್ಲ್ಯಾಕ್ ಪ್ಯಾಂಥರ್ಸ್ ನಡುವಿನ ಪಂದ್ಯ ಗೋಲುರಹಿತ ಡ್ರಾದಲ್ಲಿ ಮುಕ್ತಾಯಗೊಂಡಿತು. ರಾಮಮೂರ್ತಿ ನಗರ ಎಫ್‌ಸಿ 3–1ರಲ್ಲಿ ಯಲಹಂಕ ಎಫ್‌ಸಿಯನ್ನು ಸೋಲಿಸಿತು. ರಾಮಮೂರ್ತಿನಗರಕ್ಕಾಗಿ ಪವನ್ ಕುಮಾರ್ (2ನೇ ನಿ), ರುಯೇಶ್ (30ನೇ ನಿ) ಮತ್ತು ಜೀವೇಶ್ (58ನೇ ನಿ), ಯಲಹಂಕ ಪರವಾಗಿ ಶ್ರೀರಾಗ್ (52ನೇ ನಿ) ಗೋಲು ಗಳಿಸಿದರು. ಎಸ್‌ಯುಎಫ್‌ಸಿ ಮೈದಾನದಲ್ಲಿ ನಡೆದ ದಕ್ಷಿಣ ವಲಯದ 'ಎಲ್' ಗುಂಪಿನ ಹಣಾಹಣಿಯಲ್ಲಿ ಆರ್‌ವಿ ಎಫ್‌ಸಿ 5–1ರಲ್ಲಿ ಫ್ರೀಲ್ಯಾನ್ಸ್ ಎಫ್‌ಸಿನ್ನು ಸೋಲಿಸಿತು. ಆರ್‌ವಿಗಾಗಿ ಯಶ್ವಿಕ್ (4, 8, 17 ಮತ್ತು 34ನೇ ನಿ) ಹ್ಯಾಟ್ರಿಕ್‌ನೊಂದಿಗೆ ಮಿಂಚಿದರು. ಧನುಷ್ 29ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು. ಫ್ರೀಲ್ಯಾನ್ಸ್‌ಗಾಗಿ ಜೆರೆಮಿಯಾ (19ನೇ ನಿ) ಗೋಲು ಗಳಿಸಿದರು.

ಮಜಾಜ್ ಎಫ್‌ಸಿ (ಮುಹಮ್ಮದ್ 12ನೇ ನಿ) 1–0ಯಿಂದ ರೊನಾಲ್ಡೊ ಎಫ್‌ಸಿಯನ್ನು ಮಣಿಸಿ ನಾಕೌಟ್ ಹಂತಕ್ಕೆ ಪ್ರವೇಶಿಸಿತು.

ಬ್ಯಾಸ್ಕೆಟ್‌ಬಾಲ್: ದೇಶದ 20 ನಗರಗಳಲ್ಲಿ ಪಂದ್ಯಗಳು

ಇಂದಿನಿಂದ ಐಎನ್‌ಬಿಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಆಯೋಜಿಸಿರುವ 3x3 ರಾಷ್ಟ್ರೀಯ ಲೀಗ್‌ನ ಮೊದಲ ಆವೃತ್ತಿ ಶುಕ್ರವಾರದಿಂದ ನಡೆಯಲಿದೆ.

ಮೇ 29ರ ವರೆಗೆ ಪಂದ್ಯಗಳು ನಡೆಯಲಿವೆ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಫೆಡರೇಷನ್ ಅಧ್ಯಕ್ಷ ಕೆ.ಗೋವಿಂದರಾಜು ಅವರು ತಿಳಿಸಿದರು.

ದೇಶದ 20 ನಗರಗಳಲ್ಲಿ ಏಕಕಾಲದಲ್ಲಿ ಪಂದ್ಯಗಳು ನಡೆಯಲಿದ್ದು ಪುರುಷರು, ಮಹಿಳೆಯರು, 18 ವರ್ಷದೊಳಗಿನ ಪುರುಷರು ಮತ್ತು ಮಹಿಳೆಯರ ವಿಭಾಗಗಳಲ್ಲಿ ಪೈಪೋಟಿ ನಡೆಯಲಿದೆ. ಬೆಂಗಳೂರು, ಐಜ್ವಾಲ್, ಭಾವ್ ನಗರ್, ಭಿಲಾಯ್, ಚಂಡೀಗಢ, ಚೆನ್ನೈ, ಕಟಕ್, ದೆಹಲಿ, ಗುವಾಹಟಿ, ಹೈದರಾಬಾದ್, ಇಂದೋರ್, ಜೈಪುರ, ಕಂಗ್ರಾ, ಕೊಚ್ಚಿ, ಕೋಲ್ಕತ್ತ, ಲುಧಿಯಾನ, ಲಖನೌ, ಮುಂಬೈ, ಪಂಜಿಮ್ ಮತ್ತು ಪುದುಚೇರಿ ನಗರಗಳು ಪಂದ್ಯಗಳಿಗೆ ಆತಿಥ್ಯ ವಹಿಸಲಿವೆ.

ಈ ನಗರಗಳಲ್ಲಿ ನಡೆಯುವ ಲೀಗ್ ಪಂದ್ಯಗಳಲ್ಲಿ ಅಗ್ರ ಸ್ಥಾನ ಗಳಿಸುವ ತಂಡಗಳು ಬೆಂಗಳೂರಿನಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಈ ಪಂದ್ಯಗಳು ಮೇ 27ರಿಂದ 29ರ ವರೆಗೆ ನಡೆಯಲಿವೆ ಎಂದು ಗೋವಿಂದರಾಜ್ ವಿವರಿಸಿದರು.


ಬೆಂಗಳೂರಿನಲ್ಲಿ ವಾರಾಂತ್ಯದಲ್ಲಿ ನಡೆಯಲಿರುವ ಪಂದ್ಯಗಳಲ್ಲಿ ವಿವಿಧ ವಿಭಾಗಗಳ ಒಟ್ಟು 120 ತಂಡಗಳು ಪಾಲ್ಗೊಳ್ಳಲಿವೆ.



ಲೀಗ್‌ನ ಮೊದಲ ಋತುವನ್ನು ಘೋಷಿಸಿದ ಸಂದರ್ಭದಲ್ಲಿ ಲೀಗ್‌ನ ಸಿಇಒ ಪ್ರವೀಣ್ ಬತೀಶ್, ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕೆ. ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ಚಂದ್ರಮುಖಿ ಶರ್ಮಾ ಇದ್ದರು

ಟೆಸ್ಟ್: ರೂಟ್ ಶತಕ

ಬಾರ್ಬಡೀಸ್ (ಎಎಫ್‌ಪಿ): ನಾಯಕ ಜೋ ರೂಟ್ ಅಮೋಘ ಶತಕದ ಬಲದಿಂದ ಇಂಗ್ಲೆಂಡ್ ತಂಡವು ವೆಸ್ಟ್ ಇಂಡೀಸ್ ಎದುರಿನ ಎರಡನೇ ಟೆಸ್ಟ್‌ನ ಮೊದಲ ದಿನ ಉತ್ತಮ ಮೊತ್ತ ಕಲೆಹಾಕಿದೆ.


ಜೋ ರೂಟ್

ಬ್ರಿಜ್‌ಟೌನ್‌ನ ಕಿಂಗ್ಸ್‌ಟನ್ ಓವಲ್‌ನಲ್ಲಿ ಬುಧವಾರ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆತಿಥೇಯ ತಂಡದ ಪೆರುಮಾಳ್ ಮತ್ತು ಜೇಡನ್ ಸೀಲ್ಸ್ ಅವರ ಶಿಸ್ತಿನ ಬೌಲಿಂಗ್ ಮುಂದೆ ಆರಂಭದಲ್ಲಿಯೇ ಇಂಗ್ಲೆಂಡ್ ಕುಸಿಯಿತು.

ಆದರೆ, ಈ ಹಂತದಲ್ಲಿ ಚೆಂದದ ಬ್ಯಾಟಿಂಗ್ ಮಾಡಿದ ರೂಟ್ (ಬ್ಯಾಟಿಂಗ್ 119; 246ಎ, 4X12) ಮತ್ತು ಡ್ಯಾನೀಲ್ ಲಾರೆನ್ಸ್ (91; 150ಎ, 4X13, 6X1) ಅವರ ಜೊತೆಯಾಟದಿಂದಾಗಿ ಇಂಗ್ಲೆಂಡ್ 89.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 244 ರನ್ ಗಳಿಸಿತು. ಜೋ ರೂಟ್ 25ನೇ ಟೆಸ್ಟ್ ಶತಕವಾಗಿದೆ ಇದು.

ರೂಟ್ ಮತ್ತು ಲಾರೆನ್ಸ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 156 ರನ್ ಸೇರಿಸಿದರು. ಐಸಿಸಿ ರ್‍ಯಾಂಕಿಂಗ್‌ನ ಆಲ್‌ರೌಂಡರ್ ವಿಭಾಗದಲ್ಲಿ ಅಗ್ರಸ್ಥಾನಕ್ಕೆ ಮರಳಿರುವ ವಿಂಡೀಸ್‌ನ ಜೇಸನ್ ಹೋಲ್ಡರ್ ಬೌಲಿಂಗ್‌ನಲ್ಲಿ ಜೊತೆಯಾಟ ಮುರಿಯಿತು. ಜೇಸನ್ ಬೌಲಿಂಗ್‌ನಲ್ಲಿ ಬ್ರಾಥ್‌ವೇಟ್ ಪಡೆದ ಕ್ಯಾಚ್‌ಗೆ ಲಾರೆನ್ಸ್ ಔಟಾದರು. ಕೇವಲ ಒಂಬತ್ತು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 89.5 ಓವರ್‌ಗಳಲ್ಲಿ 3ಕ್ಕೆ244 (ಅಲೆಕ್ಸ್ ಲೀಸ್ 30, ಜೋ ರೂಟ್ ಬ್ಯಾಟಿಂಗ್ 119, ಡ್ಯಾನೀಲ್ ಲಾರೆನ್ಸ್ 91, ಜೇಡನ್ ಸೀಲ್ಸ್ 30ಕ್ಕೆ1, ವೀರಸ್ವಾಮಿ ಪೆರುಮಾಳ್ 61ಕ್ಕೆ1, ಜೇಸನ್ ಹೋಲ್ಡರ್ 52ಕ್ಕೆ1) ವಿಂಡೀಸ್ ವಿರುದ್ಧದ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ ಗ್ಲೆನ್ ಮ್ಯಾಕ್ಸ್‌ವೆಲ್ ಅಭಿಪ್ರಾಯ

ಕಠಿಣ ಸವಾಲಾಗಲಿದ್ದಾರೆ 'ನಿರಾಳ ಕೊಹ್ಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕತ್ವದ ಜವಾಬ್ದಾರಿಯನ್ನು ಕಳಚಿಕೊಂಡಿರುವ ವಿರಾಟ್ ಕೊಹ್ಲಿ ಈಗ ನಿರಾಳವಾಗಿದ್ದಾರೆ. ಒತ್ತಡರಹಿತ ವಿರಾಟ್ ಎದುರಾಳಿ ತಂಡಗಳ ಪಾಲಿಗೆ ಕಠಿಣ ಸವಾಲಾಗಬಲ್ಲರು ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ ಗ್ಲೆನ್ ಮ್ಯಾಕ್ಸ್‌ವೆಲ್ ಅಭಿಪ್ರಾಯಪಟ್ಟಿದ್ದಾರೆ.

ವಿರಾಟ್ ಈಚೆಗೆ ಟಿ20 ಮತ್ತು ಟೆಸ್ಟ್ ತಂಡಗಳ ನಾಯಕತ್ವ ಬಿಟ್ಟುಕೊಟ್ಟಿದ್ದರು. ಅಲ್ಲದೇ ಆರ್‌ಸಿಬಿ ನಾಯಕತ್ವವನ್ನೂ ಬಿಟ್ಟಿದ್ದರು. ಏಕದಿನ ಕ್ರಿಕೆಟ್ ತಂಡದ ನಾಯಕತ್ವದಿಂದ ಅವರನ್ನು ಬಿಸಿಸಿಐ ಕೈಬಿಟ್ಟಿತ್ತು. ಈಚೆಗಷ್ಟೇ ಆರ್‌ಸಿಬಿಗೆ ದಕ್ಷಿಣ ಆಫ್ರಿಕಾದ ಆಟಗಾರ ಫಫ್ ಡುಪ್ಲೆಸಿಯನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ.

'ವಿರಾಟ್ ಕೆಲವು ದಿನಗಳಿಂದ ತಮ್ಮ ನೈಜ ಶೈಲಿಯ ಆಟವಾಡುತ್ತಿಲ್ಲ ಎಂಬುದನ್ನು ಗಮನಿಸಿದ್ದೇವೆ. ಆಗ ಅವರ ಮೇಲೆ ನಾಯಕತ್ವದ ಒತ್ತಡದಿಂದ ಆ ರೀತಿಯಾಗಿರಬಹುದು. ಈಗ ಹೊರೆಯನ್ನು ಇಳಿಸಿಕೊಂಡಿದ್ದಾರೆ. ಆದ್ದರಿಂದ ಎದುರಾಳಿ ಆಟಗಾರರಿಗೆ ಇದು ಆತಂಕದ ವಿಷಯ' ಎಂದು ಆಸ್ಟ್ರೇಲಿಯಾದ ಆಟಗಾರ ಮ್ಯಾಕ್ಸ್‌ವೆಲ್ ಆರ್‌ಸಿಬಿ ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ.

'ಈ ನಿರಾಳ ಸ್ಥಿತಿಯಲ್ಲಿ ಅವರು ಮುಂದಿನ ಕೆಲವು ವರ್ಷಗಳವರೆಗೆ ಕ್ರಿಕೆಟ್ ಅನ್ನು ಮನಸಾರೆ ಆಸ್ವಾದಿಸುವರು. ನನ್ನ ಮತ್ತು ಕೊಹ್ಲಿಯ ಒಡನಾಟದ ಆಧಾರದಲ್ಲಿ ಮಾತನಾಡುವುದಾದರೆ, ಈ ವರ್ಷ ಅವರು ಪರಿಪಕ್ವಗೊಂಡಿದ್ದಾರೆ. ತಮ್ಮ ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಭಾವನಾತ್ಮಕವಾಗಿ ವರ್ತಿಸುವ ರೀತಿಯಲ್ಲಿ ಪ್ರಬುದ್ಧತೆ ಇದೆ. ಆಟದ ಬಗ್ಗೆ ಚರ್ಚಿಸುವಾಗ ಬಹಳ ತಾಳ್ಮೆಯುತವಾಗಿ ಇರುತ್ತಾರೆ. ಅತ್ಯುತ್ಸಾಹ ಮತ್ತು ಆಕ್ರಮಣಶೀಲ ಕೊಹ್ಲಿಯನ್ನು ನೋಡಿದ್ದ ನನಗೆ ಅವರ ಈಗಿನ ವರ್ತನೆ ಅಚ್ಚರಿಮೂಡಿಸುತ್ತದೆ. ಇದು ಒಳ್ಳೆಯ ಬೆಳವಣಿಗೆಯೂ ಹೌದು' ಎಂದಿದ್ದಾರೆ.

ಇದೇ 26ರಿಂದ ಐಪಿಎಲ್ 15ನೇ ಆವೃತ್ತಿಯು ಆರಂಭವಾಗಲಿದೆ. ಮುಂಬೈ ಮತ್ತು ಪುಣೆಯಲ್ಲಿ ಪಂದ್ಯಗಳು ನಡೆಯಲಿವೆ. ಈ ಸಲ ಒಟ್ಟು ಹತ್ತು ತಂಡಗಳು ಕಣಕ್ಕಿಳಿಯಲಿವೆ. ಲಖನೌ ಸೂಪರ್ ಜೈಂಟ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳು ಹೊಸದಾಗಿ ಸೇರ್ಪಡೆಯಾಗಿವೆ.



ವಿರಾಟ್ ಕೊಹ್ಲಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್

'ಪಾಂಟಿಂಗ್ ಪಾಠಕ್ಕೆ ಉತ್ಸುಕನಾಗಿದ್ದೇನೆ'

ಮುಂಬೈ (ಪಿಟಿಐ): 'ಕೋಚ್ ರಿಕಿ ಪಾಂಟಿಂಗ್ ಅವರಿಂದ ಬ್ಯಾಟಿಂಗ್ ಕೌಶಲಗಳ ಕುರಿತು ಕಲಿಯಲು ಉತ್ಸುಕನಾಗಿದ್ದೇನೆ. ಇದರಿಂದ ನನ್ನ ಆಟದಲ್ಲಿ ಬಹಳಷ್ಟು ಸುಧಾರಣೆಯಾಗಲಿದೆ' ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್ ರೋವ್‌ಮನ್ ಪೊವೆಲ್ ಹೇಳಿದ್ದಾರೆ. 'ನಾನು ಬಾಲ್ಯದಿಂದಲೂ ರಿಕಿ ಪಾಂಟಿಂಗ್ ಆಟವನ್ನು ನೋಡಿದ್ದೇನೆ. ಅವರ ಬ್ಯಾಟಿಂಗ್‌ಗೆ ಮಂತ್ರಮುಗ್ಧನಾಗಿದ್ದೇನೆ. ಆಸ್ಟ್ರೇಲಿಯಾ ತಂಡಕ್ಕೆ ನಾಯಕನಾಗಿ ಮುನ್ನಡೆಸಿದ ರೀತಿ ಪ್ರಭಾವಶಾಲಿ. ಇದೀಗ ಅವರು ಅಷ್ಟೇ ಯಶಸ್ವಿ ಕೋಚ್ ಆಗಿದ್ದಾರೆ' ವೆಸ್ಟ್ ಇಂಡೀಸ್‌ನ 28 ವರ್ಷದ ಎಂದು ಪೊವೆಲ್ ಹೇಳಿದ್ದಾರೆ.

ಆರ್‌ಸಿಬಿಗೆ ಪ್ಲೇ ಬೋಲ್ಡ್ ಸ್ವಾಗತ

ಮುಂಬೈ ಇಂಡಿಯನ್ಸ್ ತಂಡ ಮತ್ತು ಮಾಯಾನಗರಿ ಮುಂಬೈ ಈ ಬಾರಿ ವಿಭಿನ್ನವಾದ ಪಾತ್ರ ವಹಿಸುತ್ತಿವೆ. 15ನೇ ಆವೃತ್ತಿಯ ಟೂರ್ನಿ ನಡೆಸಲು ಮುಂಬೈ ನಗರಿ ವೇದಿಕೆಯಾಗಿದೆ. ಮುಂಬೈ ಇಂಡಿಯನ್ಸ್ ಸ್ಪರ್ಧಾಕಣದಲ್ಲಿ ತಾನು ಎದುರಿಸಲಿರುವ ತಂಡಗಳಿಗೆ 'ಸ್ವಾಗತ' ಕೋರುತ್ತಿದೆ. ನಗರದ ಆಯಕಟ್ಟಿನ ಸ್ಥಳಗಳಲ್ಲಿ 'ವೆಲ್‌ಕಮ್ ದಿಲ್ ಕೋಲ್ ಕೆ' ಒಕ್ಕಣೆಯಿರುವ ಬಿಲ್‌ಬೋರ್ಡ್ ಅಳವಡಿಸಲಾಗುತ್ತಿದೆ. ಪ್ರತಿಯೊಂದು ತಂಡಕ್ಕೂ ಪ್ರತ್ಯೇಕ ಸ್ವಾಗತ ಫಲಕಗಳನ್ನು ಅಳವಡಿಸಲಾಗುತ್ತಿದೆ.

ಬೆಂಗಳೂರು ತಂಡಕ್ಕೆ 'ಪ್ಲೇ ಬೋಲ್ಡ್', ಗುಜರಾತ್ ಟೈಟನ್ಸ್‌ಗೆ 'ಮಜಾ ಥಿ ರಾಮ್ಸೊ', ಲಖನೌ ಸೂಪರ್ ಜೈಂಟ್ಸ್‌ಗೆ 'ಖೇಲ್ ನವಾಬಿ', ಚೆನ್ನೈ ತಂಡಕ್ಕೆ 'ವಿಷಲ್ ಪೋಡು', ಕೋಲ್ಕತ್ತ ತಂಡಕ್ಕೆ 'ಕೊರ್ಬೊ ಲೊರ್ಬೊ ಜೀತ್ಬೊ', ಪಂಜಾಬ್‌ಗೆ 'ಚಕ್ ದೇ ಪಟ್ಟೆ', ಡೆಲ್ಲಿಗೆ 'ಖೇಲೊ ದಿಲ್ಲಿ', ಹೈದರಾಬಾದ್‌ಗೆ 'ಶೈನ್ ಕರೋಂ' ಮತ್ತು ರಾಜಸ್ಥಾನಕ್ಕೆ 'ಹಲ್ಲಾ ಬೋಲ್' ಎಂಬ ಫಲಕಗಳಿವೆ.

'ಸೃಜನಾತ್ಮಕವಾದ ಕಲೆ ಮತ್ತು ಗೌರವಪೂರ್ವಕ ಒಕ್ಕಣೆಗಳನ್ನು ಬಳಸಿರುವ ಫಲಕಗಳನ್ನು ಎಲ್ಲೆಡೆ ಹಾಕಲಾಗಿದೆ. ನಮ್ಮ ನಗರಕ್ಕೆ ಬರುವ ಪ್ರತಿಯೊಂದು ತಂಡವನ್ನು ವಿಭಿನ್ನ ರೀತಿಯಲ್ಲಿ ಸ್ವಾಗತಿಸುವ ಪ್ರಯತ್ನ ಮಾಡಲಾಗಿದೆ' ಎಂದು ಮುಂಬೈ ಇಂಡಿಯನ್ಸ್ ವಕ್ತಾರ ತಿಳಿಸಿದ್ದಾರೆ.

ಮುಂಬೈನ ಸ್ಥಳೀಯ ಸಾರಿಗೆ ಬಸ್‌ಗಳ ಮೇಲೂ ಐಪಿಎಲ್ ತಂಡಗಳ ಚಿತ್ರಗಳನ್ನು ರಚಿಸಿ ಪ್ರಚಾರ ಮಾಡಲಾಗುತ್ತಿದೆ.



ಡೆಲ್ಲಿ ಕ್ಯಾಪಿಟಲ್ಸ್ ತಂಡದ ರಿಷಭ್ ಪಂತ್ ಸಹ ಆಟಗಾರ ಚೇತನ್ ಸಕಾರಿಯಾ ಅವರಿಗೆ ಬಣ್ಣ ಹಚ್ಚಿ ಗುರುವಾರ ಹೋಳಿ ಆಚರಿಸಿಕೊಂಡರು –ಟ್ವಿಟರ್ ಚಿತ್ರ

ರನ್ ಔಟ್ ನಿಯಮ; ಅಶ್ವಿನ್ ಸ್ವಾಗತ

ಚೆನ್ನೈ (ಪಿಟಿಐ): ಮೆರಿಲ್‌ಬೊನ್ ಕ್ರಿಕೆಟ್ ಕ್ಲಬ್ ಈಚೆಗೆ ನಾನ್‌ಸ್ಟ್ರೈಕರ್ ತುದಿಯ ರನ್‌ಔಟ್ ನಿಯಮ ಪರಿಷ್ಕರಣೆ ಮಾಡಿರುವುದನ್ನು ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಸ್ವಾಗತಿಸಿದ್ದಾರೆ.

ಬೌಲರ್ ಎಸೆತವನ್ನು ರಿಲೀಸ್ ಮಾಡುವ ಮುನ್ನವೇ ನಾನ್‌ಸ್ಟ್ರೈಕರ್ ಬ್ಯಾಟರ್ ಕ್ರೀಸ್ ಬಿಟ್ಟು ಮುಂದೆ ಹೋದಾಗ ರನ್‌ಔಟ್ ಮಾಡುವುದನ್ನು ಈ ಹಿಂದೆ ಕ್ರೀಡಾಸ್ಫೂರ್ತಿಗೆ ವಿರುದ್ಧ ಎಂದು ಹೇಳಲಾಗಿತ್ತು. ಆದರೆ, ಈ ನಿಯಮಕ್ಕೆ ಇತ್ತೀಚೆಗೆ ಎಂಸಿಸಿಯು ತಿದ್ದುಪಡಿ ಮಾಡಿದ್ದು ಇದನ್ನು ರನ್‌ಔಟ್ ಎಂದು ಪರಿಗಣಿಸಲು ಅವಕಾಶ ನೀಡಿದೆ.

ಬೆಂಗಳೂರು ರೇಸ್

ಎಟೋಶಾ ಗೆಲ್ಲುವ ನಿರೀಕ್ಷೆ

ಅಮಥೋಸ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಎಟೋಶಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಟಾರ್ ಶೋ 1, ರಾಪ್ಸೋಡಿ ಇನ್ ಗ್ರೀನ್ 2, ಸೂಪರ್ ಗ್ಲೇಡಿಯೇಟರ್ 3
2ನೇ ರೇಸ್: ಡಾ.ಲೋಗನ್ 1, ಎಸ್‌ರಾಸ್ 3, ದಿ ರೆಸ್ಪಾನ್ಸ್ 2
3ನೇ ರೇಸ್: ಕ್ಲಾಸಿಕ್ ಚಾರ್ಮ್ 7, ಸೀ ಮೈ ಹೀಲ್ಸ್ 10, ಕಾಪರ್ ಸನ್‌ರೈಸ್ 12
4ನೇ ರೇಸ್: ಎಟೋಶಾ 8, ರೂಲಿಂಗ್ ಗಾಡೆಸ್ 2, ಟ್ಯಾಕ್ಟಿಕಲ್ ಕಮಾಂಡ್ 3
5ನೇ ರೇಸ್: ಸ್ಟ್ರಿಬ್ಲಿಂಗ್ ಹಾಪ್ಪರ್ 3, ರೆಮಾಂಟಾಯರ್ 5, ಮೆಷರ್ ಆಫ್ ಟೈಮ್ 1
6ನೇ ರೇಸ್: ಡಿವೈನ್ ರೇ 4, ಅಗಾಸ್ತೊ 2, ಫೋರ್ಸ್ ಅಸಾಲ್ಟ್ 5

ಉತ್ತಮ ಬೆಟ್: ಸ್ಟ್ರಿಬ್ಲಿಂಗ್ ಹಾಪ್ಪರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಮಹಿಳಾ ವಿಶ್ವಕಪ್ ಕ್ರಿಕೆಟ್: ಆತಿಥೇಯ ಕಿವೀಸ್‌ಗೆ ನಿರಾಶೆ

ದಕ್ಷಿಣ ಆಫ್ರಿಕಾ ಅಜೇಯ ಓಟ

ಹ್ಯಾಮಿಲ್ಟನ್ (ಪಿಟಿಐ): ಅಜೇಯ ಓಟ ಮುಂದುವರಿಸಿದ ದಕ್ಷಿಣ ಆಫ್ರಿಕಾ ತಂಡವು ಮಹಿಳೆಯರ ಏಕದಿನ ವಿಶ್ವ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆತಿಥೇಯ ನ್ಯೂಜಿಲೆಂಡ್ ತಂಡದ ವಿರುದ್ಧ ಜಯಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಲಾರಾ ವಾಲ್ವರ್ಡಿಟ್ (67; 94ಎ, 4X6) ಮತ್ತು ಸುನಿ ಲಯುಸ್ (51; 73ಎ, 4X4) ದಕ್ಷಿಣ ಆಫ್ರಿಕಾ ತಂಡ 2 ವಿಕೆಟ್‌ಗಳಿಂದ ಕಿವೀಸ್ ಬಳಗವನ್ನು ಮಣಿಸಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡಕ್ಕೆ ಶಬ್ನಿಮ್ ಇಸ್ಮಾಯಿಲ್ (27ಕ್ಕೆ3) ಮತ್ತು ಅಯಾಬೊಂಗಾ ಖಾಕಾ (31ಕ್ಕೆ3) ಅವರ ಬೌಲಿಂಗ್ ಮುಂದೆ ದೊಡ್ಡ ಮೊತ್ತ ಕಲೆಹಾಕಲು ಸಾಧ್ಯವಾಗಲಿಲ್ಲ. 47.5 ಓವರ್‌ಗಳಲ್ಲಿ 228 ರನ್ ಗಳಿಸಿತು.

ಕಿವೀಸ್ ತಂಡದ ನಾಯಕ ಸೋಫಿ ಡಿವೈನ್ (93;101ಎ, 4X12, 6X1) ಮತ್ತು ಅಮೆಲಿಯಾ ಕೆರ್ (42; 58ಎ) ಅವರಿಬ್ಬರ ಬ್ಯಾಟಿಂಗ್ ಗಮನ ಸೆಳೆಯಿತು. ಅದಕ್ಕುತ್ತರವಾಗಿ 49.3 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 229 ರನ್‌ಗಳನ್ನು ಗಳಿಸಿತು.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಪಾಯಿಂಟ್ಸ್	ನೆಟ್ ರನ್‌ರೇಟ್
ಆಸ್ಟ್ರೇಲಿಯಾ	4	4	0	8	+1.744
ದ.ಆಫ್ರಿಕಾ	4	4	0	8	+0.226
ಭಾರತ	4	2	2	4	+0.632
ನ್ಯೂಜಿಲೆಂಡ್	5	2	3	4	-0216
ವೆಸ್ಟ್ ಇಂಡೀಸ್	4	2	2	4	-1.233
ಇಂಗ್ಲೆಂಡ್	4	1	3	2	+0.351
ಬಾಂಗ್ಲಾದೇಶ	3	1	2	2	-0.477
ಪಾಕಿಸ್ತಾನ	4	0	4	0	-0.996

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 47.5 ಓವರ್‌ಗಳಲ್ಲಿ 238 (ಸೋಫಿ ಡಿವೈನ್ 93, ಅಮೆಲಿಯಾ ಕೆರ್ 42, ಶಬ್ನಿಮ್ ಇಸ್ಮಾಯಿಲ್ 27ಕ್ಕೆ3, ಅಯಬೊಂಗಾ ಖಾಕಾ 31ಕ್ಕೆ3) ದಕ್ಷಿಣ ಆಫ್ರಿಕಾ: 49.3 ಓವರ್‌ಗಳಲ್ಲಿ 8ಕ್ಕೆ229 (ಲಾರಾ ವಾಲ್ವಾರ್ಟ್ 67, ಸುನಿ ಲುಯಸ್ 51, ಅಮೆಲಿಯಾ ಕೆರ್ 50ಕ್ಕೆ3) ಫಲಿತಾಂಶ: ದಕ್ಷಿಣ ಆಫ್ರಿಕಾಗೆ 2 ವಿಕೆಟ್‌ಗಳ ಜಯ

ಶುಕ್ರವಾರದ ಪಂದ್ಯ: ಬಾಂಗ್ಲಾದೇಶ-ವೆಸ್ಟ್ ಇಂಡೀಸ್

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಸಾತ್ವಿಕ್–ಚಿರಾಗ್ ರೆಡ್ಡಿ ಜೋಡಿಗೆ ಗೆಲುವು

ಕ್ವಾರ್ಟರ್ ಫೈನಲ್‌ಗೆ ಲಕ್ಷ್ಯ ಸೇನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ವಿಶ್ವ ಶ್ರೇಯಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಡೆನ್ಮಾರ್ಕ್‌ನ ಆ್ಯಂಡರ್ಸ್ ಅಂಟೊನ್ಸೆನ್‌ಗೆ 21–16, 21–18ರಲ್ಲಿ ಗುರುವಾರ ಲಕ್ಷ್ಯ ಆಘಾತ ನೀಡಿದರು.

ಪುರುಷರ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ ಜೋಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್, ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ.ಸಿಂಧು ಮತ್ತು ಸೈನಾ ನೆಹ್ವಾಲ್ ಸೋರು ಹೊರಬಿದ್ದರು.

ಉತ್ತರಾಖಂಡದ ಅಲ್ಮೋರಾದ



ಲಕ್ಷ್ಯ ಸೇನ್ –ಎಎಫ್‌ಪಿ ಚಿತ್ರ

ಲಕ್ಷ್ಯ ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಆ್ಯಂಡರ್ಸ್ ವಿರುದ್ಧದ ಪಂದ್ಯದಲ್ಲಿ ಅವರು ನಿಖರ ಸರ್ವ್‌ಗಳು ಮತ್ತು ಸ್ಮ್ಯಾಷ್‌ಗಳನ್ನು ಪ್ರಯೋಗಿಸಿದರು. ರ‍್ಯಾಲಿಗಳಲ್ಲಿ ಅಮೋಘ ಸಾಮರ್ಥ್ಯ ತೋರಿದರು. ಲಕ್ಷ್ಯ ಎಂಟರ ಘಟ್ಟದಲ್ಲಿ ಹಾಂಕಾಂಗ್‌ನ ಎನ್‌ಜಿ ಕಾ ಲಾಂಗ್ ಆ್ಯಂಗಸ್ ಅಥವಾ ಚೀನಾದ ಲು ಗುವಾಂಗ್ ಝು ಅವರಲ್ಲಿ ಒಬ್ಬರನ್ನು ಎದುರಿಸಲಿದ್ದಾರೆ.

ಸಿಂಧು, ಸೈನಾಗೆ ನಿರಾಶೆ: ಮಹಿಳೆಯರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಭಾರತದ ಸೈನಾ ನೆಹ್ವಾಲ್ 14–21, 21–17, 17–21ರಿಂದ ಜಪಾನಿನ ಅಕಾನೆ ಯಾಮಗುಚಿ ವಿರುದ್ಧ ಸೋತರು. 50 ನಿಮಿಷ ನಡೆದ ಈ ಹಣಾಹಣಿಯಲ್ಲಿ ಸೈನಾ ದಿಟ್ಟ ಹೋರಾಟ ಮಾಡಿದರು. ಆದರೆ ಎರಡನೇ ಶ್ರೇಯಾಂಕದ ಅಕಾನೆ ತಕ್ಕ ತಿರುಗೇಟು ನೀಡಿ ಗೆದ್ದರು.

ಪಿ.ವಿ.ಸಿಂಧು ಅವರು 19–21, 21–16, 17–21ರಲ್ಲಿ ಟಕಹಾಶಿಗೆ ಮಣಿದರು.

ಪುರುಷರ ವಿಭಾಗದಲ್ಲಿ ಕಿದಂಬಿ ಶ್ರೀಕಾಂತ್ 21–9, 18–21, 19–21ರಲ್ಲಿ ಇಂಡೋನೇಷ್ಯಾದ ಆ್ಯಂಟನಿ ಸಿನಿಸುಕ ಜಿಂಟಿಂಗ್‌ಗೆ ಮಣಿದರು.

ಅಂಧರ ಕ್ರಿಕೆಟ್ ಟೂರ್ನಿ: ಭಾರತ–ಪಾಕಿಸ್ತಾನ ಫೈನಲ್

ದುಬೈ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ತಂಡಗಳು ಇಲ್ಲಿ ನಡೆಯುತ್ತಿರುವ ಅಂಧರ ತ್ರಿಕೋನ ಟ್ವೆಂಟಿ20 ಸರಣಿಯ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಗುರುವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ 63 ರನ್‌ಗಳ ಜಯ ಗಳಿಸುವ ಮೂಲಕ ಭಾರತ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿತು.ಆರಂಭಿಕ ಬ್ಯಾಟರ್ ಡಿ.ವೆಂಕಟೇಶ್ವರ ರಾವ್ ಅವರ ಅಮೋಘ ಅರ್ಧಶತಕ (91 ಎಸೆತಗಳಲ್ಲಿ 62 ರನ್) ಭಾರತದ ಜಯದಲ್ಲಿ ಪ್ರಮುಖ ಪಾತ್ರವಹಿಸಿತು. ಒಂಬತ್ತು ಬೌಂಡರಿಗಳೊಂದಿಗೆ ಮಿಂಚಿದ ರಾವ್ ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಭಾರತ 2 ವಿಕೆಟ್‌ಗಳಿಗೆ 185 ರನ್ ಗಳಿಸಿತು. ಗುರಿ ಬೆನ್ನತ್ತಿದ ಬಾಂಗ್ಲಾದೇಶಕ್ಕೆ 6 ವಿಕೆಟ್ ಕಳೆದುಕೊಂಡು 122 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಇದೇ 19ರಂದು ಫೈನಲ್ ಪಂದ್ಯ ನಡೆಯಲಿದೆ.



ಜಿ.ಡಿ. ಭಟ್ಟ



ಜೆ. ನೀಲಕಂಠ

ದೇಹದಾರ್ಢ್ಯ ಸಂಸ್ಥೆ ನೀಲಕಂಠ ಅಧ್ಯಕ್ಷ

ಕುಮಟಾ: ಕರ್ನಾಟಕ ರಾಜ್ಯ ದೇಹದಾರ್ಢ್ಯ ಸಂಸ್ಥೆಯ ಅಧ್ಯಕ್ಷರಾಗಿ ರಾಷ್ಟ್ರೀಯ ತೀರ್ಪುಗಾರ ಬೆಂಗಳೂರಿನ ಜೆ. ನೀಲಕಂಠ ಆಯ್ಕೆಯಾಗಿದ್ದಾರೆ.

ನಂಜನಗೂಡಿನಲ್ಲಿ ನಡೆದ ಸಂಸ್ಥೆಯ ವಾರ್ಷಿಕ ಮಹಾಸಭೆಯಲ್ಲಿ ಈ ಆಯ್ಕೆ ನಡೆಯಿತು. ಉತ್ತರ ಕನ್ನಡ ಜಿಲ್ಲೆ ಕುಮಟಾದ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ. ಜಿ.ಡಿ. ಭಟ್ಟ (ಕಾರ್ಯದರ್ಶಿ), ಅಂತರರಾಷ್ಟ್ರೀಯ ತೀರ್ಪುಗಾರ ಬೆಳಗಾವಿಯ ಅಜಿತ್ ಸಿದ್ದಣ್ಣನವರ (ಕಾರ್ಯಾಧ್ಯಕ್ಷ) ಹಾಗೂ ರಾಷ್ಟ್ರೀಯ ತೀರ್ಪುಗಾರ ಮಂಗಳೂರಿನ ದಿಲೀಪ್ ಕುಮಾರ (ಖಜಾಂಚಿ) ಆಯ್ಕೆಯಾದರು ಎಂದು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೀರಾಬಾಯಿಗೆ ಅಮೆರಿಕದಲ್ಲಿ ತರಬೇತಿ

ನವದೆಹಲಿ (ಪಿಟಿಐ): ಭಾರತದ ವೇಟ್ ಲಿಫ್ಟರ್, ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಮೀರಾಬಾಯಿ ಚಾನು ಅವರು ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್‌ಗಾಗಿ ಅಮೆರಿಕದಲ್ಲಿ ಅಭ್ಯಾಸ ನಡೆಸಲಿದ್ದಾರೆ. ಈ ವಾರ ಆರಂಭವಾಗಲಿರುವ ಅಭ್ಯಾಸ ಒಂದು ತಿಂಗಳು ಪೂರ್ತಿ ನಡೆಯಲಿದೆ.

ಮೀರಾಬಾಯಿ ಅವರಿಗೆ ತರಬೇತಿ ನೀಡುವುದಕ್ಕಾಗಿ ಭಾರತ ವೇಟ್‌ಲಿಫ್ಟಿಂಗ್ ಕೋಚ್ ವಿಜಯ್ ಶರ್ಮಾ ಗುರುವಾರ ಅಮೆರಿಕಕ್ಕೆ ಪ್ರಯಾಣ ಮಾಡಿದ್ದಾರೆ. 'ನಾಲ್ಕರಿಂದ ಐದು ವಾರಗಳ ತರಬೇತಿಗೆ ಸಿದ್ಧತೆ ನಡೆದಿದೆ. ಈ ಅವಧಿ ಹೆಚ್ಚಾಗುವ ಸಾಧ್ಯತೆಯೂ ಇದೆ' ಎಂದು ಅವರು ಹೇಳಿದ್ದಾರೆ.

ಬಲಭುಜ ಮತ್ತು ಬೆನ್ನೆಲುಬಿನ ನೋವಿನಿಂದ ಬಳಲುತ್ತಿದ್ದದ್ದು ಮೀರಾ ಬಾಯಿ ಅವರ ಸ್ನ್ಯಾಚ್ ಸಾಧನೆಗೆ ಅಡ್ಡಿಯಾಗಿತ್ತು. ಮಾಜಿ ವೇಟ್‌ಲಿಫ್ಟರ್, ಸ್ಟ್ರೆಂತ್ ಮತ್ತು ಕಂಡಿಷನಿಂಗ್ ಕೋಚ್ ಅಮೆರಿಕದ ಆ್ಯರನ್ ಹಾರ್ಶಿಗ್ ಅವರು ಈ ಸಮಸ್ಯೆಯನ್ನು ಪರಿಹರಿಸಿದ್ದಾರೆ.

ಐವರಿಗೆ ವಿಸಾ ಸಮಸ್ಯೆ: ಚಾನು ಅವರ ಜೊತೆ ಇತರ ಐವರು ವೇಟ್‌ಲಿಫ್ಟರ್‌ಗಳು ಕೂಡ ತರಬೇತಿಗೆ ಹಾಜರಾಗಬೇಕಾಗಿತ್ತು. ಆದರೆ ವಿಸಾ ಸಮಸ್ಯೆಯಿಂದಾಗಿ ಅವರ ಪ್ರಯಾಣ ಇನ್ನೂ ನಿಗದಿಯಾಗಲಿಲ್ಲ. ಜೆರೆಮಿ ಲಾಲ್‌ರಿನ್ನುವಾಂಗ, ಅಚಿಂತಾ ಶೆವುಲಿ, ಸಂಕೇತ್ ಸಾಗರ್, ಬಿಂದ್ಯಾರಾಣಿ ದೇವಿ ಮತ್ತು ಜಿಲಿ ದಲಬೆಹೆರ ಅವರು ವಿಸಾ ಸಮಸ್ಯೆ ಪರಿಹಾರಕ್ಕಾಗಿ ಕಾಯುತ್ತಿದ್ದಾರೆ.

ಜೂನಿಯರ್ ಮಹಿಳಾ ವಿಶ್ವಕಪ್ ಹಾಕಿ: ಸಲೀಮಾ ನಾಯಕಿ

ನವದೆಹಲಿ(ಪಿಟಿಐ): ಸಲೀಮಾ ಟೆಟೆ ಅವರನ್ನು ಭಾರತ ಜೂನಿಯರ್ ಮಹಿಳೆಯರ ತಂಡದ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ.

ಏಪ್ರಿಲ್ 1ರಿಂದ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್ ಟೂರ್ನಿ ಯಲ್ಲಿ ಸಲೀಮಾ ನಾಯಕತ್ವದ ತಂಡ ಆಡಲಿದೆ. ಹಾಕಿ ಇಂಡಿಯಾ ತಂಡವನ್ನೂ ಪ್ರಕಟಿಸಿದೆ.

ಡಿಫೆಂಡರ್ ಇಷಿಕಾ ಚೌಧರಿ ಅವರ ಹೆಗಲಿಗೆ ಉಪನಾಯಕಿಯಾಗಿ ಜವಾಬ್ದಾರಿಯನ್ನು ಹಾಕಿ ಇಂಡಿಯಾ ಹೊರಿಸಲಾಗಿದೆ.

ಹೋದ ವರ್ಷ ನಡೆದಿದ್ದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ಭಾರತ ಮಹಿಳೆಯರ ತಂಡದಲ್ಲಿ ಆಡಿದ್ದ ಶರ್ಮಿಳಾ ದೇವಿ ಮತ್ತು ಲಾಲ್‌ರೆಮ್ಸಿಯಾಮಿ ಅವರು ಕೂಡ ತಂಡದಲ್ಲಿದ್ದಾರೆ.

ತಂಡ ಇಂತಿದೆ:ಮಿಡ್‌ಫೀಲ್ಡರ್ಸ್: ಸಲೀಮಾ ಟೆಟೆ (ನಾಯಕಿ), ವೈಷ್ಣವಿ ವಿಠಲ್ ಫಾಲ್ಕೆ, ರೀತ್, ಅಜ್ಮಿನಾ ಕುಜುರ್, ಶರ್ಮಿಳಾದೇವಿ, ಲಾಲ್‌ರೆಮ್ಸಿಯಾಮಿ, ಬಲ್ಜೀತ್ ಕೌರ್.

ಡಿಫೆಂಡರ್ಸ್: ಮರಿನಾ ಲಾಲ್‌ರಮಂಗ್‌ಕಿ, ಪ್ರೀತಿ, ಪ್ರಿಯಾಂಕಾ, ಇಷಿಕಾ ಚೌಧರಿ (ಉಪನಾಯಕಿ), ಅಕ್ಷತಾ ಅಬ್ಲೊ ದೆಖಲೆ. **ಫಾರ್ವರ್ಡ್ಸ್:** ಲಾಲ್‌ರಿಂದಿಕಿ, ಜೀವನ್ ಕಿಶೋರಿ ಟೊಪ್ಪೊ, ಮುಮ್ತಾಜ್ ಖಾನ್, ಬ್ಯೂಟಿ ಡುಂಗ್‌ಡುಂಗ್, ದೀಪಿಕಾ, ಸಂಗೀತಾ ಕುಮಾರಿ, **ಗೋಲ್‌ಕೀಪರ್ಸ್:** ಬಿಚುದೇವಿ ಖರೀಬಮ್, ಖುಷ್ಬೂ **ಮೀಸಲು:** ಮಾಧುರಿ ಕಿಂಡೊ, ನೀಲಂ, ಮಂಜು ಚೌರಾಸಿಯಾ, ಖುತುಜಾ ಡಡಾಸೊ ಪಿಸಲ್, ಅನು.

ಫುಟ್‌ಬಾಲ್: ಲಿವರ್‌ಪೂಲ್‌ಗೆ ಜಯ

ಲಂಡನ್ (ಎಪಿ): ಆರ್ಸೆನಲ್ ವಿರುದ್ಧ ಏಕಪಕ್ಷೀಯ ಜಯ ಸಾಧಿಸಿದ ಲಿವರ್‌ಪೂಲ್ ತಂಡ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿಯತ್ತ ಹೆಜ್ಜೆ ಹಾಕಿದೆ. ಗುರುವಾರ ನಡೆದ ಪಂದ್ಯದಲ್ಲಿ ಲಿವರ್ ಪೂಲ್ 2–0ಯಿಂದ ಜಯ ಸಾಧಿಸಿತು. ಈ ಮೂಲಕ ಸತತ ಒಂಬತ್ತು ಪಂದ್ಯಗಳಲ್ಲಿ ಅಜೇಯವಾಗಿ ಉಳಿಯಿತು.

ಮೊದಲಾರ್ಧದಲ್ಲಿ ಉಭಯ ತಂಡಗಳಿಗೆ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಆದರೆ ಲಿವರ್ ಪೂಲ್ ದ್ವಿತೀಯಾರ್ಧದಲ್ಲಿ ಎರಡು ಗೋಲುಗಳನ್ನು ಗಳಿಸಿತು.

54ನೇ ನಿಮಿಷದಲ್ಲಿ ಡಿಯೊಗೊ ಜೋತಾ ಮತ್ತು 62ನೇ ನಿಮಿಷದಲ್ಲಿ ರಾಬರ್ಟೊ ಫಿರ್ಮಿನೊ ಚೆಂಡನ್ನು ಗುರಿ ಸೇರಿಸಿದರು.